Swabhimani Sahakari
Pages : 32 / 20₹

# ಸ್ವಾಭಿಮಾನಿ ಸಹಕಾರಿ

ಸ್ವಾಯತ್ತತೆ
ಸ್ವಯಂ ಆಡಳಿತ
ಸ್ವಯಂ ನಿಯಂತ್ರಣ
ನಮ್ಮ ಧ್ಯೇಯ

ಸೌಹಾರ್ದ ಸಹಕಾರಿ ಚಳುವಳಿಯ
ಅಭಿವೃದ್ಧಿಗೆ ಮೀಸಲಾಗಿರುವ ಏಕೈಕ ಮಾಸಪತ್ರಿಕೆ

Volume - 20
Issue - 11
November- 2023

## 70ನೇ ಅಖಿಲ ಭಾರತ ಸಹಕಾರ ಸಪ್ತಾಹ-2023

ಸಹಕಾರ ಸಪ್ತಾಹದ ಧ್ಯೇಯ:

**5 ಟ್ರಿಲಿಯನ್ ಡಾಲರ್ ಆರ್ಥಿಕತೆ ಸಾಧನೆಯಲ್ಲಿ ಸಹಕಾರ ಸಂಸ್ಥೆಗಳ ಪಾತ್ರ ಮತ್ತು ಸುಸ್ಥಿರ ಅಭಿವೃದ್ಧಿ ಗುರಿಗಳು**

ನವೆಂಬರ್ 14
ಸಹಕಾರ ವಲಯದಲ್ಲಿ ಇತ್ತೀಚಿನ ಬೆಳವಣಿಗೆಗಳು

ನವೆಂಬರ್ 15
ಸಾಲ ಮತ್ತು ಸಾಲೇತರ ಸಹಕಾರ ಸಂಘಗಳ ಪುನಃಶ್ಚೇತನ ಹಾಗೂ ಆರ್ಥಿಕ ಸೇರ್ಪಡೆ

ನವೆಂಬರ್ 16
ಸಹಕಾರಿ ಸಂಸ್ಥೆಗಳ ಡಿಜಿಟಲೀಕರಣಕ್ಕಾಗಿ ತಂತ್ರಜ್ಞಾನದ ಅಳವಡಿಕೆ ಮತ್ತು ಉನ್ನತೀಕರಣ

ನವೆಂಬರ್ 17
ಸಹಕಾರ ಸಂಸ್ಥೆಗಳಲ್ಲಿ ಸರಳ ವ್ಯಾಪಾರ ಪ್ರಕ್ರಿಯೆ ಮತ್ತು ಉದಯೋನ್ಮುಖ ವಲಯಗಳು

ನವೆಂಬರ್ 18
ಸಾರ್ವಜನಿಕ-ಖಾಸಗಿ-ಸಹಕಾರಿ ಸಹಭಾಗಿತ್ವವನ್ನು ಬಲಪಡಿಸುವುದು

ನವೆಂಬರ್ 19
ಮಹಿಳೆಯರು, ಯುವಜನರು ಮತ್ತು ದುರ್ಬಲ ವರ್ಗಗಳಿಗೆ ಸಹಕಾರಿ ಸಂಸ್ಥೆಗಳು

ನವೆಂಬರ್ 20
ಸಹಕಾರಿ ಶಿಕ್ಷಣ ಮತ್ತು ತರಬೇತಿಯ ಪರಿಷ್ಕರಣೆ







ನವೆಂಬರ್ 1
ಕನ್ನಡ ರಾಜ್ಯೋತ್ಸವ

ನವೆಂಬರ್ 14
ದೀಪಾವಳಿ

ಸೌಹಾರ್ದ ಸಹಕಾರಿಗಳ ಸಂಖ್ಯೆ : 6040

ಇ-ಸ್ಟಾಂಪಿಂಗ್ ಕೇಂದ್ರಗಳ ಸಂಖ್ಯೆ : 1558

ಸ್ವಾಭಿಮಾನಿ ಸಹಕಾರಿ





ಜಿ. ನಂಜನಗೌಡ

ರಾಜ್ಯದ ಎಲ್ಲಾ ಸೌಹಾರ್ದ ಸಹಕಾರಿಗಳಿಗೆ ಕನ್ನಡ ರಾಜ್ಯೋತ್ಸವದ, ಸಹಕಾರ ಸಪ್ತಾಹದ, ಮಕ್ಕಳ ದಿನಾಚರಣೆ, ದೀಪಾವಳಿ ಹಬ್ಬದ, ಗುರುನಾನಕ ಜಯಂತಿ ಹಾಗೂ ಕನಕದಾಸ ಜಯಂತಿಯ ಶುಭಾಶಯಗಳು. ದೀಪಾವಳಿ ದೀಪಗಳ ಹಬ್ಬ, ದೀಪದಿಂದ ದೀಪಗಳನ್ನು ಬೆಳಗಿಸುವಂತೆ, ವ್ಯಕ್ತಿಗಳು ತಮ್ಮ ಹೃದಯವಂತಿಕೆಯ ದೀಪವನ್ನು ಪ್ರತಿಯೊಬ್ಬರಲ್ಲೂ ಬೆಳಗಿಸುವ ಕಾರ್ಯವಾಗಲಿ, ಬಾಳು ಸುಖಮಯವಾಗಲಿ, ಶಾಂತಿ ನೆಮ್ಮದಿಯಿಂದ ಬಾಳುವಂತಾಗಲಿ ಎಂದು ಸಂಯುಕ್ತ ಸಹಕಾರಿಯು ಹಾರೈಸುತ್ತದೆ.

# ಶಾಸನಬದ್ಧ ಕಾರ್ಯಚಟುವಟಿಕೆಗಳನ್ನು ಅಚ್ಚುಕಟ್ಟಾಗಿ ನಿರ್ವಹಿಸಿ ಗುಣಮಟ್ಟವನ್ನು ಉತ್ತಮವಾಗಿಸಿಕೊಳ್ಳುವುದಕ್ಕೆ ಆದ್ಯತೆ ನೀಡುವುದು ಅಗತ್ಯ.

ರಾಜ್ಯದ ಎಲ್ಲಾ ಸೌಹಾರ್ದ ಸಹಕಾರಿಗಳಿಗೆ ಕನ್ನಡ ರಾಜ್ಯೋತ್ಸವದ, ಸಹಕಾರಿ ಸಪ್ತಾಹದ, ಮಕ್ಕಳ ದಿನಾಚರಣೆಯ, ದೀಪಾವಳಿ ಹಬ್ಬದ, ಗುರುನಾನಕ ಜಯಂತಿಯ ಹಾಗೂ ಕನಕದಾಸ ಜಯಂತಿಯ ಶುಭಾಶಯಗಳು. ದೀಪಾವಳಿ ದೀಪಗಳ ಹಬ್ಬ, ದೀಪದಿಂದ ದೀಪಗಳನ್ನು ಬೆಳಗಿಸುವಂತೆ, ವ್ಯಕ್ತಿಗಳು ತಮ್ಮ ಹೃದಯವಂತಿಕೆಯ ದೀಪವನ್ನು ಪ್ರತಿಯೊಬ್ಬರಲ್ಲೂ ಬೆಳಗಿಸುವ ಕಾರ್ಯವಾಗಲಿ, ಬಾಳು ಸುಖಮಯವಾಗಲಿ, ಶಾಂತಿ ನೆಮ್ಮದಿಯಿಂದ ಬಾಳುವಂತಾಗಲಿ ಎಂದು ಸಂಯುಕ್ತ ಸಹಕಾರಿ ಹಾರೈಸುತ್ತದೆ. ಅದೇ ರೀತಿ ಒಂದು ಸಹಕಾರಿಯು ಮತ್ತೊಂದು ಸಹಕಾರಿಯನ್ನು ಹುಟ್ಟು ಹಾಕುವಂತಾಗಬೇಕು. ಸಹಕಾರಿ ತತ್ವದ ಪ್ರಚಾರವಾಗಬೇಕು ಸಹಕಾರಿಗಳ ಗುಣಮಟ್ಟ ಹೆಚ್ಚಿಸುವ ಕಾರ್ಯಕ್ಕೆ ಈ ದೀಪಾವಳಿ ಪ್ರೇರಣೆಯಾಗಬೇಕು ಎಂದು ಆಶಿಸುತ್ತೇನೆ. ಕನ್ನಡ ರಾಜ್ಯೋತ್ಸವ ಎಲ್ಲ ಕನ್ನಡಿಗರ ಹೆಮ್ಮೆಯ ಆಚರಣೆ. ಕನ್ನಡ ನುಡಿ ನಾಡು ಭಾಷೆಯನ್ನು ರಕ್ಷಿಸುವ ಕನ್ನಡತನವನ್ನು ಬೆಳೆಸುವ ಜವಾಬ್ದಾರಿಯನ್ನು ಅಚ್ಚುಕಟ್ಟಾಗಿ ನಿಭಾಯಿಸೋಣ. ಸಂತ ಶ್ರೀ ಗುರುನಾನಕರು ಹಾಗೂ ಸಂತ ಶ್ರೀ ಕನಕದಾಸರು ಸಮಾಜಕ್ಕೆ ನೀಡಿದ ಸಂದೇಶಗಳನ್ನು ಅರಿತುಕೊಂಡು ಅವರು ತೋರಿದ ಸನ್ಮಾರ್ಗದಲ್ಲಿ ನಡೆಯುವ ಪ್ರಯತ್ನವನ್ನು ನಾವೆಲ್ಲ ಮಾಡೋಣ.

ಪ್ರಸಕ್ತ ಸೌಹಾರ್ದ ಸಹಕಾರಿಗಳ ಕಾರ್ಯಚಟುವಟಿಕೆಗಳ ಬಗ್ಗೆ ರಾಜ್ಯಾದಾದ್ಯಂತ ಉತ್ತಮ ಕಾರ್ಯನಿರ್ವಹಣೆಯ ಬಗ್ಗೆ ಹಲವಾರು ಶ್ಲಾಘನೆಗಳ ಜೊತೆಗೆ ಕೆಲವು ಸಹಕಾರಿಗಳಲ್ಲಿ ಆಗಿರುವ ಮೋಸ ವಂಚನೆ, ಹಣದುರುಪಯೋಗಗಳ ಬಗ್ಗೆ ಹಲವಾರು ಟೀಕೆ ಟಿಪ್ಪಣಿಗಳೂ ಬರುತ್ತಿರುವುದನ್ನು ತಾವುಗಳು ಗಮನಿಸಿರಬಹುದು. ಈ ಕ್ಷೇತ್ರದ ಕಾರ್ಯಚಟುವಟಿಕೆಗಳನ್ನು ಗಮನಿಸಿಯೇ ಸರಕಾರ, ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ಹಾಗೂ 1997ರ ಕರ್ನಾಟಕ ಸೌಹಾರ್ದ ಸಹಕಾರಿ ಕಾಯ್ದೆ ತಿದ್ದುಪಡಿಗಳಿಗಾಗಿ ಸಮಿತಿಯೊಂದನ್ನು ರಚಿಸಿರುವುದು ತಮ್ಮೆಲ್ಲರಿಗೂ ತಿಳಿದಿದೆ ಎಂದು ಭಾವಿಸಿದ್ದೇನೆ. ಸರಕಾರದಲ್ಲಿ ಸೌಹಾರ್ದ ಸಹಕಾರಿಗಳ ಶಾಸನಾತ್ಮಕ ಕಾರ್ಯಚಟುವಟಿಕೆಗಳನ್ನು ಅಚ್ಚುಕಟ್ಟಾಗಿ ನಿರ್ವಹಿಸದಿರುವ ಬಗ್ಗೆ ಹಣಕಾಸಿನ ಶಿಸ್ತು ಪಾಲಿಸದಿರುವ ಬಗ್ಗೆ ಹೆಚ್ಚಿನ ಚರ್ಚೆಗಳು ನಡೆಯುತ್ತಿರುವುದ-ರಿಂದ ಸೌಹಾರ್ದ ಸಹಕಾರಿಗಳು ಪ್ರತಿಯೊಂದು ಹಂತದಲ್ಲಿ ಎಚ್ಚರಿಕೆಯ ಹೆಜ್ಜೆಯನ್ನು ಇಡಬೇಕಾಗುತ್ತದೆ. ಇದನ್ನು ಸೌಹಾರ್ದ ಸಹಕಾರಿಗಳಾದ ನಾವೆಲ್ಲರೂ ಮಹತ್ವದ ಸವಾಲಾಗಿ ಸ್ವೀಕರಿಸಿ ಕಾರ್ಯನಿರ್ವಹಿಸುತ್ತಿದ್ದೇವೆ ಎಂಬುದನ್ನು ಗಮನಿಸಲು ವಿನಂತಿಸುತ್ತೇನೆ. ಸೌಹಾರ್ದ ಸಹಕಾರಿ ಕಾಯ್ದೆಯಡಿಯಲ್ಲಿ ನಮಗೆ ನೀಡಿರುವ ಸ್ವಾಯತ್ತತೆಗೆ, ಕಾಯ್ದೆಯ ಆಶಯಕ್ಕೆ ಧಕ್ಕೆ ಬಾರದಂತೆ, ಸಾರ್ವಜನಿಕರ, ಸರಕಾರದ ಹಾಗೂ ಸಹಕಾರಿಗಳ ವಿಶ್ವಾಸಾರ್ಹತೆಯನ್ನು ಹೆಚ್ಚಿಸುವುದಕ್ಕಾಗಿ ಶಾಸನಾತ್ಮಕವಾಗಿ ಹಾಗೂ ಹಣಕಾಸಿನ ಶಿಸ್ತು ನಿಯಮಗಳನ್ನು ಮೀರದ ಹಾಗೆ ಕಾರ್ಯನಿರ್ವಹಿಸಲು ಬದ್ಧರಾಗೋಣ ಹಾಗೂ ಸೌಹಾರ್ದ ಸಹಕಾರಿ ಕ್ಷೇತ್ರವನ್ನು ಬಲಪಡಿಸೋಣ. ಈ ನಿಟ್ಟಿನಲ್ಲಿ ಸಂಯುಕ್ತ ಸಹಕಾರಿಯ ಪ್ರಯತ್ನಗಳಿಗೆ ತಾವು ಸಹಕರಿಸಬೇಕೆಂದು ವಿನಂತಿಸುತ್ತೇನೆ.

**ಸ್ವಾಭಿಮಾನಿ ಸಹಕಾರಿ ಸಂಪಾದಕ ಮಂಡಳಿ**

ಶ್ರೀ ಜಿ. ನಂಜನಗೌಡ
ಗೌರವ ಅಧ್ಯಕ್ಷರು

ಶ್ರೀ ಎ.ಆರ್. ಪ್ರಸನ್ನಕುಮಾರ
ಗೌರವ ಸದಸ್ಯರು

ಶ್ರೀ ಶರಣಗೌಡ ಜಿ. ಪಾಟೀಲ
ಸಂಪಾದಕರು

ಶ್ರೀ ವಿ.ಜೆ. ಕಾರಕೂನ
ಸಂಚಾಲಕರು

ಶ್ರೀ ಮಹಾಂತಪ್ಪ ಎಸ್. ಎಮ್
ಸದಸ್ಯರು

**ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,**

"ಸೌಹಾರ್ದ ಸಹಕಾರಿ ಸೌಧ" ನಂ.68, ಒಂದನೇ ಮಹಡಿ, 17 & 18ನೇ ಅಡ್ಡರಸ್ತೆ ಮಧ್ಯೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560055

ದೂರವಾಣಿ/ ಫ್ಯಾಕ್ಸ್ :
080–23378375–80, 23474408,23573291

ಇ–ಮೇಲ್ : souharda@souharda.coop
swabhimani@souharda.coop

ವೆಬ್‌ಸೈಟ್ : www.souharda.coop

**ಒಳಪುಟಗಳಲ್ಲಿ. . .**

ಅಧ್ಯಕ್ಷರ ನುಡಿ.......................................... 2
ಸಂಪಾದಕೀಯ.......................................... 3
ಜ್ಞಾನ ಜ್ಯೋತಿ.......................................... 4
ಸಂಯುಕ್ತ ಸಹಕಾರಿಗಳ ಸಮಾಚಾರಗಳು .... .......................................... 05–15
ಸೌಹಾರ್ದ ಸಹಕಾರಿಗಳ ಸಮಾಚಾರಗಳು .... .......................................... 15–18
**ಲೇಖನಗಳು :**
Sustainable Development Goals : Retrospective Prospective. 19–21, 24
ಸೌಹಾರ್ದ ಸಹಕಾರಿಯಿಂದ ರಾಜ್ಯದಲ್ಲಿಯೇ ವಿಶಿಷ್ಟ ಚಟುವಟಿಕೆ ......................... 22–24
ಮಕ್ಕಳ ದಿನಾಚರಣೆಯ ಪ್ರಯುಕ್ತ ವಿಶೇಷ ಲೇಖನ ......................................... 25–26
ಸಣ್ಣದಾಗಿ ಆರಂಭಿಸಿ, ದೊಡ್ಡದಾಗಿ ಬೆಳೆಯಿರಿ – ಸ್ಟಾರ್ಟ್ ಅಪ್ ......................... 28–32

# ಸಂಪಾದಕೀಯ

## ಸಹಕಾರಿ ಸಪ್ತಾಹದ ಆಚರಣೆ ಅರ್ಥಪೂರ್ಣವಾಗಿರುವಂತೆ ಸಹಕಾರಿಗಳು ಹಾಗೂ ಅಧಿಕಾರಿಗಳು ಕಾರ್ಯನಿರ್ವಹಿಸಿ ಸಹಕಾರ ಸಂಸ್ಥೆಗಳಿಗೆ / ಸಾರ್ವಜನಿಕರಿಗೆ ಉತ್ತಮ ಸಂದೇಶ ನೀಡುವ ಅಗತ್ಯತೆ.

ಸಹಕಾರಿ ಸಪ್ತಾಹದ ಆಚರಣೆ ಅಂದರೆ ಸಹಕಾರಿ ತತ್ವಗಳ ಆಶಯ, ತತ್ವಗಳ ಅನುಷ್ಠಾನ ಸಮುದಾಯದ ಆರ್ಥಿಕ ಹಾಗೂ ಸಾಮಾಜಿಕ ಅಭಿವೃದ್ಧಿಗಾಗಿ ಪರಿಣಾಮಕಾರಿಯಾಗಿ ಪ್ರಚಾರ ನೀಡುವ ಕಾರ್ಯಕ್ರಮ. ಪ್ರತಿ ವರ್ಷವೂ ಈ ಸಪ್ತಾಹವನ್ನು ಆಚರಿಸಲಾಗುತ್ತದೆ. ಈ ಬಾರಿಯ ಸಪ್ತಾಹದ ಆಚರಣೆ 70ನೇಯ ಸಹಕಾರ ಸಪ್ತಾಹದ ಆಚರಣೆ. ಈ ಸಪ್ತಾಹದ ಆಚರಣೆಯನ್ನು ರಾಷ್ಟ್ರೀಯ ಸಹಕಾರಿ ಯೂನಿಯನ್ನಿನ ಮಾರ್ಗದರ್ಶನದಂತೆ ಪ್ರತಿಯೊಂದು ದಿನವನ್ನು ಸಹಕಾರಿ ಕ್ಷೇತ್ರದ ಒಂದೊಂದು ವಿಭಾಗದ ಅಭಿವೃದ್ಧಿಗಾಗಿ ಚಿಂತನ – ಮಂಥನ ಮಾಡಿ ಅಭಿವೃದ್ಧಿ ಕ್ರೀಯಾಯೋಜನೆಗಳನ್ನು ಸಿದ್ಧಪಡಿಸಿ ಮುಂಬರುವ ದಿನಗಳಲ್ಲಿ ಕಾರ್ಯರೂಪಕ್ಕೆ ತರುವುದಾಗಿದೆ.

ಸಪ್ತಾಹದ ಆಚರಣೆ ಕೇವಲ ಸಹಕಾರಿ ಮಹಾಮಂಡಳ, ಜಿಲ್ಲಾ ಒಕ್ಕೂಟ, ಸಂಯುಕ್ತ ಸಹಕಾರಿ ಹಾಗೂ ಜಿಲ್ಲಾ ಸೌಹಾರ್ದಗಳ ಒಕ್ಕೂಟಗಳಿಗೆ ಮೀಸಲಾಗಿರುವುದಿಲ್ಲ. ಬದಲಾಗಿ ರಾಜ್ಯದ ಎಲ್ಲ ವಿಭಾಗದ ಸಹಕಾರಿ ಸಂಸ್ಥೆಗಳು, ರಾಜ್ಯ ಮಟ್ಟದ ಸಹಕಾರಿ ಮಹಾಮಂಡಳಗಳು, ಜಿಲ್ಲಾ ಮಟ್ಟದ ಸಹಕಾರ ಸಂಸ್ಥೆಗಳು ಹಾಗೂ ಪ್ರಾಥಮಿಕ ವರ್ಗದ ಎಲ್ಲಾ ರೀತಿಯ ಸಹಕಾರ ಸಂಘಗಳು, ಮತ್ತು ಸರ್ಕಾರದ ಸಹಕಾರ ಇಲಾಖೆ ಸಹಕಾರ ವ್ಯವಸ್ಥೆ ಬಲಪಡಿಸುವುದರಿಂದ 70ನೇ ಸಹಕಾರ ಸಪ್ತಾಹದ ಮೂಲ ಧ್ಯೇಯ **"5 ಟ್ರಿಲಿಯನ್ ಡಾಲರ್ ಆರ್ಥಿಕತೆ ಸಾಧನೆಯಲ್ಲಿ ಸಹಕಾರ ಸಂಸ್ಥೆಗಳ ಪಾತ್ರ ಮತ್ತು ಸುಸ್ಥಿರ ಅಭಿವೃದ್ಧಿ ಗುರಿಗಳನ್ನು"** ಸಾಧಿಸುವಲ್ಲಿ ಸಹಕಾರಿಗಳ ಪಾತ್ರ ಹೆಚ್ಚಿಸುತ್ತದೆ ಹಾಗೂ ಈ ಸಪ್ತಾಹವನ್ನು ಅತ್ಯಂತ ಉತ್ಸಾಹದಿಂದ ಸಂಭ್ರಮದಿಂದ ಅರ್ಥಪೂರ್ಣವಾಗಿ ಆಚರಿಸಿ ಸಾರ್ವಜನಿಕರಲ್ಲಿ ಈ ಕ್ಷೇತ್ರದ ಬಗ್ಗೆ ಉತ್ತಮ ಭಾವನೆಗಳನ್ನು ಬಿತ್ತುವ ಕಾರ್ಯವಾಗಬೇಕು. ನಕಾರಾತ್ಮ ಭಾವನೆಗಳನ್ನು ತೊಲಗಿಸಬೇಕು

ಈ ಕಾರ್ಯದಲ್ಲಿ ಸಹಕಾರಿ ಕ್ಷೇತ್ರದಲ್ಲಿ ತೊಡಗಿಸಿಕೊಂಡಿರುವ ಸಹಕಾರಿಗಳ ಸಿಬ್ಬಂದಿ ವರ್ಗದವರು ಹಾಗೂ ಸಹಕಾರಿ ಇಲಾಖೆಯ ಅಧಿಕಾರಿಗಳು ಸೇರಿ ಒಂದಾಗಿ ಕಾರ್ಯಕ್ರಮಗಳ ರೂಪುರೇಷೆಯನ್ನು ಸಿದ್ಧಪಡಿಸಿ ಅನುಷ್ಠಾನಮಾಡುವುದು. ಯಾವುದೇ ಒಂದು ವಿಭಾಗದ ಜನರೂ ಅಸಹಕಾರ ತೋರಿದಲ್ಲಿ ಸಮಾಜಕ್ಕೆ ಸಾರ್ವಜನಿಕರಿಗೆ ಪ್ರತಿಕೂಲ ಸಂದೇಶ ರವಾನೆಯಾಗುತ್ತದೆ. ಸಹಕಾರಿ ಕ್ಷೇತ್ರದ ಬೆಳವಣಿಗೆಗೆ ಅನುಕೂಲಕರ ವಾತಾವರಣ ನಿರ್ಮಾಣವಾಗುವಂತೆ ಎಲ್ಲರೂ ಸೇರಿ ಈ ಸಪ್ತಾಹದ ಆಚರಣೆ ಆಗಬೇಕೆಂಬುದು ಸಂಯುಕ್ತ ಸಹಕಾರಿಯ ಆಶಯ. ಈ ಆಶಯದಂತೆ ಕಾರ್ಯನಿರ್ವಹಿಸುವುದು ಸಹಕಾರಿಗಳ ಹಾಗೂ ಅಧಿಕಾರಿಗಳ ಕರ್ತವ್ಯ ಹಾಗೂ ಜವಾಬ್ದಾರಿಯೂ ಆಗಬೇಕು.

ಸಹಕಾರಿ ಕ್ಷೇತ್ರ ತಮ್ಮೆಲ್ಲರಿಗೆ ತಿಳಿದಂತೆ ಸಮಾಜದ ಕಟ್ಟ ಕಡೆಯ ವ್ಯಕ್ತಿಯ ಆರ್ಥಿಕ ಹಾಗೂ ಸಾಮಾಜಿಕ ಬೆಳವಣಿಗೆಗೆ ಒಂದು ಉತ್ತಮ ಸಾಧನ. ಸಮಗ್ರ ಸಮುದಾಯದ ಆರ್ಥಿಕ ಹಾಗೂ ಸಾಮಾಜಿಕ ಅಭಿವೃದ್ಧಿಗೆ ಈ ಸಹಕಾರಿ ಕ್ಷೇತ್ರದ ಕೊಡುಗೆ ಅಪಾರ. ಇದು ಆರ್ಥಿಕ ಅಭಿವೃದ್ಧಿಯ ಚಳುವಳಿ. ಇದು ಮುಂದುವರೆಯಬೇಕು ಬಲವಾಗಿ ಸದೃಡವಾಗಬೇಕು. ಇದಕ್ಕಾಗಿ ಸಾರ್ವಜನಿಕರು ಸಹಕಾರ ಕ್ಷೇತ್ರವನ್ನು ಬಳಸಿಕೊಳ್ಳಬೇಕು. ಅದರಂತೆ ಸಹಕಾರ ವ್ಯವಸ್ಥೆ ಬೆಳೆಯಬೇಕು ಮತ್ತು ಬಲಿಷ್ಟವಾಗಬೇಕು. ಈ ಕ್ಷೇತ್ರದ ಬಗ್ಗೆ ನಕಾರಾತ್ಮಕ ಭಾವನೆಗಳು ಹೋಗಿ ಸಕಾರಾತ್ಮಕ ಭಾವನೆಗಳನ್ನು ಬೆಳೆಸುವಲ್ಲಿ ಈ ಸಹಕಾರ ಸಪ್ತಾಹದ ಆಚರಣೆ ಅರ್ಥಪೂರ್ಣವಾಗಿರಲಿ ಎಂಬುವುದು ನನ್ನ ಬಯಕೆ.



# ಜ್ಞಾನ ಜ್ಯೋತಿ

– ಶ್ರೀ ಸಿದ್ದೇಶ್ವರ ಸ್ವಾಮೀಜಿ, ವಿಜಯಪುರ
ಪ್ರವಚನ ಸಂಗ್ರಹ : ಶ್ರೀ ಶಂಕರ ಎಸ್.

## "ಚಿಂತೆ – ನಿಶ್ಚಿಂತೆ"

ಭಗವದ್ಗೀತೆ ಒಂದು ಪವಿತ್ರ ಆಧ್ಯಾತ್ಮಿಕ ಹೊತ್ತಿಗೆ, ಇದು ಎರಡು ಸಾವಿರ ವರ್ಷಗಳ ಹಿಂದೆ ರಚಿಸಲ್ಪಟ್ಟ ಒಂದು ಜ್ಞಾನ ಭಂಡಾರ, ಇದು ಕೇವಲ ಭಾರತೀಯರಿಗೆ ಮಾತ್ರ ಸೀಮಿತವಾಗಿಲ್ಲ. ಅಲ್ಯಾಕ್ಸ್ ಎಂಬ ಯೂರೋಪಿಯನ್ ಸಾಹಿತಿ ಭಗವದ್ಗೀತೆ ಕುರಿತು " It is for man kind" ಎಂದು ಹೇಳಿದ್ದಾರೆ. ಇದು ಕೇವಲ ನಿರ್ದಿಷ್ಟ ಜಾತಿ ಜನಾಂಗಗಳಿಗೆ ಸಂಬಂಧಿಸಿರದೆ, ಇಡೀ ಮನುಕುಲಕ್ಕೆ ಸಂಬಂಧಿಸಿದ್ದಾಗಿದೆ. ಮನುಕುಲಕ್ಕೆ ಬೇಕಾದದ್ದು ಸಂತಸದಿಂದ ಬದುಕುವುದು, ಅದು ಈ ಗ್ರಂಥದಲ್ಲಿದೆ.

ಕೆಲವು ಸಲ ಮನುಷ್ಯ ಆರೋಗ್ಯ, ಐಶ್ವರ್ಯಗಳೆಲ್ಲವನ್ನು ಹೊಂದಿದ್ದರೂ, ಚಿಂತೆ ಅವನ ಮನಸ್ಸನ್ನು ತುಂಬಿಬಿಡುತ್ತದೆ. ಆದರೆ ಮನುಷ್ಯ ನಿಶ್ಚಿಂತೆಯಿಂದ ಇರುವುದನ್ನು ಕಲಿಯಬೇಕು. ಮಾನವ ಜೀವನ ಒಂದು ಯುದ್ಧ, ಅವನ ಜೀವನದಲ್ಲಿ ಕಾಲವು ಕ್ರೀಡೆಯಾಡುತ್ತದೆ. ಇಡೀ ಜಗತ್ತೇ ಕಾಲದ ಲೀಲಾವಿಲಾಸವಾಗಿದೆ. ಜಗತ್ತಿನ ಎಲ್ಲ ವಸ್ತುಗಳನ್ನು ಕಾಲ ಸ್ಪರ್ಶಿಸುತ್ತದೆ. ಕಾಲದಿಂದ ಅತೀತರಾದವರು, ಅದನ್ನು ಗೆದ್ದವರು ಯಾರೂ ಇಲ್ಲ. ಹೀಗಿದ್ದಾಗ ಚಿಂತೆಯೇಕೆ ? ಆಗುವುದು ಆಗುವುದೇ ಇದ್ದಾಗ ಚಿಂತೆಯೇಕೆ? ಮನುಷ್ಯ ಎಲ್ಲ ಕಲಿತರೂ ನಿಶ್ಚಿಂತೆಯಿಂದ ಇರುವುದನ್ನು ಕಲಿಯಲಿಲ್ಲ. ಏಕೆ ?

ಚಿಂತೆಯನ್ನು ಹೊರಗೆ ತೆಗೆಯುವುದೇ ಅಧ್ಯಾತ್ಮ, ಮನುಷ್ಯನ ಮನಸ್ಸು ಒಂದು ರೀತಿಯ ಮರೆವಿನಿಂದ ಮುಚ್ಚಿಹೋಗಿರುತ್ತದೆ. ಯಾವಾಗಲೂ ಚಿಂತೆ, ಸಂತೋಷದಿಂದಿರುವುದು ಗಮನಕ್ಕೆ ಬರುವುದಿಲ್ಲ. ಮನುಷ್ಯನೇ ಏಕೆ ಚಿಂತೆ ಮಾಡುತ್ತೀ? ಯಾವ ವಸ್ತುಗಳಿಗಾಗಿ ದುಃಖಿಸಬಾರದೋ ಅವುಗಳಿಗಾಗಿ ಏಕೆ ದುಃಖಿಸುತ್ತೀ ? ಯಾವ ವಸ್ತುಗಳಿಗಾಗಿ ದುಃಖಿಸಬಾರದೋ ಅವುಗಳಿಗಾಗಿ ಏಕೆ ದುಃಖಿಸುತ್ತೀ ? ಜಗತ್ತಿನಲ್ಲಿ ವಸ್ತುಗಳು ಹೋಗುತ್ತವೆ – ಬರುತ್ತವೆ. ಬಂದವುಗಳೆಲ್ಲ ಹೋಗಲೇಬೇಕು, ದೇವರು ಕೊಟ್ಟ ಎಲ್ಲವೂ ಎಲ್ಲ ಮನುಷ್ಯರಿಗೂ ಸಿಗುವುದಿಲ್ಲ. ಅರ್ಥಾತ್ ಎಲ್ಲ ಮನುಷ್ಯರಿಗೂ ಎಲ್ಲವೂ ಇರುವುದಿಲ್ಲ. ಇರಲಾರದ ಬಗ್ಗೆ ಚಿಂತೆ ಮಾಡಿದರೆ ಹೇಗೆ? ಚಿಂತೆಯಿಂದ ಮನುಷ್ಯನ ಶಾಂತಿಗೆ ಭಂಗ ಬರುತ್ತದೆ. ಮನುಷ್ಯ ಚಿಂತೆ ಮಾಡಬೇಕು, ಆದರೆ ಆ ಚಿಂತೆ ಚಿಂತೆಯನ್ನು ಹೇಗೆ ಕಡಿಮೆ ಮಾಡಿಕೊಳ್ಳಬೇಕು ಎಂಬುದಾಗಿರಬೇಕು. ಎಂದರೆ ಚಿಂತೆಯು ಚಿಂತನದ ರೂಪ ತಳೆಯಬೇಕು.

ಮಾನವ ಜೀವನದಲ್ಲಿ ಏಳು ಬೀಳೂಗಳು ಸಹಜ. ಬೀಳೋದು ಕೆಟ್ಟದು ಅಲ್ಲ. ಆದರೆ ಏಳಬೇಕು, ಅನ್ನೋದು ಮನಸ್ಸಿನಲ್ಲಿರಬೇಕು. ಕೈ ಹೊಲಸಾದರೆ ಕೆಟ್ಟದಲ್ಲ. ಆದರೆ ಕೈತೊಳೆಯಬೇಕೆನ್ನುವುದು ಇರದಿದ್ದರೆ ಅದು ಕೆಟ್ಟದ್ದು, ಮನುಷ್ಯ ನಿಶ್ಚಿಂತೆಯಿಂದಿರಲು 'ಗೀತೆ' ಓದಬೇಕು. ಗೀತೆ ಇದು ಹೃದಯದ ಹಾಡು, ಅದು ಮನುಷ್ಯನ ಹೃದಯವನ್ನು ಅರಳಿಸುತ್ತದೆ. ಮನುಷ್ಯನ ಚಿಂತೆಯನ್ನು ಕಡಿಮೆ ಮಾಡುತ್ತದೆ. ಜಗತ್ತಿನಲ್ಲಿ ಚಿಂತೆಯಿರುವ ಎಲ್ಲರಿಗೂ ಈ ಗೀತೆ ಅನ್ವಯಿಸುತ್ತದೆ. ಮನುಷ್ಯ ಯಾವಾಗಲೂ ನಗುನಗುತ್ತಾ ಇರಬೇಕು. ಗಂಭೀರವಾಗಿರಬಾರದು. ತನಗಾದ ಸಂತಸವನ್ನು ವ್ಯಕ್ತಪಡಿಸಬೇಕು. ಜೀವನ ತರತರಿತವಾಗಿರಬೇಕು. ಒಂದು ಝರಿ ನದಿ ಸೇರುವವರೆಗೂ ಹೇಗೆ ಆನಂದದಿಂದ ಜುಳು ಜುಳು ಹರಿಯುತ್ತದೆಯೋ ಅದೇ ರೀತಿ ಮನುಷ್ಯನೂ ನಿರಂತರವಾಗಿ ಸಂತೋಷದಿಂದ ಇರಬೇಕು.

ಮನುಷ್ಯ ನಿಶ್ಚಿಂತೆಯಿಂದ ಇರಬೇಕಾದರೆ ಏನು ಮಾಡಬೇಕು? ಆಸೆಯ ಪಾತ್ರೆ ತುಂಬಿದ ಬಳಿಕವೇ ನಿಶ್ಚಿಂತೆ ಎಂದರೆ ಅದು ಸಾಧ್ಯವಿಲ್ಲ. ಏಕೆಂದರೆ ಷರತ್ತುಗಳೊಂದಿಗೆ ನಿಶ್ಚಿಂತೆ ಸಾಧ್ಯವಿಲ್ಲ. ಹಾಗಾದರೆ ನಿಶ್ಚಿಂತೆಯಿಂದ ಇರುವುದು ಹೇಗೆ ? ಅದಕ್ಕೆ ಒಂದು ಬೇರೆ ಮಾರ್ಗವಿದೆ. ಜೀವನವು ಒಂದು ಯುದ್ಧರಂಗ, ಇಲ್ಲಿ ಯಾರಿಗೂ ಸುಮ್ಮನೆ ಕೊಡಲಿಕ್ಕೆ ಆಗುವುದಿಲ್ಲ. ಬಯಸಲಿ, ಬಯಸದೆ, ಇರಲಿ ಎಲ್ಲರಿಗೂ ಹೋರಾಟ ಅನಿವಾರ್ಯ. ಇಲ್ಲಿ ಸಾವು, ಸೋಲು ಇರುವುದೇ, ಅವುಗಳಿಂದ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ. ಅವೆಲ್ಲವುಗಳ ಜೊತೆಯಲ್ಲಿಯೇ ನಿಶ್ಚಿಂತೆಯಿಂದ ಇರುವುದನ್ನು ಕಲಿಯಬೇಕು.

ಜಗತ್ತಿನಲ್ಲಿ ನಿಶ್ಚಿಂತೆಯಿಂದ ಇರಲು ಏನು ಮಾಡಬೇಕು? ಈ ಪ್ರಶ್ನೆಗೆ ಉತ್ತರವನ್ನು ಜಗತ್ತಿನಲ್ಲಿ ಪ್ರತಿಯೊಬ್ಬರೂ ಬಯಸುತ್ತಾರೆ. ಇದಕ್ಕಾಗಿ ಸ್ವಲ್ಪ ಅರಿತವರಿಂದ ಕೇಳಬೇಕು. ಅರಿತು ಹೇಳುವ ಗುರು, ಅರಿಯುವುದಕ್ಕಾಗಿ ಕೇಳುವ ಶಿಷ್ಯ ಇದ್ದಾಗ ಇದು ಸಾಧ್ಯ. ಅಲ್ಲಿ ಗುರು ಶಿಷ್ಯರ ಸಂಬಂಧ, ಜಾತಿ, ಕುಲ, ಗೋತ್ರಗಳಿಗೆ ಸೀಮಿತವಾದುದಲ್ಲ. ಅವರಿವರ ಮಧ್ಯದ ಸಂಬಂಧ ಜ್ಞಾನದ ಸಂಬಂಧ. ಜಗತ್ತಿನಲ್ಲಿ ನಿಶ್ಚಿಂತೆಯಿಂದಿರಲು ಜ್ಞಾನ ಬೇಕು. ಬಾಯಾರಿದವನಿಗೆ ನೀರು ಹೇಗೋ ಚಿಂತೆ ಇರುವವರಿಗೆ ಜ್ಞಾನ. ಈ ಜ್ಞಾನವನ್ನು ಬಲ್ಲವರಿಂದ ಪಡೆಯಬೇಕು.

## ಸೌಹಾರ್ದ ಸಹಕಾರಿಗಳ ನ್ಯಾಯಾಲಯದ ಸಮಾಚಾರಗಳು

**ದಾವಾ ದಾಖಲಾತಿಗಳು :** ಒಟ್ಟು ದಾಖಲಾದ ದಾವಾ ಪ್ರಕರಣಗಳ ಒಟ್ಟು 31,230 ಆಗಿರುತ್ತದೆ. ಇವುಗಳ ಪೈಕಿ 22,316 ಪ್ರಕರಣಗಳು ಇತ್ಯರ್ಥಗೊಂಡಿವೆ. ವಿಚಾರಣಾ ಹಂತದಲ್ಲಿರುವ ಪ್ರಕರಣಗಳು ಒಟ್ಟು 8914.

**ಅಕ್ಟೋಬರ್ ತಿಂಗಳ ಪ್ರಕರಣಗಳು :** ದಾವಾ ಪ್ರಕರಣ 275 ಇತ್ಯರ್ಥಗೊಂಡ ಪ್ರಕರಣಗಳು 404

**ಅಮಲ್ಜಾರಿ ಪ್ರಕರಣಗಳು :** ಒಟ್ಟು 6,642 ಅಮಲ್ಜಾರಿ ಪ್ರಕರಣಗಳು ದಾಖಲಾಗಿದ್ದು, ಇವುಗಳ ಪೈಕಿ 1,506 ಪ್ರಕರಣಗಳು ಇತ್ಯರ್ಥಗೊಂಡಿದ್ದು. 5,136 ಪ್ರಕರಣಗಳು ಪ್ರಗತಿಯಲ್ಲಿರುತ್ತದೆ. ಅಕ್ಟೋಬರ್ ತಿಂಗಳಿನಲ್ಲಿ ಒಟ್ಟು 98 ಅಮಲ್ಜಾರಿ ಪ್ರಕರಣಗಳು ದಾಖಲಾಗಿರುತ್ತವೆ.

# 70ನೇ ಅಖಿಲ ಭಾರತ ಸಹಕಾರ ಸಪ್ತಾಹ 2023





ದಿನಾಂಕ 17.11.2023 ರಂದು "ಸಹಕಾರ ಸಂಸ್ಥೆಗಳಲ್ಲಿ ಸರಳ ವ್ಯಾಪಾರ ಪ್ರಕ್ರಿಯೆ ಮತ್ತು ಉದಯೋನ್ಮುಖ ವಲಯಗಳು" ದಿನಾಚರಣೆಯ ಪೂರ್ವಭಾವಿ ಸಿದ್ಧತಾ ಸಭೆಯು ದಿನಾಂಕ 31/10/2023 ರಂದು ಕೆ.ಎಂ. ಎಫ್. ತರಬೇತಿ ಸಭಾಂಗಣ ರಾಯಾಪೂರ, ಹಾಗೂ ಕಾರ್ಮಿಕ ಸಚಿವರು ಮತ್ತು ಧಾರವಾಡ ಜಿಲ್ಲಾ ಉಸ್ತುವಾರಿ ಸಚಿವರಾದ ಶ್ರೀ ಸಂತೋಷ ಲಾಡ್ ಅವರ ಅಧ್ಯಕ್ಷತೆಯಲ್ಲಿ, ಸರ್ಕ್ಯೂಟ್ ಹೌಸ್‌ನಲ್ಲಿ ನಡೆದ ಪೂರ್ವಭಾವಿ ಸಿದ್ಧತಾ ಸಭೆಗಳ ನಡವಳಿ

**ಪೂರ್ವಭಾವಿ ಸಿದ್ಧತಾ ಸಭೆ – 01 ನಡವಳಿಗಳು**

70ನೇ ಅಖಿಲ ಭಾರತ ಸಹಕಾರ ಸಪ್ತಾಹದ ಅಂಗವಾಗಿ ದಿನಾಂಕ 17/11/2023 ರಂದು ಸಹಕಾರ ಸಂಸ್ಥೆಗಳಲ್ಲಿ ಆ ದಿನಾಚರಣೆಯ ಪೂರ್ವಭಾವಿ ಸಿದ್ಧತಾ ಸಭೆಯನ್ನು ಧಾರವಾಡ ತರಬೇತಿ ಸಭಾಂಗಣದಲ್ಲಿ ಬೆಳಗಾವಿ ವಿಭಾಗದ ಜಂಟಿ ನಿಬಂಧಕರಾದ ಶ್ರೀ ಸುರೇಶಗೌಡ ಪಾಟೀಲ ಇವರ ಅಧ್ಯಕ್ಷತೆಯಲ್ಲಿ ನಡೆಸಲಾಯಿತು.

ಈ ಸಭೆಯಲ್ಲಿ ಈ ದಿನಾಚಾರಣೆಗೆ ಸಂಬಂಧಿಸಿದ ಧಾರವಾಡ ಜಿಲ್ಲೆಯ ಸಹಕಾರಿ ಸಂಸ್ಥೆಗಳ ಅಧ್ಯಕ್ಷರು, ವ್ಯವಸ್ಥಾಪಕ ನಿರ್ದೇಶಕರು, ಹಿರಿಯ ಅಧಿಕಾರಿಗಳು ಸೇರಿದಂತೆ ಒಟ್ಟಾರೆ 85 ಜನ ಸಹಕಾರಿಗಳು ಭಾಗವಹಿಸಿದ್ದರು.

**ಪೂರ್ವಭಾವಿ ಸಿದ್ಧತಾ ಸಭೆ – 02 ನಡವಳಿಗಳು**

ಮಾನ್ಯ ಶ್ರೀ ಸಂತೋಷ್ ಲಾಡ್, ಮಾನ್ಯ ಕಾರ್ಮಿಕ ಸಚಿವರು ಹಾಗು ಜಿಲ್ಲಾ ಉಸ್ತುವಾರಿ ಸಚಿವರು, ಧಾರವಾಡ

ಶ್ರೀ ಸಂತೋಷ ಲಾಡ್, ಮಾನ್ಯ ಕಾರ್ಮಿಕ ಸಚಿವರು ಕರ್ನಾಟಕ ಸರ್ಕಾರ ಹಾಗು ಧಾರವಾಡ ಜಿಲ್ಲಾ ಉಸ್ತುವಾರಿ ಸಚಿವರು ಇವರ ಅಧ್ಯಕ್ಷತೆಯಲ್ಲಿ ಸಂಜೆ 6 ಗಂಟೆಗೆ ಸರ್ಕ್ಯೂಟ್ ಹೌಸ್‌ನಲ್ಲಿ ಸಭೆ ನಡೆದು ಮಾನ್ಯ ಸಚಿವರಿಗೆ ಬೆಳಗ್ಗಿನ ಸಭೆಯ ವಿವರಗಳನ್ನು ನೀಡಲಾಯಿತು.

ಮಾನ್ಯ ಸಚಿವರು ಮಾತನಾಡಿ ಈ ಕಾರ್ಯಕ್ರಮದಲ್ಲಿ ಕಲಘಟಗಿಯಲ್ಲಿ ಅತ್ಯಂತ ಅರ್ಥಪೂರ್ಣವಾಗಿ ಹಾಗೂ ಪರಿಣಾಮಕಾರಿಯಾಗಿ ಆಚರಿಸೋಣ, ಎಲ್ಲಾ ವ್ಯವಸ್ಥೆಗಳಿಗೆ ನಾನು ಸ್ವತಃ ಸಹಕಾರ ನೀಡುತ್ತೇನೆ, ವಿಶೇಷವಾಗಿ ಈ ಕಾರ್ಯಕ್ರಮದಲ್ಲಿ 3000 ಸಹಕಾರಿಗಳು ಸೇರಿದಂತೆ ಜಿಲ್ಲೆಯ, ಕಲಘಟಗಿ ತಾಲ್ಲೂಕಿನ ಸಾರ್ವಜನಿಕರು ಸೇರಿದಂತೆ ಒಟ್ಟು 10,000 ಕ್ಕೂ ಹೆಚ್ಚು ಸಹಕಾರಿಗಳು ಭಾಗವಹಿಸುವಂತೆ ಕಾರ್ಯಕ್ರಮ ಮಾಡೋಣ ಎಂದು ತಿಳಿಸಿದರು.

ಮಾನ್ಯ ಸಚಿವರು ಮಾತನಾಡಿ, ಕಾರ್ಯಕ್ರಮದಲ್ಲಿ ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವಂತೆ ಮಹಿಳಾ ಸಹಕಾರಿ ಸಂಸ್ಥೆಗಳಿಗೆ ಹಾಗೂ ಸಹಕಾರಿ ಸಂಘಗಳ ಮಹಿಳಾ ಸದಸ್ಯರುಗಳಿಗೆ ಭಾಗವಹಿಸುವಂತೆ ಎಲ್ಲಾ ಸಹಕಾರಿಗಳು ಹಾಗೂ ಅಧಿಕಾರಿಗಳಿಗೆ ಸೂಚಿಸಿದರು ಹಾಗೂ ಬಹುಮುಖ್ಯವಾಗಿ ಕೃಷಿ ವಿಶ್ವವಿದ್ಯಾಲಯ ಧಾರವಾಡ ಇವರು ಹಲವಾರು ಉತ್ಪನ್ನಗಳನ್ನು ಸಿದ್ದಪಡಿಸಿದ್ದಾರೆ ಈ ಉತ್ಪನ್ನಗಳಿಗೆ ಸಹಕಾರಿ ಕ್ಷೇತ್ರದ ಮೂಲಕ ಮಾರಾಟ ವ್ಯವಸ್ಥೆಯನ್ನು ಮಾಡುವಂತೆ ಸಹಕಾರಿಗಳು ಕ್ರಮವಿಡಬೇಕು ಎಂದು ತಿಳಿಸಿದರು.

ಕೃಷಿ ವಿಶ್ವಿದ್ಯಾಲಯದ ಹಲವಾರು ಉತ್ಪನ್ನಗಳು ಸಾಮಾನ್ಯ ಜನರಿಗೆ ತಲುಪುವ ವ್ಯವಸ್ಥೆಗಳು ಇರುವುದಿಲ್ಲ ಆ ವ್ಯವಸ್ಥೆಗಳನ್ನು ಸಹಕಾರಿ ಕ್ಷೇತ್ರದ ಮೂಲಕ ಮಾಡುವುದರಿಂದ ಕೃಷಿ ಉತ್ಪನ್ನಗಳು ಸಾಮಾನ್ಯ ಜನರನ್ನು ತಲುಪುವಂತಾಗುತ್ತದೆ ಎಂದು ತಿಳಿಸಿದರು. ಮುಂದಿನ ವಾರದಲ್ಲಿ ಮತ್ತೊಂದು ಸಭೆಯನ್ನು ಏರ್ಪಡಿಸಿ ಆ ಸಭೆಗೆ ವ್ಯವಸಾಯ ಇಲಾಖೆಯ, ತೋಟಗಾರಿಕಾ ಇಲಾಖೆಯ ಜಂಟಿ ನಿರ್ದೇಶಕರುಗಳನ್ನು, ಕೃಷಿ ವಿಶ್ವವಿದ್ಯಾಲಯದ ಅಧಿಕಾರಿಗಳನ್ನು ಬರಮಾಡಿಕೊಳ್ಳುವ ವ್ಯವಸ್ಥೆಯಾಗಬೇಕು ಈ ಒಂದು ಕಾರ್ಯಕ್ರಮದ ಮೂಲಕ ಸಹಕಾರ ಕ್ಷೇತ್ರದ ಸಾಧನೆಗಳನ್ನು ಹಾಗೂ ಸಹಕಾರಿ ಕ್ಷೇತ್ರದ ಬಗ್ಗೆ ಸಾರ್ವಜನಿಕರಿಗೆ ವಿಶ್ವಾಸಾರ್ಹತೆಯನ್ನು ಹಾಗೂ ಸಹಕಾರ ಕ್ಷೇತ್ರದ ಮೂಲಕ ಸರ್ಕಾರದ ಯೋಜನೆಗಳ ಅನುಷ್ಠಾನದ ವಿವರಗಳನ್ನು ಸಾರ್ವಜನಿಕರಿಗೆ, ಸಹಕಾರಿಗಳಿಗೆ ತಿಳಿಯಪಡಿಸುವ ವ್ಯವಸ್ಥೆಯಾಗಬೇಕು ಎಂದು ತಿಳಿಸಿದರು.

ಈ ಸಹಕಾರ ಸಪ್ತಾಹದಲ್ಲಿ ಗದಗ, ಹಾವೇರಿ ಹಾಗೂ ಧಾರವಾಡ ಜಿಲ್ಲೆಯ ಎಲ್ಲಾ ಸಹಕಾರ ಸಂಸ್ಥೆಗಳು, ಸೌಹಾರ್ದ ಸಹಕಾರ ಸಂಸ್ಥೆಗಳು ವಿಶೇಷವಾಗಿ 50% ಮಹಿಳೆಯರು ಭಾಗವಹಿಸುವಂತೆ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ನಂಜನಗೌಡ ಜಿ ಹಾಗೂ ಆಡಳಿತ ಮಂಡಲಿಯವರು ವಿನಂತಿಸಿದ್ದಾರೆ.

## ಸಹಕಾರ ಸಪ್ತಾಹ ಆಚರಣೆಯಿಂದಾಗಿ ಸಾರ್ವಜನಿಕರಲ್ಲಿ ಸಹಕಾರ ಸಪ್ತಾಹದ ವಿಶ್ವಾಸರ್ಹತೆ ಹೆಚ್ಚಿಸುವಂತಾಗಲಿ - ಶ್ರೀ ಕೆ.ಎನ್ ರಾಜಣ್ಣ, ಮಾನ್ಯ ಸಹಕಾರ ಸಚಿವರು.



ದಿನಾಂಕ 09.10.2023 ರಂದು ವಿಕಾಸ ಸೌಧದಲ್ಲಿ ಸನ್ಮಾನ್ಯ ಸಹಕಾರ ಸಚಿವರಾದ ಶ್ರೀ ಕೆ.ಎನ್ ರಾಜಣ್ಣ ಇವರ ಅಧ್ಯಕ್ಷತೆಯಲ್ಲಿ ದಿನಾಂಕ 14.11.2023 ರಿಂದ 20.11.2023 ರವರೆಗೆ ಆಚರಿಸಲಿರುವ 70ನೇ ಅಖಿಲ ಭಾರತ ಸಹಕಾರ ಸಪ್ತಾಹ ಪೂರ್ವಭಾವಿ ಸಿದ್ಧತಾ ಸಭೆ ನಡೆಯಿತು. ಈ ಸಂದರ್ಭದಲ್ಲಿ ಶ್ರೀ ಜಿ.ಟಿ ದೇವೇಗೌಡ, ಮಾನ್ಯ ಶಾಸಕರು ಹಾಗೂ ಅಧ್ಯಕ್ಷರು ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ನಿ., ಬೆಂಗಳೂರು, ಶ್ರೀ ಕೆ. ಷಡಕ್ಷರಿ, ಶಾಸಕರು ಹಾಗೂ ಅಧ್ಯಕ್ಷರು, ಕಾಸ್ಕಾರ್ಡ್ ಬ್ಯಾಂಕ್ ನಿ.. ಬೆಂಗಳೂರು. ಡಾ. ಎಂ.ಎನ್ ರಾಜೇಂದ್ರ ಕುಮಾರ್, ಅಧ್ಯಕ್ಷರು, ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾಮಂಡಳ ನಿ., ಬೆಂಗಳೂರು, ಶ್ರೀ ಭೀಮನಾಯ್ಕ, ಅಧ್ಯಕ್ಷರು, ಕೆ.ಎಂ.ಫ್, ಬೆಂಗಳೂರು, ಶ್ರೀ ಜಿ. ನಂಜನಗೌಡ, ಅಧ್ಯಕ್ಷರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು, ಶ್ರೀ ಗುರುನಾಥ ಜ್ಯಾಂತೀಕರ, ಅಧ್ಯಕ್ಷರು, ಕರ್ನಾಟಕ ರಾಜ್ಯ ಬಸವೇಶ್ವರ ಸುದ್ಧಿ ಮಾಧ್ಯಮ ಸಹಕಾರ ಮಹಾಮಂಡಳ ನಿ., ಬೆಂಗಳೂರು ಹಾಗೂ ಶ್ರೀ ಎನ್. ಮಂಜುನಾಥ್ ಪ್ರಸಾದ್, ಐ.ಎ.ಎಸ್, ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಸಹಕಾರ ಇಲಾಖೆ, ಕ್ಯಾಪ್ಟನ್ ಡಾ॥ ಕೆ. ರಾಜೇಂದ್ರ ಐ.ಎ.ಎಸ್, ಸಹಕಾರ ಸಂಘಗಳ ನಿಬಂಧಕರು, ಕರ್ನಾಟಕ ಸರ್ಕಾರ, ಸಹಕಾರ ಇಲಾಖೆ ಅಧಿಕಾರಿಗಳು ಹಾಗೂ ರಾಜ್ಯ ಮಟ್ಟದ ಮಹಾಮಂಡಳದ ಅಧ್ಯಕ್ಷರು, ವ್ಯವಸ್ಥಾಪಕ ನಿರ್ದೇಶಕರು ಉಪಸ್ಥಿತರಿದ್ದರು.

## ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ದಾವಾ ಪಂಚಾಯ್ತಿ ನ್ಯಾಯಾಲಯ ಬೆಳಗಾವಿ ಪೀಠಕ್ಕೆ ಮಾನ್ಯ ಸಹಕಾರ ಸಂಘಗಳ ಜಂಟಿ ನಿಬಂಧಕರಾದ ಶ್ರೀ ಸಿ. ಪ್ರಸಾದ ರೆಡ್ಡಿ ಯವರು ಹೆಚ್ಚುವರಿಯಾಗಿ ಕಾರ್ಯನಿರ್ವಹಿಸಲು ಆಗಮಿಸಿದ ಸಂದರ್ಭದಲ್ಲಿ ಅವರಿಗೆ ಸ್ವಾಗತ ಕೋರಲಾಯಿತು.



**ಬೆಳಗಾವಿ :** ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ದಾವಾ ಪಂಚಾಯ್ತಿ ನ್ಯಾಯಾಲಯ ಬೆಳಗಾವಿ ಪೀಠಕ್ಕೆ ಪೀಠಾಧಿಕಾರಿಯಾಗಿ ಹೆಚ್ಚುವರಿ ಕಾರ್ಯನಿರ್ವಹಿಸಲು ಆಗಮಿಸಿದ ಮಾನ್ಯ ಸಹಕಾರ ಸಂಘಗಳ ಜಂಟಿ ನಿಬಂಧಕರಾದ ಶ್ರೀ ಸಿ. ಪ್ರಸಾದ ರೆಡ್ಡಿ ರವರು ಭೇಟಿ ನೀಡಿದ ಸಂದರ್ಭದಲ್ಲಿ ಅವರಿಗೆ ಹೂಗುಚ್ಛವನ್ನು ನೀಡಿ ಸ್ವಾಗತ ಕೋರಲಾಯಿತು. ಈ ಸಂದರ್ಭದಲ್ಲಿ ನ್ಯಾಯಾಲಯದ ಅಧಿಕಾರಿ ಶ್ರೀ ಸಂಜಯ ಕೋರಟಕರ್, ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಬಸವರಾಜ ಹೊಂಗಲ, ಟಾಸ್ಕಫೋರ್ಸ ವ್ಯವಸ್ಥಾಪಕರಾದ ಶ್ರೀ ಗಂಗಾರಾಮ ಕೋಳಾಪ್ಪೆ, ನ್ಯಾಯಾಲಯದ ವ್ಯವಸ್ಥಾಪಕರಾದ ಶ್ರೀ ಸಂತೋಷ ಬಸಣ್ಣವರ ಹಾಗೂ ಸೌಹಾರ್ದ ಸಹಕಾರಿಗಳು ಹಾಜರಿದ್ದರು.



**ಬೆಳಗಾವಿ :** ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ದಾವಾ ಪಂಚಾಯ್ತಿ ನ್ಯಾಯಾಲಯ ಬೆಳಗಾವಿ ಪೀಠಕ್ಕೆ ಮಾನ್ಯ ಸಹಕಾರ ಸಂಘಗಳ ಜಂಟಿ ನಿಬಂಧಕರಾದ ಶ್ರೀ ಸಿ. ಪ್ರಸಾದ ರೆಡ್ಡಿ ರವರು ಪೀಠಾಧಿಕಾರಿಯಾಗಿ ಹೆಚ್ಚುವರಿಯಾಗಿ ಕಾರ್ಯನಿರ್ವಹಿಸುವ ಹಿನ್ನೆಲೆಯಲ್ಲಿ ಹಾಲಿ ಪೀಠಾಧಿಕಾರಿಗಳು ಹಾಗೂ ಸಹಕಾರ ಸಂಘಗಳ ಜಂಟಿ ನಿಬಂಧಕರು, ಬೆಳಗಾವಿ ಪ್ರಾಂತ ರವರು ಆದ ಡಾ. ಸುರೇಶಗೌಡ ರವರು ಪ್ರಸ್ತುತ ನೇಮಕಗೊಂಡ ಪೀಠಾಧಿಕಾರಿಗಳಾದ ಶ್ರೀ ಸಿ. ಪ್ರಸಾದ ರೆಡ್ಡಿ, ಸಹಕಾರ ಸಂಘಗಳ ಜಂಟಿ ನಿಬಂಧಕರು ಇವರಿಗೆ ಅಧಿಕಾರವನ್ನು ಹಸ್ತಾಂತರಿಸಿದರು.

## ಆಡಳಿತ ಪರಿಣಿತಿ ಅಭಿವೃದ್ಧಿ ತರಬೇತಿ ಕಾರ್ಯಕ್ರಮ

### ಶಾಸನಬದ್ಧ ಸಹಕಾರಿ ಸಂಸ್ಥೆ ಹೊಂದಿರುವುದು ಕರ್ನಾಟಕ ರಾಜ್ಯದ ವೈಶಿಷ್ಟತೆ, ಸಹಕಾರಿ ಸಂಸ್ಥೆಗಳು ವ್ಯಕ್ತಿ ಕೇಂದ್ರಿಕೃತವಾಗಬಾರದು – ಶ್ರೀ ಸಿದ್ಧನಗೌಡ ನೀಲಪ್ಪನವರ, ಜೆಆರ್‌ಸಿಎಸ್, ಬೆಂಗಳೂರು



**ಬೆಂಗಳೂರು :** ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯು ದಿನಾಂಕ 11 ಮತ್ತು 12 ಅಕ್ಟೋಬರ್ 2023 ರಂದು ಸೌಹಾರ್ದ ಸಹಕಾರಿಗಳ ನಿರ್ದೇಶಕರಿಗಾಗಿ ಎರಡು ದಿನಗಳ ಆಡಳಿತ ಪರಿಣಿತಿ ಅಭಿವೃದ್ಧಿ ತರಬೇತಿಯನ್ನು ಆಯೋಜಿಸಲಾಗಿತ್ತು. ಸದರಿ ತರಬೇತಿಯ ಉದ್ಘಾಟನೆಯನ್ನು ಶ್ರೀ ಸಿದ್ಧನಗೌಡ ನೀಲಪ್ಪನವರ್, ಮಾನ್ಯ ಸಹಕಾರ ಸಂಘಗಳ ಜಂಟಿ ನಿಬಂಧಕರು, ಆಡಳಿತ ಮತ್ತು ಅಭಿವೃದ್ಧಿ ವಿಭಾಗ, ನಿಬಂಧಕರ ಕಛೇರಿ, ಬೆಂಗಳೂರು. ಇವರು ನೆರವೇರಿಸಿದರು. ಸಂಯುಕ್ತ ಸಹಕಾರಿಯ ಧ್ಯೇಯ ಸ್ವಾಯತ್ತತೆ, ಸ್ವಯಂ ಆಡಳಿತ ಹಾಗೂ ಸ್ವಯಂ ನಿಯಂತ್ರಣ ಹಾಗೂ ಘೋಷವಾಕ್ಯವಾದ "ಸೌಹಾರ್ದ ಸಹಕಾರಿಗಳ ನಡೆ ಗುಣಮಟ್ಟದ ಕಡೆ" ಇವುಗಳನ್ನು ಅಳವಡಿಸಿಕೊಂಡು ಸಂಯುಕ್ತ ಸಹಕಾರಿಯು ಶಾಸನಾತ್ಮಕವಾಗಿ ಆಡಳಿತವನ್ನು ಅತ್ಯಂತ ಪಾರದರ್ಶಕವಾಗಿ ನಿರ್ವಹಿಸುತ್ತಿರುವುದು ಶ್ಲಾಘನೀಯ ಅಲ್ಲದೆ ಕರ್ನಾಟಕ ರಾಜ್ಯ ಮತ್ತೊಂದು ಗರಿ ಏನೆಂದರೆ ಇಡೀ ರಾಜ್ಯದಲ್ಲಿಯೇ ಶಾಸನಬದ್ಧ ಏಕೈಕ ಸಂಸ್ಥೆ ಇರುವುದು ನಮ್ಮೆಲ್ಲರ ಹೆಮ್ಮೆ. ಸಂಯುಕ್ತ ಸಹಕಾರಿಯು ಸಹಕಾರಿಗಳ ನಿರ್ದೇಶಕರಿಗೆ ತರಬೇತಿ ಹಮ್ಮಿಕೊಂಡಿರುವುದು ಪ್ರಸ್ತುತ ಸಂದರ್ಭಕ್ಕೆ ಸೂಕ್ತ ಹಾಗೂ ಪ್ರಸ್ತುತತೆ ಇದೆ. ಸಹಕಾರಿ ಸಂಸ್ಥೆಗಳಲ್ಲಿ ಎಲ್ಲವೂ ಅಧ್ಯಕ್ಷರ ಮೇಲೆ ಅವಲಂಬಿತ ಅಥವಾ ಎಲ್ಲವೂ ಮುಖ್ಯಕಾರ್ಯನಿರ್ವಹಣಾಧಿಕಾರಿಯನ್ನೆ ಅವಲಂಬಿತವಾಗಿಬಾರದು. ಆಡಳಿತ ಮಂಡಳಿಯವರ ಸಾಮೂಹಿಕ ನಿರ್ಣಯದ ಅವಲಂಬಿತವಾಗಿದ್ದರೆ ಮಾತ್ರ ಸಹಕಾರಿ ಸಂಸ್ಥೆಗಳು ಅಭಿವೃದ್ಧಿ ಹೊಂದುವುದು ಸಾಧ್ಯ.

ಈ ತರಬೇತಿಯಿಂದ ತಾವು ಜ್ಞಾನವನ್ನು ತಮ್ಮ ಸಹಕಾರಿಗಳ ಆಡಳಿತ ಮಂಡಳಿಯ ಸದಸ್ಯರಿಗೆ ತಲುಪುವ ವ್ಯವಸ್ಥೆ ಸಂಯುಕ್ತ ಸಹಕಾರಿ ಮಾಡುತ್ತಿರುವುದು ಶ್ಲಾಘನೀಯ. ಕೇಂದ್ರ ಸಹಕಾರ ಸಚಿವಾಲಯದ ಹಾಗೂ ಕರ್ನಾಟಕ ರಾಜ್ಯದ ಸಹಕಾರ ಕ್ಷೇತ್ರದ ಇತ್ತೀಚಿನ ಬೆಳವಣಿಗೆಗಳನ್ನು ತಮ್ಮ ಉದ್ಘಾಟನಾ ಭಾಷಣದಲ್ಲಿ ತಿಳಿಸಿದರು.

**ಸಹಕಾರಿ ಸಂಸ್ಥೆಗಳ ನಿರ್ದೇಶಕರ ಕರ್ತವ್ಯ, ಜವಾಬ್ದಾರಿ ಜೊತೆಗೆ ಹೊಣೆಗಾರಿಕೆ ಅಗತ್ಯ – ಜಿ. ನಂಜನಗೌಡ, ಅಧ್ಯಕ್ಷರು. ಕ.ರಾ.ಸೌ.ಸಂ.ಸ.ನಿ., ಬೆಂಗಳೂರು**

ತರಬೇತಿ ಉದ್ಘಾಟನಾ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡ ಜಿ. ಇವರು ವಹಿಸಿಕೊಂಡಿದ್ದರು. ತಮ್ಮ ಅಧ್ಯಕ್ಷೀಯ ಭಾಷಣದಲ್ಲಿ ಸೌಹಾರ್ದ ಸಹಕಾರಿಗಳು ಶಾಸನಬದ್ಧವಾಗಿ ಆಡಳಿತವನ್ನು ನಡೆಸಬೇಕು, ಸಹಕಾರಿಗಳ ಅಧ್ಯಕ್ಷರು, ನಿರ್ದೇಶಕರು ತಮ್ಮ ಕರ್ತವ್ಯ, ಜವಾಬ್ದಾರಿಯ ಜೊತೆಗೆ ಹೊಣೆಗಾರಿಕೆಯನ್ನು ವಹಿಸಿಕೊಂಡು ಸಹಕಾರಿ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸಿದರೆ ಸಹಕಾರಿಯನ್ನು ಗುಣಮಟ್ಟದ ಕಡೆ ನಡೆಸುವುದು ಸುಲಭವಾಗುತ್ತದೆ. ಸಹಕಾರಿಗಳಲ್ಲಿ ಪಾರದರ್ಶಕತೆ, ನಿಷ್ಠೂರತೆಯೊಂದಿಗೆ ಸಕ್ರೀಯವಾಗಿ ನಿರ್ದೇಶಕರು ಭಾಗವಹಿಸಿ ನಿಯಮಬದ್ಧವಾಗಿ ಸಹಕಾರಿಗಳಲ್ಲಿ ವೃತ್ತಿಪರತೆಯಿಂದ ಕಾರ್ಯನಿರ್ವಹಿಸಬೇಕು ಎಂದು ಮಾರ್ಗದರ್ಶನ ನೀಡಿದರು. ಕಾರ್ಯಕ್ರಮದ ಮುಖ್ಯಅತಿಥಿಗಳ ಭಾಷಣದಲ್ಲಿ ನಿರ್ದೇಶಕರ ಕರ್ತವ್ಯ ಹಾಗೂ ಜವಾಬ್ದಾರಿಯ ಎಚ್ಚರಿಕೆಯ ಕರೆಯನ್ನು ಶ್ರೀ ಬಿಎಸ್. ಗುಂಡುರಾವ್, ಮಾನ್ಯ ನಿರ್ದೇಶಕರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು. ಇವರು ನೀಡಿದರು.

ಕಾರ್ಯಕ್ರಮದ ಪ್ರಾಸ್ತಾವಿಕ ನುಡಿಯನ್ನು ಸಂಯುಕ್ತ ಸಹಕಾರಿಯ ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ ಇವರು ನೆರವೇರಿಸಿದರು ಸೌಹಾರ್ದ ಸಹಕಾರಿಗಳ ಕಾರ್ಯವೈಖರಿ ಕುರಿತು ವಿಚಾರ ವಿನಿಮಯ ಹಾಗೂ ಸಮಾಲೋಚನೆಗಾಗಿ ಈ ತರಬೇತಿಯನ್ನು ಸಂಯುಕ್ತ ಸಹಕಾರಿಯು ಹಮ್ಮಿಕೊಳ್ಳತ್ತಾ ಬಂದಿದೆ ಪ್ರಸ್ತುತ ಸೌಹಾರ್ದ ಸಹಕಾರಿಗಳಿಗೆ ಈ ತರಬೇತಿಯು 3ನೇ ತಂಡದ ತರಬೇತಿಯಾಗಿರುತ್ತದೆ. ಸೌಹಾರ್ದ ಸಹಕಾರಿಗಳಲ್ಲಿ ಶಾಸನಾತ್ಮಕವಾಗಿ ಆಡಳಿತವನ್ನು ಅಚ್ಚುಕಟ್ಟಾಗಿ ನಿರ್ವಹಿಸಲು ಸಂಯುಕ್ತ ಸಹಕಾರಿಯು ಸೌಹಾರ್ದ ಸಹಕಾರಿಗಳಿಗೆ ಮಾರ್ಗದರ್ಶನಕಾರನಾಗಿ ಸ್ನೇಹಿತನಾಗಿ ಹಾಗೂ ತತ್ವಜ್ಞಾನಿಯಾಗಿ ಶಾಸನಬದ್ದ ಸಲಹೆಗಳನ್ನು ನೀಡುತ್ತಿದೆ. ಅದರಂತೆ ಸಹಕಾರಿಗಳ ತತ್ವಗಳನ್ನು ಅಳವಡಿಸಿಕೊಂಡು ಕಾರ್ಯನಿರ್ವಹಿಸುವುದು ಅಗತ್ಯವಾಗಿದೆ ಎಂದು ತಿಳಿಸಿದರು.

ಆಡಳಿತ ಪರಿಣಿತಿ ಅಭಿವೃದ್ಧಿ ತರಬೇತಿ ಈ ಎರಡು ದಿನದ ತರಬೇತಿಯಲ್ಲಿ – ಸಹಕಾರ ಸಂಸ್ಥೆಗಳ ಆರ್ಥಿಕ ಶಿಸ್ತು ನಿರ್ವಹಣೆಯಲ್ಲಿ ನಿರ್ದೇಶಕರುಗಳ ಪಾತ್ರ, ವ್ಯಾಪಾರ ಅಭಿವೃದ್ಧಿ ಯೋಜನೆ, ಸಾಲ ಪತ್ರ ದಾಖಲಾತಿ ಹಾಗೂ ಸಾಲ ವಸೂಲಾತಿ ಕ್ರಮಗಳು – ನಿರ್ದೇಶಕರ ಜವಾಬ್ದಾರಿ, ಸಹಕಾರ ಕಾಯ್ದೆಗಳ ಮುಖ್ಯಾಂಶಗಳು ಹಾಗೂ ಇತ್ತೀಚಿನ ತಿದ್ದುಪಡಿಗಳು, ಸಹಕಾರ ಕ್ಷೇತ್ರದ ಪ್ರಸಕ್ತ ವಿದ್ಯಮಾನಗಳು ಸಹಕಾರಿ ನಾಯಕತ್ವ ಈ ವಿಷಯಗಳ ಕುರಿತು ನುರಿತ ಅನುಭವಿ ಸಂಪನ್ಮೂಲ ವ್ಯಕ್ತಿಗಳಿಂದ ಉಪನ್ಯಾಸವನ್ನು ಏರ್ಪಡಿಲಾಗಿದೆ. ತರಬೇತಿಯ ಉದ್ಘಾಟನಾ ಕಾರ್ಯಕ್ರಮದ ಪ್ರಾರ್ಥನೆಯನ್ನು ಶ್ರೀಮತಿ ರೇಣುಕ ಹಾಗೂ ಕುಮಾರಿ ಅಕ್ಷತ ಇವರು ಸ್ವಾಗತವನ್ನು, ಶ್ರೀ ರಾಜಶೇಖರ ಹೂಗಾರ್ ಇವರು ವಂದನಾರ್ಪಣೆಯನ್ನು ಶ್ರೀ ಪಾಲರಾಜ ಎ. ಇವರು ನಿರೂಪಣೆಯನ್ನು ಶ್ರೀ ರಾಜೇಶ್ ಕೆ. ಎಂ. ಇವರು ನೆರವೇರಿಸಿದರು. ಸದರಿ ಕಾರ್ಯಕ್ರಮದಲ್ಲಿ 30 ಸೌಹಾರ್ದ ಸಹಕಾರಿಗಳಿಂದ 55 ಪ್ರತಿನಿಧಿಗಳು ಭಾಗವಹಿಸಿದ್ದರು.

# ವಿಷಯಾಧಾರಿತ ತರಬೇತಿ ಕಾರ್ಯಕ್ರಮ

ಮೈಸೂರು ಪ್ರಾಂತದ ಚುನಾವಣೆ ಬಾಕಿ ಇರುವ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರು ಹಾಗೂ ಸಿಬ್ಬಂದಿಗಳಿಗಾಗಿ ಸೌಹಾರ್ದ ಸಹಕಾರಿಗಳ ಚುನಾವಣೆ ನಡೆಸುವ ಕುರಿತು ವಿಷಯಾಧಾರಿತ ತರಬೇತಿ ಕಾರ್ಯಕ್ರಮವನ್ನು ದಿನಾಂಕ 13.10.2023ರ ಶುಕ್ರವಾರ ಬೆಳಿಗ್ಗೆ 11.00 ಗಂಟೆಗೆ ವೀಡಿಯೋ ಕಾನ್ಫರೆನ್ಸ್ ಮೂಲಕ ಆಯೋಜಿಸಲಾಗಿತ್ತು.

ತರಬೇತಿ ಕಾರ್ಯಕ್ರಮದ ಸ್ವಾಗತ ಮತ್ತು ಪ್ರಾಸ್ತಾವಿಕ ನುಡಿಯನ್ನು ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಶಿವಕುಮಾರ ಬಿರಾದಾರರವರು ನೆರವೇರಿಸಿದರು. ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಮಂಜುನಾಥರವರು ತರಬೇತಿ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದರು, ಶ್ರೀ ಶಶಿಧರ ಎಲೆ, ಸಹಕಾರ ಸಂಘಗಳ ಅಪರ ನಿಬಂಧಕರು (ನಿ.) ಸಹಕಾರ ಇಲಾಖೆ, ಬೆಂಗಳೂರು. ಇವರು ಸೌಹಾರ್ದ ಸಹಕಾರಿಗಳ ಚುನಾವಣೆ ನಡೆಸುವ ಕುರಿತು ಉಪನ್ಯಾಸ ನೀಡಿದರು. ಸದರಿ ತರಬೇತಿ ಕಾರ್ಯಕ್ರಮದಲ್ಲಿ 70 ಸೌಹಾರ್ದ ಸಹಕಾರಿಗಳಿಂದ 163 ಪ್ರತಿನಿಧಿಗಳು ಭಾಗವಹಿಸಿದ್ದರು.

ಮೈಸೂರು ಪ್ರಾಂತದ ನಷ್ಟದಲ್ಲಿರುವ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರು ಹಾಗೂ ಸಿಬ್ಬಂದಿಗಳಿಗಾಗಿ ನಷ್ಟದಲ್ಲಿರುವ ಸೌಹಾರ್ದ ಸಹಕಾರಿಗಳು ಲಾಭಕ್ಕೆ ಬರಲು ಅನುಸರಿಸಬೇಕಾದ ಕ್ರಮಗಳ ಕುರಿತು ವಿಷಯಾಧಾರಿತ ತರಬೇತಿ ಕಾರ್ಯಕ್ರಮವನ್ನು ದಿನಾಂಕ 13.10.2023ರ ಶುಕ್ರವಾರ ಮಧ್ಯಾಹ್ನ 3.00 ಗಂಟೆಗೆ ವೀಡಿಯೋ ಕಾನ್ಫರೆನ್ಸ್ ಮೂಲಕ ಆಯೋಜಿಸಲಾಗಿತ್ತು.

ತರಬೇತಿ ಕಾರ್ಯಕ್ರಮದ ಸ್ವಾಗತ ಮತ್ತು ಪ್ರಾಸ್ತಾವಿಕ ನುಡಿಯನ್ನು ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಶಿವಕುಮಾರ ಬಿರಾದಾರರವರು ನೆರವೇರಿಸಿದರು. ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಮಂಜುನಾಥರವರು ತರಬೇತಿ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದರು, ಶ್ರೀ ಭಾಸ್ಕರ್ ಹೆಗಡೆ ಕಾಗೇರಿ, ಮಾನ್ಯ ಮಾಜಿ ನಿರ್ದೇಶಕರು, ಕ.ರಾ.ಸೌ.ಸಂ.ಸ.ನಿ., ಉತ್ತರ ಕನ್ನಡ. ಇವರು ನಷ್ಟದಲ್ಲಿರುವ ಸೌಹಾರ್ದ ಸಹಕಾರಿಗಳು ಲಾಭಕ್ಕೆ ಬರಲು ಅನುಸರಿಸಬೇಕಾದ ಕ್ರಮಗಳ ಕುರಿತು ಉಪನ್ಯಾಸ ನೀಡಿದರು. ಸದರಿ ತರಬೇತಿ ಕಾರ್ಯಕ್ರಮದಲ್ಲಿ 80 ಸೌಹಾರ್ದ ಸಹಕಾರಿಗಳಿಂದ 168 ಪ್ರತಿನಿಧಿಗಳು ಭಾಗವಹಿಸಿದ್ದರು.

# ಕ್ಲಸ್ಟರ್ ಮಟ್ಟದ ತರಬೇತಿ ಕಾರ್ಯಕ್ರಮಗಳು



**ಕೊಪ್ಪಳ :** ದಿನಾಂಕ 30.09.2023 ರಂದು ಕೊಪ್ಪಳ ಜಿಲ್ಲೆಯ ಕನಕಗಿರಿ ತಾಲ್ಲೂಕಿನ ಸೌಹಾರ್ದ ಸಹಕಾರಿಗಳಿಗೆ ಕ್ಲಸ್ಟರ್ ಮಟ್ಟದ ತರಬೇತಿಯನ್ನು ಅಭಿವನಶ್ರೀ ವಿವಿದ್ದೋದ್ದೇಶ ಸೌಹಾರ್ದ ಸಹಕಾರಿ ನಿ., ಕನಕಗಿರಿಯಲ್ಲಿ ಆಯೋಜಿಸಲಾಗಿತ್ತು. ತರಬೇತಿಯಲ್ಲಿ ಕಲಂ 34ರಡಿ ಮಾಹಿತಿ ಸಲ್ಲಿಸುವ ಕುರಿತು, ಬಡ್ಡಿದರ ನಿಗದಿಪಡಿಸುವ ಕುರಿತು, ಚುನಾವಣೆ ಪ್ರಸ್ತಾವನೆ ಸಲ್ಲಿಸುವ ಕುರಿತು ಹಾಗೂ ಈಸಿ ಪೇ ಮಾಡುವ ವಿಧಾನದ ಬಗ್ಗೆ ಮತ್ತು ಸಂಯುಕ್ತ ಸಹಕಾರಿಗೆ ಕಾಲ ಕಾಲಕ್ಕೆ ಸಲ್ಲಿಸಬೇಕಾದ ಮಾಹಿತಿಗಳ ಕುರಿತು ಜಿಲ್ಲಾ ಸಂಯೋಜಕರಾದ ಶ್ರೀ ಓಂಕಾರ ಧರಣೆಯವರು ಮಾಹಿತಿ ನೀಡಿದರು. ಸದರಿ ತರಬೇತಿಯಲ್ಲಿ 12 ಸಹಕಾರಿಗಳಿಂದ 16 ಪ್ರತಿನಿಧಿಗಳು ಭಾಗವಹಿಸಿದ್ದರು.

ದಿನಾಂಕ 11.10.2023 ರಂದು ಕೊಪ್ಪಳ ಜಿಲ್ಲೆಯ ತಾವರಗೇರಾ ಪಟ್ಟಣದ ಸೌಹಾರ್ದ ಸಹಕಾರಿಗಳಿಗೆ ಕ್ಲಸ್ಟರ್ ಮಟ್ಟದ ತರಬೇತಿಯನ್ನು ತಾವರಗೇರಾ ಪಟ್ಟಣದ ಸೌಹಾರ್ದ ಸಹಕಾರಿ ಬ್ಯಾಂಕ್ ನಲ್ಲಿ ಆಯೋಜಿಸಲಾಗಿತ್ತು. ತರಬೇತಿಯಲ್ಲಿ ಕಲಂ 34ರಡಿ ಮಾಹಿತಿ ಸಲ್ಲಿಸುವ ಕುರಿತು, ಬಡ್ಡಿದರ ನಿಗದಿಪಡಿಸುವ ಕುರಿತು, ಚುನಾವಣೆ ಪ್ರಸ್ತಾವನೆ ಸಲ್ಲಿಸುವ ಕುರಿತು ಹಾಗೂ ಈಸಿ ಪೇ ಮಾಡುವ ವಿಧಾನದ ಬಗ್ಗೆ ಮತ್ತು ಸಂಯುಕ್ತ ಸಹಕಾರಿಗೆ ಕಾಲ ಕಾಲಕ್ಕೆ ಸಲ್ಲಿಸಬೇಕಾದ ಮಾಹಿತಿಗಳ ಕುರಿತು ಮಾನ್ಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಸೂರ್ಯಕಾಂತ ರ್‍ಯಾಕಲೆ ಯವರು ಮತ್ತು ಜಿಲ್ಲಾ ಸಂಯೋಜಕರಾದ ಶ್ರೀ ಓಂಕಾರ ಧರಣೆಯವರು ಮಾಹಿತಿ ನೀಡಿದರು. ಸದರಿ ತರಬೇತಿಯಲ್ಲಿ 08 ಸಹಕಾರಿಗಳಿಂದ 12 ಪ್ರತಿನಿಧಿಗಳು ಭಾಗವಹಿಸಿದ್ದರು.

ದಿನಾಂಕ 11.10.2023 ರಂದು ಮದ್ಯಾಹ್ನದ ಅವಧಿಯಲ್ಲಿ ಕೊಪ್ಪಳ ಜಿಲ್ಲೆಯ ಕುಷ್ಟಗಿ ತಾಲ್ಲೂಕಿನ ಸೌಹಾರ್ದ ಸಹಕಾರಿಗಳಿಗೆ ಕ್ಲಸ್ಟರ್ ಮಟ್ಟದ ತರಬೇತಿಯನ್ನು ಶ್ರೀ ಸಾಯಿ ಶಂಕರ ವಿವಿದ್ದೋದ್ದೇಶ ಸೌಹಾರ್ದ ಸಹಕಾರಿ ನಿ., ಕುಷ್ಟಗಿಯಲ್ಲಿ ಆಯೋಜಿಸಲಾಗಿತ್ತು. ತರಬೇತಿಯಲ್ಲಿ ಕಲಂ 34ರಡಿ ಮಾಹಿತಿ ಸಲ್ಲಿಸುವ ಕುರಿತು, ಬಡ್ಡಿದರ ನಿಗದಿಪಡಿಸುವ ಕುರಿತು, ಚುನಾವಣೆ ಪ್ರಸ್ತಾವನೆ ಸಲ್ಲಿಸುವ ಕುರಿತು ಹಾಗೂ ಈಸಿ ಪೇ ಮಾಡುವ ವಿಧಾನದ ಬಗ್ಗೆ ಮತ್ತು ಸಂಯುಕ್ತ ಸಹಕಾರಿಗೆ ಕಾಲ ಕಾಲಕ್ಕೆ ಸಲ್ಲಿಸಬೇಕಾದ ಮಾಹಿತಿಗಳ ಕುರಿತು ಮಾನ್ಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಸೂರ್ಯಕಾಂತ ರ್‍ಯಾಕಲೆ ಯವರು ಮತ್ತು ಜಿಲ್ಲಾ ಸಂಯೋಜಕರಾದ ಶ್ರೀ ಓಂಕಾರ ಧರಣೆಯವರು ಮಾಹಿತಿ ನೀಡಿದರು. ಸದರಿ ತರಬೇತಿಯಲ್ಲಿ 29 ಸಹಕಾರಿಗಳಿಂದ 36 ಪ್ರತಿನಿಧಿಗಳು ಭಾಗವಹಿಸಿದ್ದರು.

ದಿನಾಂಕ 14.10.2023 ರಂದು ಕೊಪ್ಪಳ ಜಿಲ್ಲೆಯ ಗಂಗಾವತಿ ತಾಲೂಕಿನ ಸೌಹಾರ್ದ ಸಹಕಾರಿಗಳಿಗೆ ಕ್ಲಸ್ಟರ್ ಮಟ್ಟದ ತರಬೇತಿಯನ್ನು ಕೊಪ್ಪಳ ಜಿಲ್ಲಾ ಜಿಲ್ಲೆಯ ಜಿಲ್ಲಾ ಸಂಪರ್ಕ ಕಛೇರಿ. ಗಂಗಾವತಿಯಲ್ಲಿ ಆಯೋಜಿಸಲಾಗಿತ್ತು. ತರಬೇತಿಯಲ್ಲಿ ಕಲಂ 34ರಡಿ ಮಾಹಿತಿ ಸಲ್ಲಿಸುವ ಕುರಿತು, ಬಡ್ಡಿದರ ನಿಗದಿಪಡಿಸುವ ಕುರಿತು, ಚುನಾವಣೆ ಪ್ರಸ್ತಾವನೆ ಸಲ್ಲಿಸುವ ಕುರಿತು ಹಾಗೂ ಇಸಿ ಪೆ ಮಾಡುವ ವಿಧಾನದ ಬಗ್ಗೆ ಮತ್ತು ಸಂಯುಕ್ತ ಸಹಕಾರಿಗೆ ಕಾಲ ಕಾಲಕ್ಕೆ ಸಲ್ಲಿಸಬೇಕಾದ ಮಾಹಿತಿಗಳ ಕುರಿತು ಜಿಲ್ಲಾ ಸಂಯೋಜಕರಾದ ಶ್ರೀ ಓಂಕಾರ ಧರಣೆಯವರು ಮಾಹಿತಿ ನೀಡಿದರು. ಈ ಸಂದರ್ಭದಲ್ಲಿ ಕೊಪ್ಪಳ ಜಿಲ್ಲಾ ಒಕ್ಕೂಟದ ಅಧ್ಯಕ್ಷರಾದ ಶ್ರೀ ನಾಗಲಿಂಗಪ್ಪ ಪತ್ತಾರರವರು ಉಪಸ್ಥಿತ–

ರಿದ್ದರು. ಸದರಿ ತರಬೇತಿಯಲ್ಲಿ 24 ಸಹಕಾರಿಗಳಿಂದ 29 ಪ್ರತಿನಿಧಿಗಳು ಭಾಗವಹಿಸಿದ್ದರು.

**ಬಳ್ಳಾರಿ :** ದಿನಾಂಕ 09.10.2023 ರಂದು ಬೆಳಿಗ್ಗೆ ಬಳ್ಳಾರಿ ಜಿಲ್ಲೆಯ ಸಿರುಗುಪ್ಪ ಮತ್ತು ಕುರುಗೋಡು ತಾಲೂಕಿನ ಸೌಹಾರ್ದ ಸಹಕಾರಿಗಳಿಗೆ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಹನುಮಂತಯ್ಯಶೆಟ್ಟಿಯವರ ಅಧ್ಯಕ್ಷತೆಯಲ್ಲಿ ಕ್ಲಸ್ಟರ್ ಮಟ್ಟದ ತರಬೇತಿಯನ್ನು ಸಿರುಗುಪ್ಪ ತಾಲೂಕಿನ ವಿಷ್ಣುವಿಲಾಸ ಸೌಹಾರ್ದ ಸಹಕಾರಿಯಲ್ಲಿ ಆಯೋಜಿಸಲಾಗಿತ್ತು. ಸದರಿ ತರಬೇತಿಯಲ್ಲಿ ಲೆಕ್ಕಪರಿಶೋಧನೆ, ಸಾಮಾನ್ಯ ಸಭೆಯ ಕುರಿತು, ಕಲಂ 34 ರಡಿ ಸಲ್ಲಿಸುವ ಮಾಹಿತಿ ಮತ್ತು ಚುನಾವಣೆ ಪ್ರಸ್ತಾವನೆ ಸಲ್ಲಿಸುವ ಕುರಿತು ಮಾನ್ಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಸೂರ್ಯಕಾಂತ ರ‍್ಯಾಕಲೆಯವರು ಮತ್ತು ಜಿಲ್ಲಾ ಸಂಯೋಜಕರಾದ ಶ್ರೀ ರವಿಕುಮಾರ ಕೆ.ಆರ್ ರವರು ಮಾಹಿತಿ ನೀಡಿದರು. ತರಬೇತಿಯಲ್ಲಿ 2 ತಾಲೂಕಿನಿಂದ 22 ಸಹಕಾರಿಗಳಿಂದ 23 ಪ್ರತಿನಿಧಿಗಳು ಭಾಗವಹಿಸಿದ್ದರು.

ದಿನಾಂಕ 09.10.2023 ರಂದು ಮಧ್ಯಾಹ್ನದ ಅವಧಿಯಲ್ಲಿ ಬಳ್ಳಾರಿ ಜಿಲ್ಲೆಯ ಸೌಹಾರ್ದ ಸಹಕಾರಿಗಳಿಗೆ ಕ್ಲಸ್ಟರ್ ಮಟ್ಟದ ತರಬೇತಿಯನ್ನು ಕನ್ನಡ ಮತ್ತು ಸಂಸ್ಕೃತ ಇಲಾಖೆಯ ಹೊಂಗಿರಣ ಸಭಾಂಗಣದಲ್ಲಿ ಆಯೋಜಿಸಲಾಗಿತ್ತು. ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಹೆಚ್ ಜಿ ಹನುಮಂತಯ್ಯವರು ತರಬೇತಿಯ ಅಧ್ಯಕ್ಷತೆ ವಹಿಸಿ ಸಹಕಾರಿಗಳ ಗುಣಮಟ್ಟದ ಬೆಳವಣಿಗೆಯಲ್ಲಿ ನಮ್ಮ ಪಾತ್ರದ ಮಹತ್ವದ ಬಗ್ಗೆ ವಿವರಿಸಿದರು. ಮಾನ್ಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಸೂರ್ಯಕಾಂತ ರ‍್ಯಾಕಲೆಯವರು ಲೆಕ್ಕಪರಿಶೋಧನೆ, ಕಲಂ 34 ರಡಿ ಸಲ್ಲಿಸುವ ಮಾಹಿತಿ ಮತ್ತು ಚುನಾವಣೆ ಪ್ರಸ್ತಾವನೆ ಸಲ್ಲಿಸುವ ಕುರಿತು ಮತ್ತು ಜಿಲ್ಲಾ ಸಂಯೋಜಕರಾದ ಶ್ರೀ ರವಿಕುಮಾರ ಕೆ.ಆರ್‌ರವರು ಸಾಮಾನ್ಯ ಸಭೆಯ ಕುರಿತು, ಮಾಹಿತಿ ನೀಡಿದರು. ತರಬೇತಿಯಲ್ಲಿ 27 ಸಹಕಾರಿಗಳ ಪ್ರತಿನಿಧಿಗಳು ಭಾಗವಹಿಸಿದ್ದರು.

ದಿನಾಂಕ 10.10.2023 ರಂದು ಬೆಳಿಗ್ಗೆ ಬಳ್ಳಾರಿ ಜಿಲ್ಲೆಯ ಸಂಡೂರು ತಾಲ್ಲೂಕಿನ ಸೌಹಾರ್ದ ಸಹಕಾರಿಗಳಿಗೆ ಕ್ಲಸ್ಟರ್ ಮಟ್ಟದ ತರಬೇತಿಯನ್ನು ಸಂಡೂರು ಪಟ್ಟಣ ಸೌಹಾರ್ದ ಸಹಕಾರಿ ಬ್ಯಾಂಕ್ ನಿ.,ಸಂಡೂರುನಲ್ಲಿ ಆಯೋಜಿಸಲಾಗಿತ್ತು. ಸದರಿ ತರಬೇತಿಯ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಹೆಚ್ ಹನುಮಂತಯ್ಯಶೆಟ್ಟಿಯವರ ಅಧ್ಯಕ್ಷತೆಯಲ್ಲಿ ಜರುಗಿತು. ಲೆಕ್ಕಪರಿಶೋಧನೆ, ಕಲಂ 34 ರಡಿ ಸಲ್ಲಿಸುವ ಮಾಹಿತಿ ಮತ್ತು ಚುನಾವಣೆ ಪ್ರಸ್ತಾವನೆ ಸಲ್ಲಿಸುವ ಕುರಿತು ಮಾನ್ಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಸೂರ್ಯಕಾಂತ ರ‍್ಯಾಕಲೆಯವರು ಮತ್ತು ಸಾಮಾನ್ಯ ಸಭೆಯ ಕುರಿತು, ಜಿಲ್ಲಾ ಸಂಯೋಜಕರಾದ ಶ್ರೀ ರವಿಕುಮಾರ ಕೆ.ಆರ್ ರವರು ಮಾಹಿತಿ ನೀಡಿದರು. ತರಬೇತಿಯಲ್ಲಿ 07 ಸಹಕಾರಿಗಳ ಪ್ರತಿನಿಧಿಗಳು ಭಾಗವಹಿಸಿದ್ದರು.

ಮಧ್ಯಾಹ್ನದ ಅವಧಿಯಲ್ಲಿ ಬಳ್ಳಾರಿ ಜಿಲ್ಲೆಯ ಕಂಪ್ಲಿ ತಾಲ್ಲೂಕಿನ ಸೌಹಾರ್ದ ಸಹಕಾರಿಗಳಿಗೆ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಹೆಚ್ ಹನುಮಂತಯ್ಯಶೆಟ್ಟಿಯವರ ಅಧ್ಯಕ್ಷತೆಯಲ್ಲಿ ಕ್ಲಸ್ಟರ್ ಮಟ್ಟದ ತರಬೇತಿಯನ್ನು ಕಂಪ್ಲಿ ಸಿಟಿ ಸೌಹಾರ್ದ ಸಹಕಾರಿ ನಿ.,ಕಂಪ್ಲಿಯಲ್ಲಿ ಆಯೋಜಿಸಲಾಗಿತ್ತು. ಸದರಿ ತರಬೇತಿಯಲ್ಲಿ ಲೆಕ್ಕಪರಿಶೋಧನೆ, ಸಾಮಾನ್ಯ ಸಭೆಯ ಕುರಿತು, ಕಲಂ 34 ರಡಿ ಸಲ್ಲಿಸುವ ಮಾಹಿತಿ ಮತ್ತು ಚುನಾವಣೆ ಪ್ರಸ್ತಾವನೆ ಸಲ್ಲಿಸುವ ಕುರಿತುಮಾನ್ಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಸೂರ್ಯಕಾಂತ ರ‍್ಯಾಕಲೆಯವರು ಮತ್ತು ಜಿಲ್ಲಾ ಸಂಯೋಜಕರಾದ ಶ್ರೀ ರವಿಕುಮಾರ ಕೆ.ಆರ್ ರವರು ಮಾಹಿತಿ ನೀಡಿದರು. ತರಬೇತಿಯಲ್ಲಿ 06 ಸಹಕಾರಿಗಳ ಪ್ರತಿನಿಧಿಗಳು ಭಾಗವಹಿಸಿದ್ದರು.

**ವಿಜಯನಗರ :** ದಿನಾಂಕ 16.10.2023 ರಂದು ಬೆಳಿಗ್ಗೆ ವಿಜಯನಗರ ಜಿಲ್ಲೆಯ ಕೊಟ್ಟೂರು ಮತ್ತು ಕೂಡ್ಲಿಗಿ ತಾಲ್ಲೂಕಿನ ಸೌಹಾರ್ದ ಸಹಕಾರಿಗಳಿಗೆ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡರವರ ಅಧ್ಯಕ್ಷತೆಯಲ್ಲಿ ಕ್ಲಸ್ಟರ್ ಮಟ್ಟದ ತರಬೇತಿಯನ್ನು ಇಂದು ಕಾಲೇಜಿನ ಸಭಾಂಗಣದಲ್ಲಿ ಆಯೋಜಿಸಲಾಗಿತ್ತು. ಮಾನ್ಯ ಅಧ್ಯಕ್ಷರು ಸಹಕಾರಿಗಳ ಪ್ರತಿನಿಧಿಗಳನ್ನು ಉದ್ದೇಶಿಸಿ ಪ್ರಸ್ತುತ ಸಹಕಾರಿ ಕ್ಷೇತ್ರದಲ್ಲಿ ಅನೇಕ ಬದಲಾವಣೆಗಳಾಗುತ್ತಿದ್ದ ರಾಜ್ಯ ಸರ್ಕಾರದಿಂದ ಸಹಕಾರ ಕ್ಷೇತ್ರದ ಬಗ್ಗೆ ಅಧ್ಯಯನ ಮಾಡಿ ವರದಿ ನಿಡಲು ಸಮಿತಿ ನೇಮಕವಾಗಿದ್ದು, ಮುಂದಿನ ದಿನಗಳಲ್ಲಿ ಕಾನೂನುಗಳು ಬಿಗಿಯಾಗುತ್ತವೆ. ಆದ ಕಾರಣ ಸಹಕಾರ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುತ್ತಿರುವ ನಾವು ನಮ್ಮ ಮೇಲೆ ಜವಾಬ್ದಾರಿ ಇದ್ದು, ಕಾಯ್ದೆ, ಕಾನೂನುಗಳು ಮೀರಿ ಯಾರು ಕಾರ್ಯನಿರ್ವಹಿಸಬಾರದು. ಸಂಯುಕ್ತ ಸಹಕಾರಿಯ ಸಹಕಾರಿಗಳು ತಪ್ಪು ಮಾಡಿದರೆ ನಿರ್ದಾಕ್ಷಿಣ್ಯವಾಗಿ ಕ್ರಮ ಜರುಗಿಸುತ್ತವೆ ಎಂದು ಮಾಹಿತಿ ನೀಡಿದರು. ನಂತರ ಲೆಕ್ಕಪರಿಶೋಧನೆ, ಕಲಂ 34 ರಡಿ ಸಲ್ಲಿಸುವ ಮಾಹಿತಿ ಮತ್ತು ಚುನಾವಣೆ ಪ್ರಸ್ತಾವನೆ ಸಲ್ಲಿಸುವ ಕುರಿತು ಮಾನ್ಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಸೂರ್ಯಕಾಂತ ರ‍್ಯಾಕಲೆಯವರು ಮತ್ತು ಸಾಮಾನ್ಯ ಸಭೆಯ ಕುರಿತು ಜಿಲ್ಲಾ ಸಂಯೋಜಕರಾದ ಶ್ರೀ ರವಿಕುಮಾರ ಕೆ.ಆರ್ ರವರು ಮಾಹಿತಿ ನೀಡಿದರು. ತರಬೇತಿಯಲ್ಲಿ 2 ತಾಲೂಕಿನ 20 ಸಹಕಾರಿಗಳ ಪ್ರತಿನಿಧಿಗಳು ಭಾಗವಹಿಸಿದ್ದರು.

ದಿನಾಂಕ 16.10.2023 ರಂದು ಮಧ್ಯಾಹ್ನದ ಅವಧಿಯಲ್ಲಿ ವಿಜಯನಗರ ಜಿಲ್ಲೆಯ ಹರಪ್ಪನಹಳ್ಳಿ ತಾಲ್ಲೂಕಿನ ಸೌಹಾರ್ದ ಸಹಕಾರಿಗಳಿಗೆ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡರವರ ಅಧ್ಯಕ್ಷತೆಯಲ್ಲಿ ಕ್ಲಸ್ಟರ್ ಮಟ್ಟದ ತರಬೇತಿಯನ್ನು ವೀರಸೈವ ಪಂಚಮಸಾಲಿ ಸೌಹಾರ್ದ ಸಹಕಾರಿಯಲ್ಲಿ ಆಯೋಜಿಸಲಾಗಿತ್ತು. ಸದರಿ ತರಬೇತಿಯಲ್ಲಿ ಲೆಕ್ಕಪರಿಶೋಧನೆ, ಸಾಮಾನ್ಯ ಸಭೆಯ ಕುರಿತು, ಕಲಂ 34 ರಡಿ ಸಲ್ಲಿಸುವ ಮಾಹಿತಿ ಮತ್ತು ಚುನಾವಣೆ ಪ್ರಸ್ತಾವನೆ ಸಲ್ಲಿಸುವ ಕುರಿತು ಮಾನ್ಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಸೂರ್ಯಕಾಂತ ರ‍್ಯಾಕಲೆಯವರು ಮತ್ತು ಜಿಲ್ಲಾ ಸಂಯೋಜಕರಾದ ಶ್ರೀ ರವಿಕುಮಾರ ಕೆ.ಆರ್ ರವರು ಮಾಹಿತಿ ನೀಡಿದರು. ತರಬೇತಿಯಲ್ಲಿ 25 ಸಹಕಾರಿಗಳ ಪ್ರತಿನಿಧಿಗಳು.

ದಿನಾಂಕ 17.10.2023 ರಂದು ವಿಜಯನಗರ ಜಿಲ್ಲೆಯ ಯ ಹೂವಿನಹಡಗಲಿ ತಾಲ್ಲೂಕಿನ ಸೌಹಾರ್ದ ಸಹಕಾರಿಗಳಿಗೆ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡರವರ ಅಧ್ಯಕ್ಷತೆಯಲ್ಲಿ ಕ್ಲಸ್ಟರ್ ಮಟ್ಟದ ತರಬೇತಿಯನ್ನು ಜಿಬಿಆರ್ ಕಾಲೇಜಿನ ಸಭಾಂಗಣದಲ್ಲಿ ಆಯೋಜಿಸಲಾಗಿತ್ತು. ಸದರಿ ತರಬೇತಿಯಲ್ಲಿ ಲೆಕ್ಕಪರಿಶೋಧನೆ, ಸಾಮಾನ್ಯ ಸಭೆಯ ಕುರಿತು, ಕಲಂ 34 ರಡಿ ಸಲ್ಲಿಸುವ ಮಾಹಿತಿ ಮತ್ತು ಚುನಾವಣೆ ಪ್ರಸ್ತಾವನೆ ಸಲ್ಲಿಸುವ ಕುರಿತು ಮಾನ್ಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಸೂರ್ಯಕಾಂತ ರ‍್ಯಾಕಲೆಯವರು ಮತ್ತು ಜಿಲ್ಲಾ ಸಂಯೋಜಕರಾದ ಶ್ರೀ ರವಿಕುಮಾರ ಕೆ.ಆರ್ ರವರು ಮಾಹಿತಿ ನೀಡಿದರು. ತರಬೇತಿಯಲ್ಲಿ 22 ಸಹಕಾರಿಗಳ ಪ್ರತಿನಿಧಿಗಳು ಭಾಗವಹಿಸಿದ್ದರು.

## ಶಿವಮೊಗ್ಗ ಜಿಲ್ಲಾದ್ಯಂತ ಸಂಪರ್ಕ ಸಭೆಗಳ ವರದಿ



**ಶಿವಮೊಗ್ಗ :** ಶಿವಮೊಗ್ಗ ಜಿಲ್ಲೆಯಾದ್ಯಂತ ತಾಲ್ಲೂಕುವಾರು ಸೌಹಾರ್ದ ಸಹಕಾರಿ ಸಂಘಗಳ ಅಧ್ಯಕ್ಷರು/ಮುಖ್ಯಕಾರ್ಯನಿರ್ವಾಹರಿಗೆ ಸಂಪರ್ಕ ಸಭೆಗಳನ್ನು ಸಂಯುಕ್ತ ಸಹಕಾರಿಯ ಮಾನ್ಯ ಉಪಾಧ್ಯಕ್ಷರಾದ ಶ್ರೀ ಎ.ಆರ್. ಪ್ರಸನ್ನಕುಮಾರರವರ ಅಧ್ಯಕ್ಷತೆಯಲ್ಲಿ ಆಯೋಜನೆ ಮಾಡಲಾಗಿತ್ತು. ವಿವರ ಈ ಕೆಳಗಿನಂತಿದೆ.

ತೀರ್ಥಹಳ್ಳಿ ತಾಲ್ಲೂಕು ದಿನಾಂಕ 10.10.2023 ರಂದು 28 ಪ್ರತಿನಿಧಿಗಳು, ಹೊಸನಗರ ತಾಲ್ಲೂಕು ದಿನಾಂಕ 11.10.2023 ರಂದು 13 ಪ್ರತಿನಿಧಿಗಳು, ಸಾಗರ ತಾಲ್ಲೂಕು ದಿನಾಂಕ 11.10.2023 ರಂದು 24 ಪ್ರತಿನಿಧಿಗಳು, ಭದ್ರಾವತಿ ತಾಲ್ಲೂಕು ದಿನಾಂಕ 12.10.2023 ರಂದು 12 ಪ್ರತಿನಿಧಿಗಳು, ಶಿವಮೊಗ್ಗ ತಾಲ್ಲೂಕು ದಿನಾಂಕ 12.10.2023 ರಂದು 32 ಪ್ರತಿನಿಧಿಗಳು, ಶಿಕಾರಿಪುರ ಮತ್ತು ಸೊರಬ ತಾಲ್ಲೂಕು ದಿನಾಂಕ 16.10.2023 ರಂದು 18 ಪ್ರತಿನಿಧಿಗಳು ಭಾಗವಹಿಸಿದರು.

## ಅಭಿನಂದನೆ



ಧಾರವಾಡ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕಿಗೆ 5ನೇ ಬಾರಿಗೆ ನಿರ್ದೇಶಕರಾಗಿ ಆಯ್ಕೆಯಾಗಿರುವ ಸಂಯುಕ್ತ ಸಹಕಾರಿಯ ಮಾನ್ಯ ಶ್ರೀ ಮಲ್ಲಿಕಾರ್ಜುನ ಅಜ್ಜಪ್ಪ ಹೊರಕೇರಿಯವರಿಗೆ ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿ ನಿರ್ದೇಶಕರ ಪರವಾಗಿ ಅಭಿನಂದನೆಗಳನ್ನು ಸಲ್ಲಿಸಿದರು. ನಂತರ ಮಾನ್ಯರನ್ನು ಸನ್ಮಾನಿಸಲಾಯಿತು.



ಟಿಎಪಿಸಿಎಂಎಸ್ ಚಿಕ್ಕೋಡಿ ಸಂಸ್ಥೆಗೆ 5ನೇ ಬಾರಿಗೆ ಅಧ್ಯಕ್ಷರಾಗಿ ಆಯ್ಕೆಯಾಗಿರುವ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಜಗದೀಶ್ ಮಲ್ಲಿಕಾರ್ಜುನ ಕವಟಗಿಮಠ ಇವರಿಗೆ ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿ ನಿರ್ದೇಶಕರ ಪರವಾಗಿ ಅಭಿನಂದನೆಗಳನ್ನು ಸಲ್ಲಿಸಿದರು. ನಂತರ ಮಾನ್ಯರನ್ನು ಸನ್ಮಾನಿಸಲಾಯಿತು.

## ಸಂಯುಕ್ತ ಸಹಕಾರಿಯ ಮುಂಬರುವ ತರಬೇತಿ ಕಾರ್ಯಕ್ರಮಗಳು

ಸಂಯುಕ್ತ ಸಹಕಾರಿಯ ವತಿಯಿಂದ ನವೆಂಬರ್ 4ನೇ ವಾರದಲ್ಲಿ ಅಥವಾ ಡಿಸೆಂಬರ್ 1ನೇ ವಾರದಲ್ಲಿ ಸೌಹಾರ್ದ ಪಟ್ಟಣ ಸಹಕಾರ ಬ್ಯಾಂಕುಗಳ ಅಧ್ಯಕ್ಷರು, ನಿರ್ದೇಶಕರು ಮತ್ತು ವೃತ್ತಿಪರ ನಿರ್ದೇಶಕರುಗಳಿಗಾಗಿ 2 ದಿನಗಳ "ಉನ್ನತ ಮಟ್ಟದ ವಿಶೇಷ ತರಬೇತಿ" ಕಾರ್ಯಕ್ರಮವನ್ನು ಹಾಗೂ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಮತ್ತು ಹಿರಿಯ ಅಧಿಕಾರಿಗಳಿಗಾಗಿ 2 ದಿನಗಳ "ವೃತ್ತಿ ಪರಿಣಿತಿ" ತರಬೇತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲು ಉದ್ದೇಶಿಸಿದೆ.

ಪಟ್ಟಣ ಸಹಕಾರ ಬ್ಯಾಂಕುಗಳು ಈ ಎರಡು ತರಬೇತಿಗಳಿಗೆ ತಾವು ಅಪೇಕ್ಷಿಸುವ ವಿಷಯಗಳ ಬಗ್ಗೆ ಮತ್ತು ಸಂಪನ್ಮೂಲ ವ್ಯಕ್ತಿಗಳ ವಿವರಗಳನ್ನು ದಿನಾಂಕ 18.11.2023 ರ ಒಳಗಾಗಿ ಕಳುಹಿಸಲು ಕೋರಿದೆ. ಕಾರ್ಯಕ್ರಮದ ಸ್ಥಳ ಹಾಗೂ ದಿನಾಂಕಗಳನ್ನು ಸಧ್ಯದಲ್ಲಿಯೇ ತಿಳಿಸಲಾಗುವುದು.

## ಅಕ್ಟೋಬರ್ – 2023 : ಶಾಸನತ್ಮಾಕ ವಿಭಾಗದ ಕಾರ್ಯಚಟುವಟಿಕೆಗಳು

ದಶಮಿ ಸೌಹಾರ್ದ ಕ್ರೆಡಿಟ್ ಕೋ–ಆಪ್ ಲಿ., ಬೆಂಗಳೂರು ಸಹಕಾರಿಯ ಆಡಳಿತ ಮಂಡಲಿಯ ಅಧಿಕಾರಾವಧಿಯು ಮುಕ್ತಾಯವಾದ ಹಾಗೂ ನೂತನ ಆಡಳಿತ ಮಂಡಲಿಯು ರಚನೆಯಾಗದಿರುವ ಹಿನ್ನಲೆಯಲ್ಲಿ ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997ರ ಕಲಂ 38ಎ ರಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ದಶಮಿ ಸೌಹಾರ್ದ ಕ್ರೆಡಿಟ್ ಕೋ–ಆಪ್ ಲಿ., ಬೆಂಗಳೂರು ಇದರ ವಿಶೇಷಾಧಿಕಾರಿಯಾಗಿ ಶ್ರೀ ಬಲರಾಮ್ ಎನ್. ಕಿರಿಯ ವ್ಯವಸ್ಥಾಪಕರು, ಕೇಂದ್ರ ಕಛೇರಿ, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇವರನ್ನು ಆರು ತಿಂಗಳಿಗೆ ಮೀರದ ಅವಧಿಗೆ ಅಥವಾ ಸಹಕಾರಿಯ ಆಡಳಿತ ಮಂಡಲಿಯ ಎಲ್ಲಾ ಸ್ಥಾನಗಳಿಗೆ ಚುನಾವಣೆ ನಡೆದು ಆಡಳಿತ ಮಂಡಲಿಯ ಸದಸ್ಯರ ಸಂಖ್ಯೆಯು ಕೋರಂಗೆ ಅಗತ್ಯ ಸಂಖ್ಯೆ ಆಗುವವರೆಗೆ ಇದರಲ್ಲಿ ಯಾವುದು ಮೊದಲು ಆ ಸಮಯದವರೆಗೆ ವಿಶೇಷಾಧಿಕಾರಿಯನ್ನಾಗಿ ದಿನಾಂಕ 11.10.2023ರಂದು ನೇಮಕ ಮಾಡಲಾಗಿರುತ್ತದೆ.

# ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,

ಶಾಸನಬದ್ದ ಸಹಕಾರಿ ಸಂಸ್ಥೆ
ಸೌಹಾರ್ದ ಸಹಕಾರಿ ಸೌಧ, ನಂ.68, 18ನೇ ಅಡ್ಡರಸ್ತೆ ಮಧ್ಯೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು–560055
www.souharda.coop, Ph: 080–23378375–80, Email:souharda@souharda.coop

ಸಂಖ್ಯೆ : ಸಂಸ/ಶಿವಿ/ವ್ಯ.ವಿ.ತ/2023–24

**ಸುತ್ತೋಲೆ**

ದಿನಾಂಕ : 19.10.2023

ಇವರಿಗೆ,
ಮಾನ್ಯ ಅಧ್ಯಕ್ಷರು/ ಮುಖ್ಯಕಾರ್ಯನಿರ್ವಾಹಕರು
ರಾಜ್ಯದ ಎಲ್ಲಾ ಸೌಹಾರ್ದ ಸಹಕಾರಿಗಳು.

ಮಾನ್ಯರೇ,

**ವಿಷಯ : ಸೌಹಾರ್ದ ಸಹಕಾರಿಗಳ ಸಿಬ್ಬಂದಿಗಳ 10 ದಿನಗಳ ವ್ಯಕ್ತಿತ್ವ ವಿಕಸನ ವಿಶೇಷ ತರಬೇತಿಗೆ ಅಭ್ಯರ್ಥಿಗಳನ್ನು ಕಳುಹಿಸುವ ಕುರಿತು.**

ಈ ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ತಮ್ಮ ಅವಗಾಹನೆಗೆ ತರಬಯಸುವುದೇನೆಂದರೆ, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯು, ಸೌಹಾರ್ದ ಸಹಕಾರಿ ಕ್ಷೇತ್ರದ ಶಾಸನಬದ್ಧ ಕಾರ್ಯನಿರ್ವಹಣೆಯ ಜೊತೆಗೆ ರಾಜ್ಯದ ಸೌಹಾರ್ದ ಸಹಕಾರಿಗಳ ಅಭಿವೃದ್ಧಿಗಾಗಿ ಹಲವಾರು ತರಬೇತಿ ಕಾರ್ಯಕ್ರಮಗಳನ್ನು ರಾಜ್ಯಾದ್ಯಂತ ಹಮ್ಮಿಕೊಳ್ಳುತ್ತ ಬಂದಿದೆ.

ಸೌಹಾರ್ದ ಸಹಕಾರಿಗಳ ಸಿಬ್ಬಂದಿಯವರಿಗಾಗಿ ವ್ಯಕ್ತಿತ್ವ ವಿಕಸನ 10 ದಿನಗಳ ದೀರ್ಘಾವಧಿ ತರಬೇತಿಯನ್ನು ಆಯೋಜಿಸುತ್ತ ಬರಲಾಗಿದೆ. ಈಗಾಗಲೇ ಹುಲಕೋಟಿ, ಕುಪ್ಪಳ್ಳಿ, ಕೆಮ್ಮಣ್ಣುಗುಂಡಿ, ಮೈಸೂರು, ಧಾರವಾಡ, ಹಂಪಿ, ಹೆಗ್ಗೋಡು, ಗುರುವಾಯನಕೆರೆ, ಯಲ್ಲಾಪುರ, ಕಮಲಾಪುರ, ಬೆಂಗಳೂರು, ಕೂಡಲಸಂಗಮ, ಶ್ರೀರಂಗಪಟ್ಟಣ ಮತ್ತು ಕೃಷಿ ವಿಶ್ವವಿದ್ಯಾಲಯ ರಾಯಚೂರು, ಕುಪ್ಪಳ್ಳಿ ಈ ಸ್ಥಳಗಳಲ್ಲಿ ನಡೆಸಿದ್ದು, ತರಬೇತಿ ಕಾರ್ಯಕ್ರಮಗಳು ಬಹಳ ಪ್ರಯೋಜನಕಾರಿಯಾಗಿತ್ತೆಂದು, ವ್ಯಕ್ತಿತ್ವ ವಿಕಸನಕ್ಕೆ ಉತ್ತಮ ಅವಕಾಶವಾಗಿತ್ತೆಂದು ಶಿಬಿರಾರ್ಥಿಗಳು ಹಾಗೂ ಅತಿಥಿಗಣ್ಯರು ಅಭಿಪ್ರಾಯ ನೀಡಿದ್ದಾರೆ. ಕ್ಷೇತ್ರದ ಸೌಹಾರ್ದ ಪ್ರಸ್ತುತ 22ನೇ ತಂಡದ ತರಬೇತಿ ಕಾರ್ಯಕ್ರಮವನ್ನು ಒಡಿಯೂರು ಶ್ರೀ ಗುರುದೇವದತ್ತ ಸಂಸ್ಥಾನಮ್ ಶ್ರೀ ದತ್ತಾಂಜನೇಯ ಕ್ಷೇತ್ರ, ದಕ್ಷಿಣ ಗಾಣಗಾಪುರ ಅಂಚೆ, ಒಡಿಯೂರು–574243 ಬಂಟ್ವಾಳ ತಾಲ್ಲೂಕು, ದಕ್ಷಿಣ ಕನ್ನಡ ಜಿಲ್ಲೆ ಇಲ್ಲಿ ದಿನಾಂಕ 07 ರಿಂದ 16 ಡಿಸೆಂಬರ್ 2023ರವರೆಗೆ ನಡೆಸಲು ತೀರ್ಮಾನಿಸಲಾಗಿದೆ. ತರಬೇತಿ ಕಾರ್ಯಕ್ರಮದ ವಿವರಗಳು ಈ ಕೆಳಗಿನಂತಿವೆ.

**ತರಬೇತಿ ವಿಷಯಗಳು**

- ಸಹಕಾರ – ಸಹಕಾರ ಸಂಘ – ಸಹಕಾರ ತತ್ವಗಳು – ಸಹಕಾರಕಾಯ್ದೆ – ಸಹಕಾರ ಚಳುವಳಿಯ ಹುಟ್ಟು ಬೆಳವಣಿಗೆ – ಸಾಧನೆಗಳು
- ಸೌಹಾರ್ದ ಸಹಕಾರ ಕಾಯ್ದೆ ಆಶಯ – ಹುಟ್ಟು, ಬೆಳವಣಿಗೆ – ಸಹಕಾರಕಾಯ್ದೆ ಹಾಗೂ ಸೌಹಾರ್ದ ಸಹಕಾರ ಕಾಯ್ದೆ ವ್ಯತ್ಯಾಸಗಳು – ಕಾಯ್ದೆಯ ಮುಖ್ಯಾಂಶಗಳು – ಸೌಹಾರ್ದ ಸಹಕಾರಿಗಳ ಉಪವಿಧಿಗಳು ತಿದ್ದುಪಡಿ ವಿಧಾನ – ಸಂಯುಕ್ತ ಸಹಕಾರಿಯ ಕಾರ್ಯಚಟುವಟಿ–ಕೆಗಳು – ಸಹಕಾರಕ್ಷೇತ್ರದ ಪ್ರಚಲಿತ ವಿಷಯಗಳು
- ಕಚೇರಿ ಆಡಳಿತ ನಿರ್ವಹಣೆ – ಕಡತಗಳ ನಿರ್ವಹಣೆ – ಸಮಯ ಪಾಲನೆ – ಸೌಹಾರ್ದ ಸಹಕಾರಿಗಳ ಆಡಳಿತ ನಿರ್ವಹಣೆ
- ಸಭೆಗಳು – ಆಡಳಿತ ಮಂಡಲಿ ಸಭೆ – ವಾರ್ಷಿಕ ಸಾಮಾನ್ಯ ಸಭೆ – ವಿಶೇಷ ಸಭೆ – ಪ್ರಾಯೋಗಿಕ–1
- ಸೌಹಾರ್ದ ಸಹಕಾರಿಗಳ ಲೆಕ್ಕಪತ್ರಗಳ ನಿರ್ವಹಣೆ – ಜಮಾ ಖರ್ಚು – ಲಾಭ ನಷ್ಟಖಾತೆ – ಆಸ್ತಿ ಜವಾಬ್ದಾರಿ ತಃಖ್ತೆ –ಬ್ಯಾಂಕ್ ಸಮನ್ವಯ ಪಟ್ಟಿ ಸಿದ್ಧಪಡಿಸುವುದು ಹಾಗೂ ವಿಶ್ಲೇಷಿಸುವುದು.–ಪ್ರಾಯೋಗಿಕ–2
- ಹಣಕಾಸಿನ ನಿರ್ವಹಣೆ – ಸಂಪನ್ಮೂಲಗಳ ಕ್ರೋಢೀಕರಣ ಹಾಗೂ ಲಾಭದಾಯಕ ಹೂಡಿಕೆ – ಬಡ್ಡಿಯೇತರ ಆದಾಯಗಳು – ಸಾಲಗಳ ನಿರ್ವಹಣೆ – ಗುಣಮಟ್ಟಗಳ ಸಾಲ ನೀಡಿಕೆ
- ಸಾಲ ವಸೂಲಾತಿ ಕ್ರಮಗಳು – ಮಾರಾಟಗಾರನ ಕರ್ತವ್ಯಗಳು
- ಬ್ಯಾಂಕಿಂಗ್ ಕ್ಷೇತ್ರದ ಪ್ರಚಲಿತ ವಿಷಯಗಳು
- ಗ್ರಾಹಕ ಸೇವೆಗಳ ನಿರ್ವಹಣೆ ವ್ಯವಹಾರ ಅಭಿವೃದ್ಧಿ ಯೋಜನೆ ಒತ್ತಡ ನಿರ್ವಹಣೆ – ವ್ಯಕ್ತಿತ್ವ ವಿಕಸನ – ಮಾನವೀಯ ಮೌಲ್ಯಗಳ ನಿರ್ವಹಣೆ ಆಂತರಿಕ ಸಂಬಂಧಗಳ ನಿರ್ವಹಣೆ ಹಾಗೂ ಇತರೆ ಮಹತ್ವದ ಅಗತ್ಯ ವಿಷಯಗಳು.

ತರಬೇತಿ ಅವಧಿಯಲ್ಲಿ ಪಠ್ಯಕ್ರಮದಂತೆ ಪ್ರತಿ ದಿನ ಯೋಗ, ಒಂದು ಬಾರಿ ಆರೋಗ್ಯ ತಪಾಸಣೆ, ಸಾಮೂಹಿಕ ಕಾರ್ಯಕ್ರಮಗಳು, ಪ್ರಾಯೋಗಿಕಗಳು,

ಅಧ್ಯಯನ ಪ್ರವಾಸಗಳು, ಉತ್ತಮ ಸಹಕಾರಿ ಸಂಸ್ಥೆಗಳಿಗೆ ಭೇಟಿ ವ್ಯವಸ್ಥೆ ಇರುತ್ತದೆ.

ಸೌಹಾರ್ದ ಸಹಕಾರಿಗಳ ಅಭಿವೃದ್ಧಿಯ ದೃಷ್ಟಿಯಿಂದ ಇಂತಹ ವಿಶೇಷ ತರಬೇತಿ ಕಾರ್ಯಕ್ರಮಗಳಲ್ಲಿ ಭಾಗವಹಿಸಲು ಅಭ್ಯರ್ಥಿಗಳನ್ನು ಕಳುಹಿಸುವುದು ಅಗತ್ಯವೆನಿಸುತ್ತದೆ. ಕಾರ್ಯಕ್ರಮದಲ್ಲಿ 50 ಜನರಿಗೆ ಮಾತ್ರ ಭಾಗವಹಿಸಲು ಅವಕಾಶವಿರುವುದರಿಂದ ಮೊದಲು ಅರ್ಜಿಯನ್ನು ಸಲ್ಲಿಸಿದವರಿಗೆ ಆದ್ಯತೆ ನೀಡಲಾಗುವುದು. ಭಾಗವಹಿಸುವವರ ಸಂಖ್ಯೆ ನಿಗಧಿತ ಸಂಖ್ಯೆಗಿಂತ ಹೆಚ್ಚಾದಲ್ಲಿ ಮುಂದಿನ ತಂಡದಲ್ಲಿ ತರಬೇತಿಗೆ ಅವಕಾಶ ಮಾಡಿಕೊಡಲಾಗುವುದು. ತರಬೇತಿ ಪಡೆದಿರುವುದಕ್ಕೆ ಪ್ರಮಾಣ ಪತ್ರ ನೀಡಲಾಗುವುದು.

ಸೌಹಾರ್ದ ಸಹಕಾರಿಗಳು ತಮ್ಮ ಸಹಕಾರಿಯಿಂದ ಭಾಗವಹಿಸುವ ಅಭ್ಯರ್ಥಿಗಳ ತರಬೇತಿ ಶುಲ್ಕ ಹಾಗೂ ಪ್ರಯಾಣ ವೆಚ್ಚವನ್ನು ಭರಿಸಬೇಕು. ಸಂಯುಕ್ತ ಸಹಕಾರಿಯು ಲಗತ್ತಿಸಿದ ನೋಂದಾವಣೆ ಅರ್ಜಿ ನಮೂನೆಯಲ್ಲಿ, ತಾವು ಕಳುಹಿಸುವ ಅಭ್ಯರ್ಥಿಗಳ ಹೆಸರು, ವಿಳಾಸ, ನಿರ್ವಹಿಸುತ್ತಿರುವ ಹುದ್ದೆ, ಇತ್ಯಾದಿ ವಿವರಗಳನ್ನು ಪ್ರತ್ಯೇಕವಾಗಿ ಭರ್ತಿಮಾಡಿ ಕಳುಹಿಸಿ ನಿಮ್ಮ ಸೀಟು ಕಾಯ್ದಿರಿಸಿಕೊಳ್ಳಲು ತಿಳಿಸಿದೆ. ಹೆಚ್ಚಿನ ವಿವರಗಳಿಗೆ ಸಂಯುಕ್ತ ಸಹಕಾರಿಯ ತರಬೇತಿ ವಿಭಾಗದ ಅಧಿಕಾರಿಗಳನ್ನು ಸಂಪರ್ಕಿಸಲು ಕೋರಿದೆ.

## –: ತರಬೇತಿ ಕಾರ್ಯಕ್ರಮದ ವಿವರಗಳು : –

- ಭಾಗವಹಿಸುವ ವರ್ಗ : ಕಾರ್ಯದರ್ಶಿಗಳು, ಮುಖ್ಯಕಾರ್ಯನಿರ್ವಾಹಕರು, ಅಧಿಕಾರಿಗಳು ಹಾಗೂ ಸಿಬ್ಬಂದಿಗಳು
- ತರಬೇತಿಯ ಅವಧಿ: 10 ದಿನಗಳು – 6 ದಿನಗಳು ಒಳಾಂಗಣ,2 ದಿನಗಳ ಪ್ರಾಯೋಗಿಕ, 2ದಿನಗಳು ಇತರೆ ಚಟುವಟಿಕೆಗಳು, ಅಧ್ಯಯನ ಪ್ರವಾಸದಲ್ಲಿ ಉತ್ತಮ ಸಹಕಾರಿ ಸಂಸ್ಥೆಗಳಿಗೆ, ಸುತ್ತಮುತ್ತಲಿನ ಪ್ರವಾಸಿ ಸ್ಥಳಗಳಿಗೆ ಹಾಗೂ ದೇವಸ್ಥಾನಗಳಿಗೆ ಭೇಟಿ ನೀಡುವ ವ್ಯವಸ್ಥೆ ಮಾಡಲಾಗುವುದು.
- ತರಬೇತಿಯ ಸ್ಥಳ: ಒಡಿಯೂರು ಶ್ರೀ ಗುರುದೇವದತ್ತ ಸಂಸ್ಥಾನಮ್, ಶ್ರೀ ದತ್ತಾಂಜನೇಯ ಕ್ಷೇತ್ರ, ದಕ್ಷಿಣ ಗಾಣಗಾಪುರ ಅಂಚೆ; ಒಡಿಯೂರು–574243 ಬಂಟ್ವಾಳ ತಾಲ್ಲೂಕು, ದಕ್ಷಿಣ ಕನ್ನಡ ಜಿಲ್ಲೆ
- ತರಬೇತಿ ಸೌಲಭ್ಯ : ಊಟ–ಉಪಹಾರ, ವಸತಿ, ಅಧ್ಯಯನ ಸಾಹಿತ್ಯ, ಯೋಗತರಬೇತಿ, ಆರೋಗ್ಯ ತಪಾಸಣೆ ಹಾಗೂ ಉತ್ತಮ ಸಹಕಾ–ರಿ/ಸಂಸ್ಥೆಗಳಿಗೆ ಅಧ್ಯಯನ ಭೇಟಿ. ಮಹಿಳೆಯರಿಗೆ ಪ್ರತ್ಯೇಕ ವಸತಿ ವ್ಯವಸ್ಥೆ ಇರುತ್ತದೆ.
- ತರಬೇತಿ ಶುಲ್ಕ: ರೂ. 5,000/–ಮತ್ತು 18% ಜಿಎಸ್‌ಟಿ. (ಒಟ್ಟು 5900/– ಜಿಎಸ್‌ಟಿ ಸೇರಿದಂತೆ) (ಊಟ,ವಸತಿ ವ್ಯವಸ್ಥೆಗಳಿಗಾಗಿ) ಭಾಗವಹಿಸುವ ಸಹಕಾರಿಯಿಂದ ಭರಿಸಬೇಕು.
- ಅಭ್ಯರ್ಥಿಗಳ ಸಂಖ್ಯೆ : 50 ಮಾತ್ರ
- ತರಬೇತಿಯ ದಿನಾಂಕ : 07.12.2023 ರಿಂದ 16.12.2023
- ತರಬೇತಿಯ ನೋಂದಣಿ ಶುಲ್ಕವನ್ನು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇದರ ಹೆಸರಿನಲ್ಲಿ ಚೆಕ್/ಡಿಡಿಯನ್ನು ಕಳುಹಿಸುವ ಮೂಲಕ ಪಾವತಿಸುವುದು.
- ನೋಂದಾವಣೆಗೆ ಕೊನೆಯ ದಿನಾಂಕ 30.11.2023
- ಸ್ಥಳೀಯ ಸೌಹಾರ್ದ ಸಹಕಾರಿ ಸಂಪರ್ಕ: ಒಡಿಯೂರು ಶ್ರೀ ವಿವಿದೋದ್ದೇಶ ಸೌಹಾರ್ದ ಸಹಕಾರಿ ಸಂಘ ನಿ., ಅಧ್ಯಕ್ಷರು ಶ್ರೀ ಎ. ಸುರೇಶ್ ರೈ– 9448444644 ಮತ್ತು ಮುಖ್ಯಕಾರ್ಯನಿರ್ವಾಹಕರಾದ ಶ್ರೀ ದಯಾನಂದ ಶೆಟ್ಟಿ 8088091199
- ಸಂಯುಕ್ತ ಸಹಕಾರಿ ಸಂಪರ್ಕ ಅಧಿಕಾರಿ : ತರಬೇತಿ ವ್ಯವಸ್ಥಾಪಕರು ಶ್ರೀ ವಿ. ಜೆ. ಕಾರ್‌ಕೂನ್ – 9482734077 ಮತ್ತು ಶ್ರೀ ಮಲ್ಲಿನಾಥ 6363835279

**ತರಬೇತಿ ಕಾರ್ಯಕ್ರಮದ ಸ್ಥಳಕ್ಕೆ ತಲುಪುವ ವ್ಯವಸ್ಥೆಗಳು:**

1. ಒಡಿಯೂರು ಶ್ರೀ ಗುರುದೇವದತ್ತ ಸಂಸ್ಥಾನಮ್ ಶ್ರೀ ದತ್ತಾಂಜನೇಯ ಕ್ಷೇತ್ರ, ದಕ್ಷಿಣ ಗಾಣಗಾಪುರ ಅಂಚೆ: ಒಡಿಯೂರು–574243 ಬಂಟ್ವಾಳ ತಾಲ್ಲೂಕು, ದಕ್ಷಿಣ ಕನ್ನಡ ಜಿಲ್ಲೆ ಒಡಿಯೂರಿಗೆ ಬೆಂಗಳೂರಿನಿಂದ ನೇರವಾಗಿ ವಿಟ್ಲಕ್ಕೆ ಸರ್ಕಾರಿ ಹಾಗೂ ಖಾಸಗಿ ಬಸ್‌ಗಳು ಇವೆ ವಿಟ್ಲದಿಂದ ಈ ಸ್ಥಳವು 12 ಕಿ. ಮೀ ಇದೆ. ಅಲ್ಲಿಂದ ಸ್ಥಳೀಯ ಸಾರಿಗೆ ಸಾಕಷ್ಟು ಇವೆ.
2. ಮಂಗಳೂರಿನಿಂದ ಒಡಿಯೂರು 52 ಕಿ. ಮೀ ನೇರವಾಗಿ ಒಡಿಯೂರಿಗೆ ಸರ್ಕಾರಿ /ಖಾಸಗಿ ಬಸ್ ಇವೆ.
3. ಕಲ್ಲಡ್ಕದಿಂದ ಒಡಿಯೂರಿಗೆ 11 ಕಿ. ಮೀ. ಸ್ಥಳೀಯ ಸಾರಿಗೆ ಸಾಕಷ್ಟು ಇವೆ.

**ವಂದನೆಗಳೊಂದಿಗೆ,**

(ಶರಣಗೌಡ ಜಿ. ಪಾಟೀಲ)
ವ್ಯವಸ್ಥಾಪಕ ನಿರ್ದೇಶಕರು

# ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,

ಶಾಸನಬದ್ಧ ಸಹಕಾರಿ ಸಂಸ್ಥೆ

"ಸೌಹಾರ್ದ ಸಹಕಾರಿ ಸೌಧ", 18ನೇ ಅಡ್ಡ ರಸ್ತೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು–560055

www.souharda.coop, Ph: 080-23378375-80, E-mail: souharda@souharda.coop

## ನೋಂದಾವಣೆ ಅರ್ಜಿ

10 ದಿನಗಳ ವ್ಯಕ್ತಿತ್ವ ವಿಕಸನ ವಿಶೇಷ ತರಬೇತಿ ಕಾರ್ಯಕ್ರಮ

ಇತ್ತೀಚಿನ ಭಾವಚಿತ್ರ

ಸಹಕಾರಿಯ ಹೆಸರು ಹಾಗೂ ವಿಳಾಸ :

1. ಭಾಗವಹಿಸುವ ಅಧಿಕಾರಿ/ಸಿಬ್ಬಂದಿ ಹೆಸರು ಹಾಗೂ ವಿಳಾಸ :
2. ಜನ್ಮ ದಿನಾಂಕ :
3. ವಿದ್ಯಾರ್ಹತೆ :
4. ಸಹಕಾರಿಯಲ್ಲಿ ನಿರ್ವಹಿಸುತ್ತಿರುವ ಹುದ್ದೆ :
5. ಅನುಭವ :
6. ಸಂಪರ್ಕ ದೂರವಾಣಿ ಸಂಖ್ಯೆ(ವಾಟ್ಸ್ ಆಪ್ ಸಂಖ್ಯೆ):
7. ಇ ಮೇಲ್ ಐಡಿ :
8. ಈ ಹಿಂದೆ ಭಾಗವಹಿಸಿದ್ದ ತರಬೇತಿ ವಿವರ :
9. ಆಸಕ್ತಿಕರ ವಿಷಯಗಳು :

ಪ್ರತಿನಿಧಿ ಶುಲ್ಕ ಪಾವತಿಸಿರುವ ವಿವರ

ಬ್ಯಾಂಕ್ ಹೆಸರು : ---------------------------------------

ರೂ.ಗಳು : ---------------------------------------

ಡಿ.ಡಿ.ನಂ : --------------------------------------- ದಿನಾಂಕ : ---------------------------------------ಸಂಯುಕ್ತ ಸಹಕಾರಿಯ ತರಬೇತಿ ನಿಯಮಗಳಿಗೆ ಬದ್ಧನಾಗಿರುತ್ತೇನೆ.

ಭಾಗವಹಿಸುವ ಪ್ರತಿನಿಧಿಯ ಸಹಿ

ಸಹಕಾರಿಯ ಮೊಹರು

ಅಧ್ಯಕ್ಷರು/ಮುಖ್ಯಕಾರ್ಯನಿರ್ವಾಹಕರ ಸಹಿ

# ಸೌಹಾರ್ದ ಸಹಕಾರಿಗಳಲ್ಲಿ ಭಾರತ ಸಂವಿಧಾನದ ಪೀಠಿಕೆಯ ಫಲಕಗಳನ್ನು ಪ್ರದರ್ಶಿಸುವ ಕುರಿತು ಸುತ್ತೋಲೆ

**ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,**
ಶಾಸನಬದ್ಧ ಸಹಕಾರಿ ಸಂಸ್ಥೆ
ಸೌಹಾರ್ದ ಸಹಕಾರಿ ಸೌಧ, 17-18ನೇ ಅಡ್ಡ ರಸ್ತೆ ಮಧ್ಯೆ, ಮಾರ್ಗೋಸ ರಸ್ತೆ, ಮಲ್ಲೇಶ್ವರಂ, ಬೆಂಗಳೂರು -560 055.
ದೂರವಾಣಿ:080-23378375-80, ಇ-ಮೇಲ್: souharda@souharda.coop, www.souharda.coop

ಕ್ರ.ಸಂಖ್ಯೆ:ಕರಾಸೌಸಂಸನಿ/01/2023-24 ದಿನಾಂಕ: 02.11.2023

ಇವರಿಗೆ,
ಮಾನ್ಯ ಅಧ್ಯಕ್ಷರು/ಮುಖ್ಯಕಾರ್ಯನಿರ್ವಾಹಕರು,
ರಾಜ್ಯದ ಎಲ್ಲಾ ಸೌಹಾರ್ದ ಸಹಕಾರಿಗಳಿಗೆ.

ಮಾನ್ಯರೇ,

**ವಿಷಯ: ಸೌಹಾರ್ದ ಸಹಕಾರಿಗಳಲ್ಲಿ ಭಾರತ ಸಂವಿಧಾನದ ಪೀಠಿಕೆಯ ಫಲಕಗಳನ್ನು ಪ್ರದರ್ಶಿಸುವ ಕುರಿತು.**

**ಉಲ್ಲೇಖ:** 1. ಸರ್ಕಾರದ ಆದೇಶ ಸಂ: ಸಕಿ 69 ಪಕವಿ 2023, ದಿನಾಂಕ: 30.06.2023

2. ನೇತಾಜಿ ಸುಭಾಷ್ ಚಂದ್ರಬೋಸ್ ಗ್ರಾಮೀಣ ಸೇವಾ ಅಭಿವೃದ್ಧಿ ಸಂಸ್ಥೆ(ರಿ) ಜಮಖಂಡಿ ಇವರ ಮನವಿ ಪತ್ರ.

3. ಸಹಕಾರ ಸಂಘಗಳ ನಿಬಂಧಕರ ಕಛೇರಿಯಿಂದ ಬಂದ ಪತ್ರ ಆರ್‌ಸಿಎಸ್/ಆರ್‌ಎಸ್‌ಆರ್/ಸೌಹಾರ್ದ/49/2023-24.

*****

ಮೇಲ್ಕಾಣಿಸಿದ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ ರಾಜ್ಯದ ಸೌಹಾರ್ದ ಸಹಕಾರಿಗಳಿಗೆ ಈ ಮೂಲಕ ತಮ್ಮ ಗಮನಕ್ಕೆ ತರಬಯಸುವುದೇನೆಂದರೆ ಕರ್ನಾಟಕ ಸರ್ಕಾರದ ಸುತ್ತೋಲೆಯನ್ವಯ ಭಾರತ ಸಂವಿಧಾನದ ಆತ್ಮವೆಂದೇ ಪರಿಗಣಿಸಿರುವ ಭಾರತ ಸಂವಿಧಾನದ ಪೀಠಿಕೆಯ ಫಲಕಗಳನ್ನು ಸರ್ಕಾರಿ, ಅರೆ ಸರ್ಕಾರಿ ಕಛೇರಿಗಳಲ್ಲಿ, ಸಾರ್ವಜನಿಕ ಸ್ವಾಯತ್ತ ಸಂಸ್ಥೆಗಳಲ್ಲಿ, ನಿಗಮ ಮಂಡಳಿಗಳಲ್ಲಿ ಹಾಗೂ ಸಹಕಾರ ಸಂಘಗಳ ಆವರಣದ ಪ್ರಮುಖ ಸ್ಥಳಗಳಲ್ಲಿ ಹಾಗೂ ಸ್ಥಳೀಯ ಸಂಸ್ಥೆಗಳ ಕಛೇರಿಗಳಲ್ಲಿ, ಮತ್ತು ಎಲ್ಲಾ ರೀತಿಯ ಶಿಕ್ಷಣ ಸಂಸ್ಥೆಗಳಲ್ಲಿ ಅಳವಡಿಸಲು ಸುತ್ತೋಲೆಯನ್ನು ಹೊರಡಿಸಿರುತ್ತಾರೆ. ಆದ್ದರಿಂದ ರಾಜ್ಯದ ಸೌಹಾರ್ದ ಸಹಕಾರಿ ಸಂಘಗಳು ಸಹ ತಮ್ಮ ತಮ್ಮ ಸಂಸ್ಥೆಗಳ ಪ್ರಮುಖ ಸ್ಥಳದಲ್ಲಿ ಭಾರತ ಸಂವಿಧಾನದ ಪೀಠಿಕೆ ಫಲಕವನ್ನು ಪ್ರದರ್ಶಿಸಲು ಈ ಮೂಲಕ ತಿಳಿಸಿದೆ.

ಉಲ್ಲೇಖ 2 ರ ಸಂಸ್ಥೆಯು ಸಾಮಾಜಿಕ ಸೇವಾ ಸಂಸ್ಥೆಯವರು ತಮ್ಮ ಸಂಸ್ಥೆಯಿಂದ ಖರೀದಿಸಲು ಮನವಿ ಸಲ್ಲಿಸಿರುತ್ತಾರೆ ಈ ಕುರಿತು ತಮ್ಮ ಆಡಳಿತ ಮಂಡಲಿ ಸಭೆಯಲ್ಲಿ ಚರ್ಚಿಸಿ ಸೂಕ್ತ ನಿರ್ಣಯ ತೆಗೆದುಕೊಳ್ಳಲು ತಿಳಿಸಿದೆ.

ಉಲ್ಲೇಖ 3 ರಂತೆ ಮಾನ್ಯ ಸಹಕಾರ ಸಂಘಗಳ ನಿಬಂಧಕರ ಸಹ ಸಂವಿಧಾನ ಪೀಠಿಕೆಯ ನಾಮಫಲಕಗಳನ್ನು ರಾಜ್ಯದ ಸಹಕಾರ ಸಂಘಗಳಲ್ಲಿ ಪ್ರದರ್ಶಿಸಲು ನಿರ್ದೇಶನವನ್ನು ನೀಡಿರುತ್ತಾರೆ, ಅದರಂತೆ ಸೌಹಾರ್ದ ಸಹಕಾರಿಗಳು ಸಹ ತಮ್ಮ ತಮ್ಮ ಸಂಸ್ಥೆಗಳಲ್ಲಿ ಸಂವಿಧಾನದ ಪೀಠಿಕೆ ಫಲಕವನ್ನು ಪ್ರದರ್ಶಿಸಲು ತಿಳಿಸಿದೆ.

ವಂದನೆಗಳೊಂದಿಗೆ

ಇಂತಿ ತಮ್ಮ ವಿಶ್ವಾಸಿ

Karnataka State Souharda Federal Co-operative Ltd. Reg. No. RSR / SOU / ACT / 136 / Regn. 051/2001-02 Dated: 04-01-2002 * Bengaluru *

(ಶರಣಗೌಡ ಜಿ ಪಾಟೀಲ್)
ವ್ಯವಸ್ಥಾಪಕ ನಿರ್ದೇಶಕ

**ಪ್ರತಿಯನ್ನು**- ಮಾನ್ಯ ಅಧ್ಯಕ್ಷರು, ನೇತಾಜಿ ಸುಭಾಷ್ ಚಂದ್ರಬೋಸ್ ಗ್ರಾಮೀಣ ಸೇವಾ ಅಭಿವೃದ್ಧಿ ಸಂಸ್ಥೆ(ರಿ), ಜಮಖಂಡಿ

**ಪ್ರತಿಯನ್ನು ಗೌರವಪೂರ್ವಕವಾಗಿ ಮಾಹಿತಿಗಾಗಿ ಸಲ್ಲಿಸಿದೆ.**- ಮಾನ್ಯ ಸಹಕಾರ ಸಂಘಗಳ ಜಂಟಿ ನಿಬಂಧಕರು(ಕಾನೂನು ಕೋಶ), ಬೆಂಗಳೂರು

## ಭೇಟಿ



**ತುಮಕೂರು :** ದಿನಾಂಕ 10.10.2023ರಂದು ಶ್ರೀ ಶ್ರೀ ಉದ್ಧಾನೇಶ್ವರ ಸೌಹಾರ್ದ ಸಹಕಾರಿ ನಿ, ತುಮಕೂರು ಸಹಕಾರಿಗೆ ಬೆಂಗಳೂರು ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಆರ್ ಶ್ರೀಧರ್ ರವರು ಭೇಟಿ ನೀಡಿದರು. ಈ ಸಂದರ್ಭದಲ್ಲಿ ತುಮಕೂರು ಜಿಲ್ಲಾ ನಿರ್ದೇಶಕರಾದ ಶ್ರೀ ಸಿ.ಪಿ. ವಿಜಯ್ ರವರು ಉಪಸ್ಥಿತರಿದ್ದರು. ಸಹಕಾರಿಯ ಕಾರ್ಯಚಟುವಟಿಕೆಗಳ ಕುರಿತು ಚರ್ಚಿಸಿ ಅಗತ್ಯ ಸಲಹೆ ಹಾಗೂ ಮಾರ್ಗದರ್ಶನ ನೀಡಿದರು. ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಉಮೇಶ್ ಎ.ಎಸ್. ಇವರು ಉಪಸ್ಥಿತರಿದ್ದರು.

ದಿನಾಂಕ 10.10.2023ರಂದು ಏಕಲವ್ಯ ಸೌಹಾರ್ದ ಪತ್ತಿನ ಸಹಕಾರಿ ನಿ, ತುಮಕೂರು ಸಹಕಾರಿಗೆ ಬೆಂಗಳೂರು ಪ್ರಾಂತೀಯ ವ್ಯವಸ್ಥಾಪಕರಾದ ಈ ಸಂದರ್ಭದಲ್ಲಿ ತುಮಕೂರು ಜಿಲ್ಲಾ ನಿರ್ದೇಶಕರಾದ ಶ್ರೀ ಸಿ.ಪಿ. ವಿಜಯ್ ರವರು ಉಪಸ್ಥಿತರಿದ್ದರು. ಸಹಕಾರಿಯ ಕಾರ್ಯಚಟುವಟಿಕೆಗಳ ಕುರಿತು ಚರ್ಚಿಸಿ ಅಗತ್ಯ ಸಲಹೆ ಹಾಗೂ ಮಾರ್ಗದರ್ಶನ ನೀಡಿದರು. ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಉಮೇಶ್ ಎ. ಎಸ್. ಇವರು ಉಪಸ್ಥಿತರಿದ್ದರು.

ದಿನಾಂಕ 10.10.2023ರಂದು ತುಮಕೂರು ಜಿಲ್ಲಾ ಸಂಪರ್ಕ ಕಚೇರಿಗೆ ಬೆಂಗಳೂರು ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಆರ್ ಶ್ರೀಧರ್ ಆರ್ ರವರು ಭೇಟಿ ನೀಡಿದರು. ಈ ಸಂದರ್ಭದಲ್ಲಿ ತುಮಕೂರು ಜಿಲ್ಲಾ ನಿರ್ದೇಶಕರಾದ ಶ್ರೀ ಸಿ.ಪಿ. ವಿಜಯ್ ರವರು ಉಪಸ್ಥಿತರಿದ್ದರು. ಸೆಪ್ಟೆಂಬರ್ ಮಾಹೆಯ ಕಾರ್ಯನಿರ್ವಹಣೆ ವರದಿ ಹಾಗೂ ಅಕ್ಟೋಬರ್ ಮಾಹೆಯ ಯೋಜನೆಗಳಿಗೆ ಸಂಬಂಧಿಸಿದಂತೆ ಜಿಲ್ಲಾ ನಿರ್ದೇಶಕರಿಗೆ ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಉಮೇಶ್ ಎ.ಎಸ್. ಇವರು ಮಾಹಿತಿ ನೀಡಿದರು.



**ಮೈಸೂರು :** ದಿನಾಂಕ 20.10.2023 ರಂದು ಕದಂಬ ಸೌಹಾರ್ದ ಸಹಕಾರಿ ಸಂಘ ನಿ., ಶಿರಸಿ ಇದರ ಮೈಸೂರು ಶಾಖೆಗೆ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಮಂಜುನಾಥ ಎಸ್. ಕೆ, ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ ಪಾಟೀಲ, ಮಾನ್ಯ ಸಹ ಪ್ರಧಾನ ವ್ಯವಸ್ಥಾಪಕರಾದ ಶ್ರೀ ರಾಜಶೇಖರ ಹೂಗಾರ, ಮಾನ್ಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಶಿವಕುಮಾರ ಬಿರಾದಾರ, ವ್ಯವಸ್ಥಾಪಕರಾದ ಶ್ರೀ ಚಂದ್ರಶೇಖರಯ್ಯ ಎಂ ಮತ್ತು ಜಿಲ್ಲಾ ಸಂಯೋಜಕರಾದ ಜವಾಹರ ಮುಗ್ಗನವರ ರವರು ಸಹಕಾರಿಗೆ ಭೇಟಿ ನೀಡಿ ಸಹಕಾರಿಯ ಸದಸ್ಯರಿಗೆ ನೀಡುತ್ತಿರುವ My money, Gold loan ಹಾಗೂ Call Center ಸೇವೆಗೆ ಸಂಬಂಧಿಸಿದಂತೆ ಸಹಕಾರಿಯ ಸಿಬ್ಬಂದಿಗಳ ಜೊತೆ ಚರ್ಚಿಸಲಾಯಿತು.



**ತುಮಕೂರು :** ದಿನಾಂಕ 10.10.2023 ರಂದು ಶ್ರೀ ವಲ್ಮೀಕ ಸೌಹಾರ್ದ ಸಹಕಾರಿ ನಿ, ತುಮಕೂರು ಸಹಕಾರಿಗೆ ಬೆಂಗಳೂರು ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಆರ್ ಶ್ರೀಧರ್ ರವರು ಭೇಟಿ ನೀಡಿದರು. ಈ ಸಂದರ್ಭದಲ್ಲಿ ತುಮಕೂರು ಜಿಲ್ಲಾ ನಿರ್ದೇಶಕರಾದ ಶ್ರೀ ಸಿ.ಪಿ. ವಿಜಯ್ ರವರು ಉಪಸ್ಥಿತರಿದ್ದರು. ಸಹಕಾರಿಯ ಕಾರ್ಯಚಟುವಟಿಕೆಗಳ ಕುರಿತು ಚರ್ಚಿಸಿ ಅಗತ್ಯ ಸಲಹೆ ಹಾಗೂ ಮಾರ್ಗದರ್ಶನ ನೀಡಿದರು. ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಉಮೇಶ್ ಎ.ಎಸ್. ಇವರು ಉಪಸ್ಥಿತರಿದ್ದರು.

# ರಾಜ್ಯದ ಸೌಹಾರ್ದ ಸಹಕಾರಿಗಳ ವಾರ್ಷಿಕ ಸಾಮಾನ್ಯ ಸಭೆ



**ಬೆಂಗಳೂರು :** ಉದಯ ಸೌಹಾರ್ದ ಪತ್ತಿನ ಸಹಕಾರಿ ನಿಯಮಿತದ 2022–3ನೇ ಸಾಲಿನ 28ನೇ ವಾರ್ಷಿಕ ಸರ್ವ ಸದಸ್ಯರ ಸಭೆಯು ದಿನಾಂಕ 24–09–2023ರಲ್ಲಿ, ಸಹಕಾರಿಯ ಅಧ್ಯಕ್ಷರಾದ ಶ್ರೀ ಗುಂಡುರಾವ್. ಬಿ.ಎಸ್.ರವರ ಅಧ್ಯಕ್ಷತೆಯಲ್ಲಿ, ಶ್ರೀ ಗುರುನರಸಿಂಹ ಕಲ್ಯಾಣ ಮಂದಿರ, ಬಸವನಗುಡಿ ರಸ್ತೆ, ಬೆಂಗಳೂರು ಇಲ್ಲಿ ನಡೆಸಲಾಯಿತು. ಸಹಕಾರಿಯು ಪ್ರಸಕ್ತ ಸಾಲಿನಲ್ಲಿ ನಿವ್ವಳ ಲಾಭ ರೂ: 1,37,93,152/ಗಳನ್ನು ಗಳಿಸಿದೆ. ಸಹಕಾರಿಯ ಒಟ್ಟು ದುಡಿಯುವ ಬಂಡವಾಳ ರೂ 128 ಕೋಟಿ 41 ಲಕ್ಷಗಳಾಗಿರುತ್ತದೆ. ಸದಸ್ಯರುಗಳಿಗೆ ಶೇ.12 ಡಿವಿಡೆಂಡ್ ಘೋಷಿಷಲಾಗಿದೆ.

ಈ ಸಂದರ್ಭದಲ್ಲಿ ಸಮಾಜದ ವಿವಿಧ ಕ್ಷೇತ್ರಗಳ ಸಾಧಕರಾದ ಸಲ್ಲಿಸಿರುವ ಪದ್ಮಶ್ರೀ ಪುರಸ್ಕೃತ ಶ್ರೀ ಅಮ್ಮೈ ಮಹಾಲಿಂಗನಾಯಕ್ ಪವರ್ ಲಿಫ್ಟರ್ ಶ್ರೀ ವಿಶ್ವನಾಥ. ಬಿ ಸೂತ್ರ ಸಲಾಕಿ ಗೊಂಬೆ ಆಟದ ಕಲಾವಿದರು, ಶ್ರೀ ದತ್ತಾತ್ರೇಯ ಅರಳೀಕಟ್ಟೆ ಮಹಾದಾನಿಗಳಾದ ಶ್ರೀ ಸೋಮಶೇಖರ್. ಒ ರವರುಗಳನ್ನು ಅಹ್ವಾನಿಸಿ ಸನ್ಮಾನಿಸಲಾಯಿತು. ಹಾಗೂ ಸಹಕಾರಿಯ ಹಿರಿಯ ಸದಸ್ಯರುಗಳನ್ನು ಮತ್ತು ಸಹಕಾರಿಯ ಸಿಬ್ಬಂದಿಯನ್ನೂ ಸಹ ಸನ್ಮಾನಿಸಲಾಯಿತು. ಇದೇ ದಿನ ಸಂಜೆ ಸಹಕಾರಿಯ ಸದಸ್ಯರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ಮತ್ತು ವಿವಿಧ ಶಾಲೆಗಳಲ್ಲಿ ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿಗಳಿಗೆ ಹಾಗೂ ವಿಶೇಷ ಚೇತನ ಮಕ್ಕಳ ಪೋಷಣಾ ಸಂಸ್ಥೆಗೆ ನಗದು ಪ್ರೋತ್ಸಾಹಧನ ವಿತರಣೆಯ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಈ ಕಾರ್ಯಕ್ರಮಕ್ಕೆ ಡಿ.ಜಿ. ಮತ್ತು ಐ.ಜಿ.ಪಿ ಡಾ॥ ಶಂಕರ್ ಬಿದರಿ ಇವರನ್ನು ಮುಖ್ಯ ಅತಿಥಿಗಳನ್ನಾಗಿ ಅಹ್ವಾನಿಸಲಾಗಿತ್ತು. ಮುಖ್ಯ ಅತಿಥಿಗಳು ತಾವು ಬೆಳೆದು ಬಂದ ದಾರಿಯನ್ನು ಉಲ್ಲೇಖಿಸಿ ಇಂದಿನ ವಿದ್ಯಾರ್ಥಿಗಳು ಕಷ್ಟಪಟ್ಟು ಆಸಕ್ತಿ ವಹಿಸಿ ಚೆನ್ನಾಗಿ ವಿದ್ಯಾಭ್ಯಾಸ ಮಾಡಿ ತಮ್ಮ ಗಳಿಕೆಯಲ್ಲಿ ತಂದೆ ತಾಯಿಯರ ಸಲುವಾಗಿ ಮೀಸಲಿಟ್ಟು ಆರ್ಥಿಕ ನೆರವು ನೀಡುವ ಮೂಲಕ ಅವರ ಸೇವೆ ಮಾಡುವಂತೆ ಹಾಗೂ ದೇಶಕ್ಕೆ ಉತ್ತಮ ಸಮಾಜಮುಖಿ ಕೆಲಸವನ್ನು ಮಾಡಬೇಕೆಂದು ಈ ಮೂಲಕ ದೇಶದ ಪ್ರಗತಿಯನ್ನು ಉನ್ನತ ಮಟ್ಟಕ್ಕೆ ಕೊಂಡೊಯ್ಯಲು ಪ್ರಯತ್ನಿಸಬೇಕೆಂದು ಈ ವಿಚಾರದಲ್ಲಿ ಪೋಷಕರು ವಿದ್ಯಾರ್ಥಿಗಳ ಆಸಕ್ತಿಯನ್ನು ಗುರುತಿಸಿ ಆಯಾ ಕ್ಷೇತ್ರದಲ್ಲೇ ಉನ್ನತ ಪ್ರಗತಿ ಸಾಧಿಸಲು ಪ್ರೋತ್ಸಾಹಿಸಬೇಕೆಂದು ತಮ್ಮ ಹಿತನುಡಿಗಳ ಮೂಲಕ ವಿದ್ಯಾರ್ಥಿಗಳಿಗೆ ಹಾಗು ಪೋಷಕರಿಗೆ ಕಿವಿಮಾತು ಹೇಳಿದರು. ಪ್ರತಿಭಾ ಪುರಸ್ಕಾರ ಕಾರ್ಯಕ್ರಮವನ್ನು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ್ ರವರು ನಡೆಸಿಕೊಟ್ಟರು.



**ಉಡುಪಿ :** ಶ್ರೀ ವೀರಭದ್ರ ಸೌಹಾರ್ದ ಕ್ರೆಡಿಟ್ ಕೋ ಆಪರೇಟಿವ್ ಸೊಸೈಟಿ (ನಿ) ಪರ್ಕಳ, ಆರ್ ಎಸ್ ಆರ್ 2713, ಭೂದರ ಸಂಕೀರ್ಣ, ಮುಖ್ಯ ರಸ್ತೆ, ಪರ್ಕಳ, ಉಡುಪಿ ತಾಲೂಕು ಇದರ 2022–23ನೇ ಸಾಲಿನ 11ನೇ ವಾರ್ಷಿಕ ಸಾಮಾನ್ಯ ಮಹಾಸಭೆಯು ದಿನಾಂಕ 03.09.2023ನೇ ಆದಿತ್ಯವಾರ ಮಧ್ಯಾಹ್ನ 3.00 ಗಂಟೆಗೆ ಸರಿಯಾಗಿ ಸಂಸ್ಥೆಯ ಅಧ್ಯಕ್ಷರಾದ ಶ್ರೀಯುತ ಬಿ.ಎಚ್ ಶೆಟ್ಟಿಗಾರ್‌ರ ಅಧ್ಯಕ್ಷತೆಯಲ್ಲಿ ಶ್ರೀ ಸುರಕ್ಷಾ ಸಭಾಭವನ, ಪರ್ಕಳ ಇಲ್ಲಿ ಜರುಗಿಸಲಾಯಿತು. ಸಹಕಾರಿಯ ನಿರ್ದೇಶಕರಾದ ಶ್ರೀ ಭಾಸ್ಕರ ಶೆಟ್ಟಿಗಾರ್ ಸ್ವಾಗತಿಸಿದರು. ಕುಮಾರಿ ಅಶ್ವಿನಿ, ಶ್ರೀಮತಿ ಸೌಮ್ಯ ಮತ್ತು ಶ್ರೀಮತಿ ಗಾಯತ್ರಿಯವರ ಪ್ರಾರ್ಥನೆಯೊಂದಿಗೆ ಸಭಾ ಕಾರ್ಯಕ್ರಮವನ್ನು ಪ್ರಾರಂಭಿಸಲಾಯಿತು. ಮಹಾಸಭೆಯ ಸೂಚನಾ ಪತ್ರ, ವಾರ್ಷಿಕ ವರದಿ, ಪರಿಶೋಧಿತ ಲೆಕ್ಕಪತ್ರಗಳ ಮಂಡನೆ ಹಾಗೂ ಮುಂದಿನ ವರ್ಷದ ಅಂದಾಜು ಆಯವ್ಯಯ ಪಟ್ಟಿಯನ್ನು ಸಹಕಾರಿಯ ಮುಖ್ಯ ಕಾರ್ಯನಿರ್ವಾಹಣಾಧಿಕಾ–ರಿಯಾದ ಶ್ರೀಮತಿ ರತ್ನಾ ಎಸ್ ಶೆಟ್ಟಿಯವರು ಪ್ರಸ್ತುತ ಪಡಿಸಿದರು. ಸಭೆಯಲ್ಲಿ ಸೌಹಾರ್ದದ 159 ಸದಸ್ಯರು ಭಾಗವಹಿಸಿ ತಮ್ಮ ಅಭಿಪ್ರಾಯಗಳನ್ನು ಹಂಚಿಕೊಂಡರು. ಸದಸ್ಯರ ಸುಧೀರ್ಘ ಚರ್ಚೆಯ ನಂತರ ಸಭಾಧ್ಯಕ್ಷ ಸ್ಥಾನದಿಂದ ಶ್ರೀ ಬಿ.ಎಚ್.ಶೆಟ್ಟಿಗಾರ್ ಸಭೆಯನ್ನು ಉದ್ದೇಶಿಸಿ ಮಾತನಾಡಿ ಎಲ್ಲಾ ಸದಸ್ಯರು ಸಹಕಾರಿಯ ವ್ಯವಹಾರದಲ್ಲಿ ಸಕ್ರೀಯವಾಗಿ ಭಾಗವಹಿಸಿ ಸಹಕಾರಿಯ ಬೆಳವಣಿಗೆಗೆ ಸಹಕರಿಸಬೇಕೆಂದು ವಿನಂತಿಸಿಕೊಂಡರು. 2013ರಲ್ಲಿ ಪ್ರಾರಂಭವಾದ ನಮ್ಮ ಸಂಸ್ಥೆಯು 11 ವರ್ಷಗಳನ್ನು ಪೂರೈಸಿ 12 ನೇ ವರ್ಷಕ್ಕೆ ಪಾದಾರ್ಪಣೆ ಮಾಡಿದೆ. ತಮ್ಮೆಲ್ಲರ ಸಹಕಾರದಿಂದ ಈ ಮಟ್ಟಕ್ಕೆ ಬೆಳೆಯಲು ಸಾಧ್ಯವಾಯಿತು. ನಮ್ಮ ಸಹಕಾರಿಯ ಮೂಲಕ ಸಮಾಜಕ್ಕೆ ಒಳಿತಾಗುವ ಅನೇಕ ಕಾರ್ಯ ಕೈಗೊಳ್ಳುತ್ತಿದ್ದು ಮಣಿಪಾಲ ಆರೋಗ್ಯ ಕಾರ್ಡ್, ಯಶಸ್ವಿನಿ ಆರೋಗ್ಯ ಸುರಕ್ಷಾ ಯೋಜನೆಯನ್ನು ನೀಡುತ್ತಿದ್ದೇವೆ. ನಮ್ಮ ಸಹಕಾರಿಯು ವರದಿ ವರ್ಷಾಂತ್ಯಕ್ಕೆ ಒಟ್ಟು ರೂ.13ಕೋಟಿ 89ಲಕ್ಷ ಠೇವಣಿ ಹೊಂದಿದ್ದು ರೂ.7 ಕೋಟಿ 44 ಲಕ್ಷ ಹೊರಬಾಕಿ ಸಾಲ ಇರುತ್ತದೆ. ಒಟ್ಟು ರೂ.14 ಕೋಟಿ 62 ಲಕ್ಷದಷ್ಟು ದುಡಿಯುವ ಬಂಡವಾಳವನ್ನು ಹೊಂದಿರುತ್ತದೆ. ಸದಸ್ಯರ ಪಾಲು ಬಂಡವಾಳದ ಮೇಲೆ ಶೇಕಡ 10 ಲಾಭಾಂಶವನ್ನು ಘೋಷಿಸಲಾಯಿತು.



**ಹಾವೇರಿ :** ಶ್ರೀ ಉಜ್ಜನಿ ಮರುಳಸಿದ್ದೇಶ್ವರ ಸೌಹಾರ್ದ ಸಹಕಾರಿ ನಿ., ಸಹಕಾರಿಯ ವಾರ್ಷಿಕ ಸಾಮಾನ್ಯ ಸಭೆಯು ದಿನಾಂಕ 23.09.2023ರಂದು ಸಹಕಾರಿಯ ಅಧ್ಯಕ್ಷರಾದ ಶಾಂತಪ್ಪ ಎಸ್ ಬೆಣ್ಣೆ ಹಾಗೂ ಆಡಳಿತ ಮಂಡಳಿ ಸದಸ್ಯರ ಉಪಸ್ಥಿತಿಯಲ್ಲಿ ನಡೆಯಿತು.



**ಪಾವಗಡ :** ದಿನಾಂಕ 16.10.2023ರಂದು ಪಾವಗಡ ತಾಲೂಕಿಗೆ ವರ್ಗಾವಣೆಯಾಗಿರುವ ಸಹಕಾರ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಗುರುರಾಜ್ ಇವರನ್ನು ಸ್ವಾಗತಿಸಲು ತಾಲೂಕಿನ ಎಲ್ಲಾ ಸೌಹಾರ್ದ ಸಹಕಾರಿಗಳ ವತಿಯಿಂದ ಆಯೋಜಿಸಲಾಗಿದ್ದ ಸಭೆಯಲ್ಲಿ ಜಿಲ್ಲಾ ಸಂಯೋಜಕರಾದ ಶ್ರೀ ಉಮೇಶ್ ಎ.ಎಸ್. ಇವರು ಭಾಗವಹಿಸಿ ಸಹಕಾರಿಗಳ ಪರವಾಗಿ ಶ್ರೀ ಗುರುರಾಜ್ ಇವರಿಗೆ ಸೌಹಾರ್ದ ಕಾಯ್ದೆ ಪುಸ್ತಕ ನೀಡಿ ಸ್ವಾಗತ ಕೋರಿ ಪಾವಗಡ ತಾಲೂಕಿನ ಸೌಹಾರ್ದ ಸಹಕಾರಿಗಳ ಕಾರ್ಯಚಟುವಟಿಕೆಗಳ ಕುರಿತು ಮಾಹಿತಿ ನೀಡಿದರು.



**ರಾಯಚೂರು :** ವೀರಶೈವ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿ., ರಾಯಚೂರು ಸಹಕಾರಿಯ 21ನೇ ವರ್ಷದ ವಾರ್ಷಿಕ ಮಹಾಸಭೆ ದಿನಾಂಕ 17.09.2023 ರಂದು ಭಾನುವಾರ ಮಧ್ಯಾಹ್ನ ಶ್ರೀ ನೀಲಕಂಠೇಶ್ವರ ದೇವಸ್ಥಾನದ ಆರವಣದಲ್ಲಿ ನಡೆಯಿತು. ಸಭೆಯಲ್ಲಿ ಸಹಕಾರಿ ಅಧ್ಯಕ್ಷರಾದ ಶ್ರೀ ಟಿ.ಆರ್ ಪಾಟೀಲ, ಸಹಕಾರಿಯು ವರ್ಷದಿಂದ ವರ್ಷಕ್ಕೆ ಅಭಿವೃದ್ಧಿಯತ್ತ ಸಾಗುತ್ತಿದೆ ಎಂದು ತಿಳಿಸಿದರು.



**ತುಮಕೂರು :** ದಿನಾಂಕ 21.10.2023ರಂದು ವಿಜಯದಶಮಿ ಹಾಗೂ ಆಯಧಪೂಜೆ ಪ್ರಯುಕ್ತ ಕೆಂಗಲ್ ಸೌಹಾರ್ದ ಕ್ರೆಡಿಟ್ ಕೋ–ಆಪರೇಟಿವ್ ಲಿ, ತುಮಕೂರು ಸಹಕಾರಿಯಲ್ಲಿ ಆಯೋಜಿಸಲಾಗಿದ್ದ ಪೂಜಾ ಕಾರ್ಯಕ್ರಮದಲ್ಲಿ ಜಿಲ್ಲಾ ಸಂಯೋಜಕರಾದ ಶ್ರೀ ಉಮೇಶ್ ಎ.ಎಸ್. ಇವರು ಭಾಗವಹಿಸಿ ಸಹಕಾರಿಯ ಕಾರ್ಯಚಟುವಟಿಕೆಗಳ ಕುರಿತು ಚರ್ಚಿಸಿದರು.



**ತುಮಕೂರು :** ದಿನಾಂಕ 21.10.2023ರಂದು ವಿಜಯದಶಮಿ ಹಾಗೂ ಆಯದಪೂಜೆ ಪ್ರಯುಕ್ತ ಶ್ರೀ ಉದ್ದಾನೇಶ್ವರ ಸೌಹಾರ್ದ ಪತ್ತಿನ ಸಹಕಾರಿ ನಿ, ತುಮಕೂರು ಸಹಕಾರಿಯಲ್ಲಿ ಆಯೋಜಿಸಲಾಗಿದ್ದ ಪೂಜಾ ಕಾರ್ಯಕ್ರಮದಲ್ಲಿ ಜಿಲ್ಲಾ ಸಂಯೋಜಕರಾದ ಶ್ರೀ ಉಮೇಶ್ ಎ.ಎಸ್. ಇವರು ಭಾಗವಹಿಸಿ ಸಹಕಾರಿಯ ಕಾರ್ಯಚಟುವಟಿಕೆಗಳ ಕುರಿತು ಚರ್ಚಿಸಿದರು.




## ವಾರ್ಷಿಕ ಸಾಮಾನ್ಯ ಸಭೆ

**ಕಲಬುರಗಿ :** ಖಾಜ ಬಂದೇನವಾಜ್ ಮೈನಾರಿಟಿ ಸೌಹಾರ್ದ ಸಹಕಾರಿ ನೀ., ಕಲಬುರ್ಗಿ ಇದರ ವಾರ್ಷಿಕ ಸಾಮಾನ್ಯ ಸಭೆಯ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಸೈಯದ್ ಮಹ್ಮದ ಅಲಿ ಹುಸೇನ್ ಇವರ ಅಧ್ಯಕ್ಷತೆಯಲ್ಲಿ ಜರುಗಿತು.

## ಶ್ರೀ ಸಿದ್ಧಿವಿನಾಯಕ ಅರ್ಬನ್ ಕ್ರೆಡಿಟ್ ಸೌಹಾರ್ದ ಸಹಕಾರಿಯ ಶಾಖೆ ಉದ್ಘಾಟನೆ



**ಇಟಗಿ :** ಶ್ರೀ ಸಿದ್ಧಿವಿನಾಯಕ ಅರ್ಬನ್ ಕ್ರೆಡಿಟ್ ಸೌಹಾರ್ದ ಸಹಕಾರಿ ಸಂಘ ನಿ., ಇಟಗಿ ಸಹಕಾರಿಯ 2ನೇಯ ಶಾಖೆಯ ಉದ್ಘಾಟನಾ ಕಾರ್ಯಕ್ರಮವು ದಿನಾಂಕ 25 ಅಕ್ಟೋಬರ್ 2023ರಂದು ಬೆಳಗಾವಿ ಜಿಲ್ಲೆಯ ಹಿರೇಬಾಗೇವಾಡಿಯಲ್ಲಿ ಜರುಗಿತು. ಸಂಸ್ಥೆಯ ಗೌರವಾಧ್ಯಕ್ಷರಾದ ಡಾ॥ ಷ.ಬ್ರ.ಶ್ರೀ ಫಾಲಾಕ್ಷ ಶಿವಯೋಗಿಶ್ವರರು, ಅದೃಶ್ಯಾನಂದಾಶ್ರಮ ಸುಕ್ಷೇತ್ರ ಕಾದರವಳ್ಳಿ ಇವರು ಉದ್ಘಾಟನೆಯನ್ನು ನೆರವೇರಿಸಿದರು. ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಸಂಯುಕ್ತ ಸಹಕಾರಿಯ ಬೆಳಗಾವಿ ಪ್ರಾಂತದ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಬಸವರಾಜ ಹೊಂಗಲ, ಇವರು ಭಾಗವಹಿಸಿದ್ದರು. ಸಹಕಾರಿಯ ಹಿತೈಶಿಗಳಾದ ಶ್ರೀ ಬಸನಗೌಡ ಪಾಟೀಲ, ಶ್ರೀ ಜಗದೀಶ ಯಳ್ಳೂರ, ಶ್ರೀ ಪ್ರಶಾಂತ ದೇಸಾಯಿ, ಶ್ರೀ ಪ್ರಕಾಶ ಜಪ್ತಿ, ಶ್ರೀ ಮಲ್ಲಿಕಾರ್ಜುನ ಗಾಣಿಗಿ, ಶ್ರೀ ಚಂದ್ರಪ್ಪ ಶಿಂತ್ರಿ ಹಾಗೂ ಸಹಕಾರಿಯ ಅಧ್ಯಕ್ಷರಾದ ಶ್ರೀ ಶಿವಪುತ್ರಪ್ಪ ಸವದಿ, ಉಪಾಧ್ಯಕ್ಷರಾದ ಶ್ರೀ ಸಂಗಪ್ಪ ಶೀಲಿ ಹಾಗೂ ಸಹಕಾರಿಯ ಎಲ್ಲಾ ನಿರ್ದೇಶಕರು ಮತ್ತು ಸಹಕಾರಿಯ ಎಲ್ಲಾ ಸದಸ್ಯರು, ಎಲ್ಲಾ ಸಿಬ್ಬಂದಿಗಳು ಹಾಗೂ ಹಿರೇಬಾಗೇವಾಡಿ, ಅರಳಿಕಟ್ಟಿ, ಬಸ್ಸಾಪೂರ, ಮರಡಿನಾಗಲಾಪೂರ, ಚಿಕ್ಕಬಾಗೇವಾಡಿ, ಚಂದನಹೊಸೂರ, ಹೊಳಿಹೊಸೂರ ಗ್ರಾಮಸ್ಥರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

## ದಶಮಾನೋತ್ಸವ ಕಾರ್ಯಕ್ರಮ



**ಹಾವೇರಿ :** ದಿನಾಂಕ 24.10.2023 ರಂದು ಶಿವ ವಿವಿದೋದ್ದೇಶಗಳ ಸೌಹಾರ್ದ ಸಹಕಾರಿ ಸಂಘ ನಿ., ರಾಣೇಬೆನ್ನೂರು ಸಂಘದ 10ನೇ ವರ್ಷದ ದಶಮಾನೋತ್ಸವ ಕಾರ್ಯಕ್ರಮವನ್ನು ವಿಜಯದಶಮಿ ಹಬ್ಬದ ವಿಶೇಷ ಪೂಜೆಯೊಂದಿಗೆ ಸಂಘದ ಅಧ್ಯಕ್ಷರಾದ ಶ್ರೀ ಜಟ್ಟೆಪ್ಪ ಎಸ್. ಕರೇಗೌಡ್ರ ಇವರ ಅಧ್ಯಕ್ಷತೆಯಲ್ಲಿ ನಡೆಯಿತು. ಈ ಸಂದರ್ಭದಲ್ಲಿ ಸಹಕಾರಿಯ ಆಡಳಿತ ಮಂಡಳಿ ಸದಸ್ಯರು ಹಾಗೂ ಮುಖ್ಯ ಕಾರ್ಯನಿರ್ವಾಹಕರು, ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

## ಕನ್ನಡ ರಾಜ್ಯೋತ್ಸವ ದಿನಾಚರಣೆ



**ಶಿವಮೊಗ್ಗ :** ವಿಪ್ರ ವಿವಿಧೋದ್ದೇಶ ಸೌಹಾರ್ದ ಸಹಕಾರಿ ಸಂಘದಿಂದ ದಿನಾಂಕ 01–11–2023 ರಂದು ಕನ್ನಡ ರಾಜ್ಯೋತ್ಸವವನ್ನು ವಿಕಾಸ ಪ್ರೌಢಶಾಲೆ ಆಲ್ಕೊಳದಲ್ಲಿ ಆಚರಿಸಿದ್ದು ಮುಖ್ಯ ಅತಿಥಿಗಳಾಗಿ ಕೆನರಾ ಬ್ಯಾಂಕ್ ನಿವೃತ್ತ ಅಧಿಕಾರಿ ಶ್ರೀ ಸರ್ಜಾ ಜಗದೀಶ್ ಆಗಮಿಸಿ ದೀಪ ಬೆಳಗಿಸುವ ಮೂಲಕ ಕನ್ನಡ ರಾಜ್ಯೋತ್ಸವವನ್ನು ಪ್ರಾರಂಭ ಮಾಡಿದರು. ನಂತರದಲ್ಲಿ ಉಪಾಧ್ಯಕ್ಷರಾದ ಶ್ರೀ ಗೋಪಾಲ್ ಎಸ್ ಜಿರವರು ಕ್ರೀಡಾ ದಿನವನ್ನು ಉದ್ಘಾಟಿಸಿ, ಎಲ್ಲಾ ಸಿಬ್ಬಂದಿಯವರಿಗೆ ತಮ್ಮ ವಿಶೇಷ ಮಾತುಗಳಿಂದ ನುಡಿದರು.

ನಂತರ ನಿರ್ದೇಶಕರಾದ ಶ್ರೀಮತಿ ವಾರಿಜಾ ಜಗದೀಶ್‌ರವರು ಕ್ರೀಡಾ ದಿನವನ್ನು ನಡೆಸಿಕೊಟ್ಟು, ಎಲ್ಲಾ ಸಿಬ್ಬಂದಿಯವರು ಸಕ್ರಿಯವಾಗಿ ಭಾಗವಹಿಸಿದ್ದರು. ಈ ವೇಳೆಯಲ್ಲಿ ಸಹಕಾರಿಯ ಅಧ್ಯಕ್ಷರಾದ ಶ್ರೀ ನಾರಾಯಣ ಮೂರ್ತಿ ಎಸ್ ಎ, ನಿರ್ದೇಶಕರುಗಳಾದ ಶ್ರೀ ಕುಲಕರ್ಣಿ ಸಿ ಎಂ, ಶ್ರೀ ಶ್ರೀನಿವಾಸಮೂರ್ತಿ ಎಮ್ ಜಿ, ಶ್ರೀ ಮಂಜುನಾಥ ಕೆ, ಶ್ರೀಮತಿ ರತ್ನಾವತಿ ಕೆ ಎನ್ ಹಾಗೂ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಾದ ಶ್ರೀಮತಿ ಮಾಲತಿ ಎಂ.ಪಿ, ವ್ಯವಸ್ಥಾಪಕರಾದ ಶ್ರೀ ಈಶ್ವರಯ್ಯ ಎಸ್ ಇವರು ಹಾಜರಿದ್ದರು.

# Sustainable Development Goals : Retrospective – Prospective

- Shri SharanaGouda G. Patil, Managing Director, KSSFCL, Bengaluru.

**ದಿನಾಂಕ 6 ಮತ್ತು 7 ಅಕ್ಟೋಬರ್ 2023 ರಂದು ಇಂಡಿಯನ್ ಸೊಸೈಯಿಟಿಯ 38ನೇ ರಾಷ್ಟ್ರೀಯ ಸಂಶೋಧನಾ ಸಮ್ಮೇಳನದಲ್ಲಿ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತ ಇದರ ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ ರವರು ಪ್ರಸ್ತುತ ಪಡಿಸಿದ ವಿಷಯದ ಲೇಖನವನ್ನು ಸಹಕಾರಿಗಳ ಮಾಹಿತಿಗಾಗಿ 2 ಭಾಗಗಳನ್ನಾಗಿ ಪ್ರಕಟಿಸಲಾಗುತ್ತಿದೆ. ಈ ಸಂಚಿಕೆಯಲ್ಲಿ ಒಂದನೇ ಭಾಗವನ್ನು ಪ್ರಕಟಿಸಲಾಗಿದೆ.**

Sustainability is our goal and it extends for reaching targets fixed by the organization to achieve. We are passionate about making a positive impact on the environment, society and governance. Our winning together for our people and our planet approach in deeply rooted in our purpose of helping each other change the world. As a federation we trust build with our members, stakeholders, society and communities to aiming for sustainable and inclusive future.

### Achieving together

Our focus on sustainability, diversity and inclusion aligns with the values on which we built the society and the values on which we will continue to grow with proper training and education. With a knowledgeable, passionate team a commitment to innovation, and a focus on the environment, we don't just embrace challenges, We thrive on them transforming obstacles into stepping stones towards success.

As we embrace on the new horizons / vision, we invite like minded individuals society to join us in shaping a future where progress in defined not only by profits but by collective positive change we bring about

Cooperatives and the Proposed Sustainable Development Goals

Cooperatives are highly relevant and important in the realization of proposed sustainable development goals

The brief highlights of the actual contribution of cooperatives to the twelve SDGS Proposed by the high-level Panel of Eminent Persons in the post -2015 Development Agenda in their report of 2013. Through the specific goals targets and Indicators will not be agreed upon until September 2015 as a part of on going process, these twelve proposed goals reflect in range by themes that will likely be covered by the SDGs.

### 1) Poverty Reduction

There is a widely held consensus among many actors including United Nations, the International Labour Organization and the International Cooperative Alliance, that in cooperative enterprises is the type of organization that in most suited to addressing all dimensions of reducing poverty and exclusion. The way cooperative help reduce poverty is important that they identity economic opportunities for their members; empower the disadvantaged to defend their into provide security to the poor by allow them to convert individual risk; collective risk and mediate member access to assets that utilize to earn a living.

For instance, while savings and credit cooperatives facilitate their members access to financial capital, agricultural cooperatives help farmers access the impats required to grow crops and keep livestocks and help them process, transport and market their produce. Similarly consumer cooperatives make it possible for their members and the society at large to access good quality household supplies live food clothing and other product, at affordable prices such service help pull members out of poverty.

In this directions Karnataka State Souharda Federal Cooperative Ltd has been making concerted efforts to come across poverty reduction by setting

up of various types / categories of Souharda Cooperatives in Karnataka State. During 2023-23 there are almost 6012 Souharda Cooperative running Coop Bank Credit Housing, SHGs, Coop Union Others cooperatives include multipurpose, consumer, education, employee, dairy , industrial, agriculture, labour etc.

There are 329 women's cooperatives working in all districts.

### 2) Gender Equality :

Cooperatives are contributing towards gender equality by expanding women's opportunities to participate in local economics and societies in many parts of the world.

In Souharda Federation there are about 61 Agriculture, 5 education souharda cooperatives, 35 employees souharda, 329 women's souharda cooperatives, 3 dairy cooperatives, 9 consumer cooperatives are working, where most of this women are members of the society and contribute 53% of membership and have gained a place in the governance structure of their cooperatives, women have been empowered to takeup leadership roles setup their own management community and organize welfare activities through cooperatives in some of the souharda federation under SHGs. During the year of 2022-23, 154 such groups are working progressly

There are special women's cooperatives working in Karnataka. They are women cooperatives give raw materials to the members and they will get it finalized for ex. Garlanda shalls, cooperative flags etc. Women are more numerous and rising in subsectors such as fruits, spices cereals and dairy, where land ownership in less critical and capital requirement lower In larger financial cooperatives women's tend to be in minority while in small savings and credit cooperative with micro fiancé, scheme such as Bangladesh or Philippines women's are most likely to be in majority.

Women's cooperative in general trend to be smaller in capital, membership and volume of business and less well connected to cooperative movements and support structures. Gender inequality in literacy level, skills, land ownership and access to credit and information can also limit women engagement in cooperatives.

At the National level under Central Sector Scheme NCUI is running 43 Cooperatives Educational Field Projects with the objective of catering the needs of under developed states by providing sanitize programmes for women's exclusively under 4 such projects.

2020 marks the 25th anniversary of the Beijing Declaration and platform for Action which recognized the multiple benefits of cooperatives. Now it is time for the UN, International Development Organization and International cooperative Alliance prioritize aid to key development sectors that strengthen women's economics social and political empowerment.

The Souharda movement has involved more number of Women's in the sector. There are 329 Women Cooperatives in having 12,000 Women directors along with around 1000 Women are individual members. They are having arranged marketing of home made products, handcrafts, and other activities.

### 3) Quality Education and Lifelong Learning :

Cooperatives support access to quality education and lifelong learning opportunities by providing the means for financing education, supporting teacher and schools ; establishing their own schools to provide quality education to both youth and adults and by serving as centers for lifelong learning.

KSSFCL taken initiative under training and development with 6031 member organization. Having been aware of this challenges KSSFCL has been made conscious and comprehensive efforts in Capacity building of their key executives and leaders who in turn can make a significant impact on the growth of their souharda cooperatives. It is also instrumental in planning organization and continuous improvement of variety of need based training

programs for various categories of leaders executives and staff, which includes customized training and development programs like

A) Presidents , Vice Presidents & Board of Directors.
B) Chief Executives officers (CEOs) /Employees like Skill development training, Personality development training programs.
C) Charted Accountant who under take Audit & Inspection of souharda cooperative societies.
D) Staff handling e-stamping centers etc.

KSSFCL also conduct short-term education training programs like 7 days, 10 days, 5 days, 3 days training programs.

**Special types of training program and long term course.**

Diploma in Cooperation and Banking Management (D.C.B.M). DCBM course also collaborated with Karnataka State Rural Development and Panchayat Raj University, Gadag. Along with this our, initiatives align with many of SDG announced by the United Nation.

**4. Health :**

Cooperatives ensure healthy lives by creating the infrastructure for delivering healthcare services, financing health care and providing home based health care services to people living with HIV/AIDs among others.

Health care cooperative include workers cooperative that provide health services, patient or community cooperatives that are user owned and hybird multi-stakeholders cooperatives. They can provide anything from home care to full scale hospitals. The International Cooperative Alliance estimates that there are more than 100 million households worldwide that are served by health cooperatives.

In Kerala Cooperatives Health care societies are doing owman services. In Delhi Health Care cooperatives are working significantly. During covid-19 Health care medical cooperatives played an significant role by providing sanitizer, medical kit, food packets etc by takeing all precautionary & measures the over all world. Souharda Federation also activity involving such social activities to create health awareness program, sensitization of members, eye camp, health camp health check up program etc periodically for the benefits of its member.

Hence health care sector is playing an important role of cooperatives Setting of more cooperative health insurance which can protect of its members in the future.

**5. Food Securing and Good Nutrition :**

Cooperative contribute of food security by helping small farmers fisher folk, live stock keepers, forest holders and other producers to solve numerous challenges that confront them is their endeavors to produce food. Farming and agriculture is where the cooperative business model is most widely utilized. Cooperatives together have an estimated 32% of the global market share in this sector.

Challenge faced by small agricultural producers often include remoteness and lack of access to information about food prices on natural and international markets; access to high quality inputs and variable costs of buying seeds and fertilizer; access to loans to buy these inputs; and lack of transport and other infrastructure in rural areas.

However Agricultural Cooperatives help farmers over come these obstaclas, by offering their members a variety of services such as group purchasing and marketing, input shops for collective access to credit and market, outlet, E-market access, farmer produces groups, knowledge and sharing information, more Importantly decision marking processes.

There are 61 agricultural cooperative and 3 dairy cooperatives, 10 industry cooperatives, 3 housing cooperatives, 5 education cooperatives, 9 consumer societies / cooperative to the people at gross root level These cooperatives provide services, like construction of godown outlets, fair price shops, wareshouses etc which will help preserve indigenous food. Diversification of household food supply for example doing cooperative has improved

20ನೇ ಪುಟಕ್ಕೆ.....

# "ಕಲಬುರಗಿಯ ಸಿದ್ಧಿ ವಿನಾಯಕ ಸೌಹಾರ್ದ ಸಹಕಾರಿಯಿಂದ ಮಹಿಳಾ ವಸತಿ ಗೃಹ" ಸೌಹಾರ್ದ ಸಹಕಾರಿಯಿಂದ ರಾಜ್ಯದಲ್ಲಿಯೆ ವಿಶಿಷ್ಟ ಚಟುವಟಿಕೆ

– ಶ್ರೀ ಸೂರ್ಯಕಾಂತ ರಾಕಲೆ, ಪ್ರಾಂತೀಯ ವ್ಯವಸ್ಥಾಪಕರು, ಕ.ರಾ.ಸೌ.ಸಂ.ಸ.ನಿ., ಕಲಬುರಗಿ




ಸಹಕಾರಿಗಳ ಖನಿಜ ಮಹಾರಾಷ್ಟ್ರದ ಗಡಿಗೆ ಹೊಂದಿಕೊಂಡಿರುವ ಕರ್ನಾಟಕ ರಾಜ್ಯದ ಕಲಬುರಗಿ ನಗರದಲ್ಲಿ ಸೌಹಾರ್ದ ಸಹಕಾರಿ ಕ್ಷೇತ್ರದ ವತಿಯಿಂದ ವಿಶಿಷ್ಟ ಕಾರ್ಯ ಚಟುವಟಿಕೆ ಪ್ರಾರಂಭಗೊಂಡಿರುವುದು, ಆಡು ಮುಟ್ಟದ ಸೊಪ್ಪಿಲ್ಲ ಸಹಕಾರ ಕ್ಷೇತ್ರ ಪ್ರವೇಶಿಸದ ಕ್ಷೇತ್ರವಿಲ್ಲ ಎನ್ನುವಂತೆ ಸಿದ್ದಿವಿನಾಯಕ ಸೌಹಾರ್ದ ಪತ್ತಿನ ಸಹಕಾರಿ ಸಂಘ ನಿ., ಕಲಬುರಗಿಯವರು ಸಹಕಾರ ಚಳುವಳಿಗೆ ಪುಷ್ಠಿ ನೀಡಿದ್ದಾರೆ. ಭಾರತದ ಸ್ವಾತಂತ್ರ್ಯ ಪೂರ್ವದ ದೇಶದಲ್ಲಿ ಹೊಂದಿರುವ ಸುಮಾರು 550 ಕ್ಕಿಂತ ಅಧಿಕ ಸಂಸ್ಥಾನಗಳಲ್ಲಿ ಹೈದ್ರಾಬಾದ ಸಂಸ್ಥಾನದ ದೊರೆ ನಿಜಾಮ ಶ್ರೀಮಂತ ದೊರೆ ಅಲ್ಲದೆ, ಬ್ರಿಟನ್ ರಾಣಿಗೂ ಆತ್ಮಿಯನಾಗಿದ್ದವನು. ಆದರೆ ಹೈದ್ರಾಬಾದ ನಿಜಾಮ ಶ್ರೀಮಂತನಾದರೆ ಹೈದ್ರಾಬಾದ ಪ್ರಾಂತ ಶೈಕ್ಷಣಿಕವಾಗಿ, ಸಾಮಾಜಿಕವಾಗಿ, ಆರ್ಥಿಕವಾಗಿ, ಸಾಂಸ್ಕೃತಿಕವಾಗಿ ಹಾಗೂ ಎಲ್ಲಾ ಕ್ಷೇತ್ರದಲ್ಲಿ ಹಿಂದುಳಿದ ಪ್ರದೇಶವಾಗಿ ಹೊಂದಿತ್ತು ಅದೇ ರೀತಿ ಸಹಕಾರ ಕ್ಷೇತ್ರದಲ್ಲಿ ಹಿಂದುಳಿದ ಪ್ರದೇಶ, ದೇಶದ ಸ್ವಾತಂತ್ರ್ಯ ನಂತರ ಇತರೆ ಪ್ರದೇಶಗಳಿಗೆ ಹೋಲಿಸಿದರೆ ಕಲ್ಯಾಣ ಕರ್ನಾಟಕ ಭಾಗ (ಹೈದ್ರಬಾದ ಕರ್ನಾಟಕ) ಹಿಂದುಳಿದ ಪ್ರದೇಶವಾಗಿ ಇವತ್ತಿಗೂ ಮುಂದುವರೆದಿದೆ. ದೇಶದಲ್ಲಿ ಸಹಕಾರ ಕ್ಷೇತ್ರದ ಮುಖಾಂತರ ಜನಸಾಮಾನ್ಯರ ರೈತರ ಬೆಳವಣಿಗೆ ಜರುಗಿಸಬೇಕೆಂದು ಬ್ರಿಟಿಷ ಸರಕಾರ 1904 ರಲ್ಲಿ ಭಾರತದಲ್ಲಿ ಸಹಕಾರ ಕಾಯ್ದೆ ತಂದರು, ಶ್ರೀಮಂತ ದೊರೆ ನಿಜಾಮ ಬ್ರಿಟಿಷ ರಾಣಿಗೆ ಆತ್ಮಿಯನಾಗಿದ್ದರು ಹೈದ್ರಾಬಾದ ಪ್ರಾಂತದಲ್ಲಿ ಸಹಕಾರ ಚಟುವಟಿಕೆ ಬೆಳೆಸಲು ಆಗಲಿಲ್ಲ. ಆದರೆ ಇಂಥ ಪ್ರದೇಶವಾದ ಕಲಬುರಗಿ ನಗರದಲ್ಲಿ ಲೇವಾದೇವಿ ಸಂಸ್ಥೆಗಳ ಹಾವಳಿ ಜಾಸ್ತಿಯಾಗಿ, ಕಲಬುರಗಿ ಜನರನ್ನು ಬಡ್ಡಿ, ಚಕ್ರ ಬಡ್ಡಿಗೆ ಸಿಲುಕಿಸಿ ನರಳುವ ಹಾಗೆ ಪರಿಸ್ಥಿತಿ ಇತ್ತು, ಇದನ್ನು ಮನಗಂಡು ಶ್ರೀ ಸಂಜೀವ ಮಹಾಜನ ಮತ್ತು ಅವರ ಗೆಳೆಯರ ತಂಡ ಸೇರಿ ಲೇವಾದೇವಿ ಹಾವಳಿಯಿಂದ ಕನಿಷ್ಟ ಮಟ್ಟಿಗಾದರು ಜನರನ್ನು ಕಾಪಾಡೋಣ ಎಂದು ಯೋಚಿಸಿ 2006 ರಲ್ಲಿ ಸಿದ್ದಿವಿನಾಯಕ ಸೌಹಾರ್ದ ಪತ್ತಿನ ಸಹಕಾರಿ ಸಂಸ್ಥೆಯನ್ನು ಹುಟ್ಟು ಹಾಕಿದರು. 400 ಜನ ಸದಸ್ಯರು ಮತ್ತು 4 ಲಕ್ಷ ದುಡಿಯುವ ಬಂಡವಾಳದೊಂದಿಗೆ ಪ್ರಾರಂಭಗೊಂಡಿತ್ತು. ಅಂದು ಸಣ್ಣ ಪ್ರಮಾಣದಲ್ಲಿ ಪ್ರಾರಂಭಗೊಂಡು ಹಂತ ಹಂತವಾಗಿ ಉತ್ತಮ ರೀತಿಯಲ್ಲಿ ಬೆಳೆಯುತ್ತ ತನ್ನ ಸದಸ್ಯರಿಗೆ ಅತ್ಯುತ್ತಮ ಸೇವೆಯನ್ನು ಕೊಡುತ್ತಾ ಇಂದು 2800 ಮೇಲೆ ಸದಸ್ಯರನ್ನು ಹೊಂದಿ, 30 ಕೋಟಿ ದುಡಿಯುವ ಬಂಡವಾಳವನ್ನು ಹೊಂದಿರುತ್ತದೆ. ಪ್ರತಿವರ್ಷ ಲಾಭದಲ್ಲಿ ಮುನ್ನಡೆಯುತ್ತಾ ಸದಸ್ಯರಿಗೆ ಶೇ. 15% ರಷ್ಟು ಲಾಭಾಂಶವನ್ನು ಘೋಷಿಸುತ್ತಾ ಬಂದಿರುತ್ತದೆ. ವೈಯಕ್ತಿಕ ಸಾಲ, ವೇತನ ಆಧಾರಿತ ಸಾಲ, ಸ್ಥಿರಾಸ್ತಿ ಸಾಲ, ಬಂಗಾರ ಸಾಲ, ವಾಹನ ಸಾಲ, ಉಗ್ರಾಣ ಸಾಲ, ಗೃಹ ಸಾಲ, ಸಿಸಿ/ಒಡಿ ಸಾಲ ಹೀಗೆ ಎಲ್ಲ ಬಗೆಯ ಸಾಲಗಳನ್ನು ತ್ವರಿತ ಗತಿಯಲ್ಲಿ ವಿತರಿಸುತ್ತೀದೆ. ಸಂಸ್ಥೆಯ ಗ್ರಾಹಕ ಸದಸ್ಯರಿಗೆ ಸಿಬ್ಬಂದಿಗಳು ನಗು ಮುಖದ ತ್ವರಿತ ಸೇವೆ ಒದಗಿಸುತ್ತಿದ್ದಾರೆ.

ಸಂಸ್ಥೆಯ ಬೆಳವಣಿಗೆಯಲ್ಲಿ ಆಡಳಿತ ಮಂಡಳಿ ಮತ್ತು ಸಿಬ್ಬಂದಿ ವರ್ಗದವರ ಪ್ರಾಮಾಣಿಕ ಸೇವೆ ಹಾಗೂ ಸದಸ್ಯ ಗ್ರಾಹಕರ ಉತ್ತಮ ಸಹಕಾರವೇ ಮುಖ್ಯ ಕಾರಣ. ಸಂಸ್ಥೆ ಬರಿ ಸಾಲದ ವ್ಯವಹಾರಕ್ಕಷ್ಟೆ ಸಿಮಿತವಾಗದೆ ಬಡ್ಡಿಯೇತರ ಆದಾಯ ಕೂಡ ಮಾಡುತ್ತಿದೆ. ಇ–ಸ್ಟ್ಯಾಂಪ ಸೇವೆ, ಪೇ ಆರ್ಡರ/ ಡಿಡಿ (Pay order/DD), RTGS/ NEFT, Insurance ಸೇವೆ ಹೀಗೆ ಸಾಕಷ್ಟು ಸೇವೆಗಳನ್ನು ಸದಸ್ಯರಿಗೆ ಒದಗಿಸುತ್ತಿದೆ. ಇವತ್ತು ಈ ಭಾಗದ ಉತ್ತಮ ಸಹಕಾರಿಯಾಗಿ ಹೊರಹೊಮ್ಮಿ ಕೇವಲ ಪತ್ತಿನ ವ್ಯವಹಾರವಷ್ಟೆ ಸಹಕಾರ ಕ್ಷೇತ್ರದ ಮೂಲ ಉದ್ದೇಶವಲ್ಲ, ಅದನ್ನು ಅರಿತು ವಿವಿಧ ಆಯಾಮಗಳಲ್ಲಿ ಕಾರ್ಯ ಚಟುವಟಿಕೆ ಜರುಗಿಸಬೇಕೆಂದು ಆಡಳಿತ ಮಂಡಳಿ ನಿರ್ಣಯಿಸಿ ನಗರದ ಹೃದಯ ಭಾಗವಾದ ವಿದ್ಯಾ ನಗರ ಬಡಾವಣೆಯಲ್ಲಿ ಸುಸಜ್ಜಿತವಾದ ಆಧುನಿಕ ಶೈಲಿಯ ಎಲ್ಲಾ ಸೌಲಭ್ಯಗಳನ್ನೊಳಗೊಂಡ ವಿದ್ಯಾರ್ಥಿನಿಯರಿಗೆ ಅನೂಕುಲವಾಗುವ ವಾತಾವರಣ ನಿರ್ಮಾಣ ಮಾಡಿ ಮಾಧರಿ ಮಹಿಳಾ ವಸತಿ ಗೃಹವನ್ನು ಸಿದ್ದಿವಿನಾಯಕ ಸೌಹಾರ್ದ ಪತ್ತಿನ ಸಹಕಾರಿ ಅಡಿಯಲ್ಲಿ 2022 ರ ಅಕ್ಟೋಬರನಲ್ಲಿ ಪ್ರಾರಂಭಿಸುವ ಮುಖಾಂತರ ಸಹಕಾರ ಕ್ಷೇತ್ರದಲ್ಲಿ ವಿಶಿಷ್ಟ ಕಾರ್ಯ ಚಟುವಟಿಕೆಗೆ ನಾಂದಿ ಹಾಡಿದೆ. ಇಗಾಗಲೆ ವಸತಿ ಗೃಹ ಭರ್ತಿಯಾಗಿದ್ದು, ವಸತಿಗೃಹದ ಪ್ರವೇಶಕ್ಕಾಗಿ 75 ಜನರು ನೊಂದಣಿ ಮಾಡಿಸಿದ್ದಾರೆ. ವಸತಿಗೃಹದ ವ್ಯವಸ್ಥೆಯಿಂದ ತುಂಬಾ ಬೇಡಿಕೆ ಹೊಂದಿದೆ.

**ವಸತಿ ಗೃಹದಲ್ಲಿರುವ ಸೌಲಭ್ಯಗಳು**

- ವಸತಿ ಗೃಹ ಒಟ್ಟು 4 ಅಂತಸ್ತಿನ ಕಟ್ಟಡ ಹೊಂದಿದ್ದು 3 ಅಂತಸ್ತಿನಲ್ಲಿ ವಿದ್ಯಾರ್ಥಿನಿಯರಿಗೆ ವಾಸಿಸಲು ಒಟ್ಟು 15 ಕೊಣೆಗಳಿದ್ದು, ಪ್ರತಿ ಕೊಣೆಯಲ್ಲಿ 4 ಜನ ವಿದ್ಯಾರ್ಥಿನಿಯರಿಗೆ ವ್ಯವಸ್ಥೆ
- ಪ್ರತಿ ಕೊಣೆಗೆ ಸ್ನಾನ ಗೃಹವಿದ್ದು, ಅದರಲ್ಲಿ ದಿನದ 24 ಗಂಟೆ ಬಿಸಿ

ನೀರು ಮತ್ತು ತಣ್ಣೀರಿನ ವ್ಯವಸ್ಥೆ.

- ಪ್ರತಿಯೊಬ್ಬರಿಗೆ ಮಂಚದ ವ್ಯವಸ್ಥೆ ಕರ್ಲಾನ ಬೆಡ್ ವ್ಯವಸ್ಥೆ, ಬೆಡ್ ಶೀಟ ಪಿಲ್ಲೊ ಸಹ ನೀಡಲಾಗುತ್ತದೆ.
- ಮನೆಯ ರೀತಿ ಉತ್ತಮ ಗುಣಮಟ್ಟದ ಆಹಾರ. ಕುಡಿಯಲು ಶುದ್ಧಿಕರಿಸಿದ ನೀರು.
- ಪ್ರತ್ಯಕ ಊಟದ ಸಭಾಂಗಣ.
- ಸಹಕಾರಿಯಿಂದಲೆ ವಿದ್ಯಾರ್ಥಿನಿಯರ ಬಟ್ಟೆ ತೊಳೆದು ಕೊಡುವುದು.
- ಲಿಫ್ಟ ವ್ಯವಸ್ಥೆ, 24 ಗಂಟೆ ಸೆಕ್ಯೂರಿಟಿ, CCTV ಅಳವಡಿಕೆ.
- ಕಟ್ಟಡಕ್ಕೆ 10 KW ಸೋಲಾರ ವಿದ್ಯುಚ್ಛಕ್ತಿ ಅಳವಡಿಸಲಾಗಿದೆ. 24 ಗಂಟೆ ವಿದ್ಯುತ ವ್ಯವಸ್ಥೆ.
- ಕರೆ ಮೇರಗೆ ವೈದ್ಯರ ಸೌಲಭ್ಯ.

**ಶೇ.10% ರಷ್ಟು ಸ್ಥಾನಗಳನ್ನು ಬಡ ಪ್ರತಿಭಾವಂತ ವಿದ್ಯಾರ್ಥಿನಿಯರಿಗೆ ಉಚಿತ**

ಒಟ್ಟು ಸಂಖ್ಯೆಯ ಶೇ 10% ರಷ್ಟು ಸ್ಥಾನ ಬಡ ಪ್ರತಿಭಾವಂತ ವಿದ್ಯಾರ್ಥಿನಿಯರಿಗೆ ಮೀಸಲಿಡಲಾಗಿದ್ದು, ಅಂತ ವಿದ್ಯಾರ್ಥಿನಿಯರಿಗೆ ಉಚಿತವಾಗಿ ಊಟ ಮತ್ತು ವಸತಿ ವ್ಯವಸ್ಥೆ ಇರುತ್ತದೆ. ಬಡ ಪ್ರತಿಭಾವಂತ ವಿದ್ಯಾರ್ಥಿನಿಯರ ಆಯ್ಕೆಗೊಸ್ಕರ ಸಂಸ್ಥೆಯ ಆಡಳಿತ ಮಂಡಳಿಯಲ್ಲಿ ಒಂದು ಉಪ ಸಮಿತಿಯಿರುತ್ತದೆ. ಆ ಸಮಿತಿಯಲ್ಲಿ ವಿದ್ಯಾರ್ಥಿನಿಯರ ಆರ್ಥಿಕ ಪರಿಸ್ಥಿತಿ ಮತ್ತು ವಿದ್ಯಾಭ್ಯಾಸದಲ್ಲಿನ ಆಸಕ್ತಿ ಬಗ್ಗೆ ಕುಲಕುಂಷವಾಗಿ ಪರಿಶೀಲಿಸಿ ಆಯ್ಕೆ ಮಾಡಲಾಗುತ್ತದೆ. ಇದರಲ್ಲಿ ಯಾವುದೇ ರೀತಿಯ ಶಿಫಾರಸ್ಸಿಗೆ ಆಸ್ಪದವಿರುವುದಿಲ್ಲ. ಇದು ಸಹಕಾರಿಯ ಆಡಳಿತ ಮಂಡಳಿಯವರ ಸಾಮಾಜಿಕ ಕಳಕಳಿ.

**ಕುಟುಂಬಗಳು ಅವಲಂಬನೆ**

ಸಹಕಾರಿಯಲ್ಲಿ 17 ಸಿಬ್ಬಂದಿಗಳು ಕಾರ್ಯನಿರ್ವಹಿಸುತಿದ್ದು. ವಸತಿ ಗೃಹ ಒಂದರಲ್ಲಿಯೆ ಇಬ್ಬರು ವಾರ್ಡನ, ಇಬ್ಬರು ಅಡುಗೆ ವ್ಯವಸ್ಥಾಪಕರು, ಮೂರು ಜನ ಸ್ವಚ್ಚತಾ ಕರ್ಮಿಗಳು, ಒಬ್ಬರು ಸೆಕ್ಯೂರಿಟಿ ಕೆಲಸಗಾರ ಹೀಗೆ ನೇರವಾಗಿ ಒಟ್ಟು 17 ಕುಟುಂಬಗಳು ಅವಲಂಬಿಸಿದ್ದಾರೆ. ಪರೋಕ್ಷವಾಗಿ ಸಾಕಷ್ಟು ಜನರಿಗೆ ಅನುಕೂಲವಾಗಿದೆ. ಸಹಕಾರಿಯ ವಿಶೇಷವೆಂದರೆ ಒಬ್ಬರು ಸೆಕ್ಯೂರಿಟಿ ಹಾಗೂ 3 ಉಪಸಿಬ್ಬಂದಿ ಪುರಷ ಸಿಬ್ಬಂದಿ ಹೊರತ್ತು ಪಡಿಸಿ ಉಳಿದ ಎಲ್ಲಾ ಸಿಬ್ಬಂದಿಗಳು ಮಹಿಳಾ ಸಿಬ್ಬಂದಿ ಹೊಂದಿದೆ.

**PG ಗೆ ಗಣ್ಯ ಮಾನ್ಯರ ಭೇಟಿ**

ಸಹಕಾರಿಯ ಮಹಿಳಾ ವಸತಿ ಗೃಹಕ್ಕೆ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡ, ಸಂಯುಕ್ತ ಸಹಕಾರಿಯ ಹಿಂದಿನ ಅಧ್ಯಕ್ಷರಾದ ಶ್ರೀ ಗುರುನಾಥ ಜ್ಯಾಂತಿಕರ, ಶ್ರೀ ಕೃಷ್ಣರೆಡ್ಡಿ, ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕರಾದ ಶರಣಗೌಡ ಜಿ ಪಾಟಿಲ್ ಹಾಗೂ ಹಲವು ನಿರ್ದೇಶಕರು ಹಾಗೂ ರಾಜ್ಯದ ವಿವಿಧ ಸೌಹಾರ್ದ ಸಹಕಾರಿಗಳ ಪದಾಧಿಕಾರಿಗಳು ಹಾಗೂ ಜಾನಪದ ವಿಶ್ವವಿದ್ಯಾಲಯ ವಿಶ್ರಾಂತ ಕುಲಪತಿಗಳಾದ ಶ್ರೀ ಡಿ ಬಿ ನಾಯಕ ಭೇಟಿ ನೀಡಿ ಮೆಚ್ಚುಗೆ ವ್ಯಕ್ತಪಡಿಸಿದರು.

**ಆರ್ಥಿಕ ವಿವರ**

| | |
|---|---|
| ಒಟ್ಟು ಸದಸ್ಯರು | – 2886 |
| ಶೇರು ಬಂಡವಾಳ | – ರೂ. 90.99 ಲಕ್ಷ |
| ನಿಧಿಗಳು | – ರೂ. 296.96 ಲಕ್ಷ |
| ಠೇವಣಿಗಳು | – ರೂ. 2039.63 ಲಕ್ಷ |
| ನೀಡಿರುವ ಸಾಲಗಳು | – ರೂ. 950.52 ಲಕ್ಷ |
| ಹೂಡಿಕೆಗಳು | – ರೂ. 1168.67 ಲಕ್ಷ |
| ಲಾಭಶ ಘೋಷಣೆ | – ಶೇ.15 ಪ್ರತಿಶತ |
| ಒಟ್ಟು ವ್ಯವಹಾರ | – ರೂ. 5878.75ಲಕ್ಷ |

**ಸಹಕಾರಿಯಿಂದ ಮುಂದಿನ ಯೋಜನೆ:**

PG ಕಟ್ಟಡ ಪಕ್ಕದಲ್ಲೆ ಸಹಕಾರಿಯ ಇನ್ನೊಂದು ನಿವೇಶನವಿದ್ದು ಅದರಲ್ಲಿ ನಮ್ಮ ಭಾಗದ ವಿದ್ಯಾರ್ಥಿಗಳ ಸಲುವಾಗಿ ಸುಸಜ್ಜಿತವಾದ ಒಂದು ಅಭ್ಯಾಸ ಮಾಡಲು ಗ್ರಂಥಾಲಯ ಮಾಡುವ ಯೋಚನೆ ಇರುತ್ತದೆ.

ಇಂದಿನ ದಿನಗಳಲ್ಲಿ ವಿದ್ಯಾರ್ಥಿಗಳಿಗೆ ಮನೆಯಲ್ಲಿ ಅಭ್ಯಶಿಸಲು ಉತ್ತಮ ವಾತಾವರಣ ಮತ್ತು ಸ್ಥಳದ ಕೊರತೆ ಕಾಣುತ್ತಿದೆ. ಕಾಲೇಜುಗಳಲ್ಲಿ ಸಹ ಗ್ರಂಥಾಲಯದ ವ್ಯವಸ್ಥೆ ಬಹಳ ಕಡಿಮೆ ಆಗಿರುತ್ತದೆ. ಇದನ್ನು ಮನಗಂಡು ವಿದ್ಯಾರ್ಥಿ, ವಿದ್ಯಾರ್ಥಿನಿಯರಿಗೆ ಪ್ರತ್ಯೇಕವಾಗಿ ಸ್ಥಳದ ಅವಕಾಶ ಮಾಡಿ ಅಲ್ಲಿ ಅವರಿಗೆ ಓದುವ ಸಲುವಾಗಿ ಉತ್ತಮ ವಾತಾವರಣ ನಿರ್ಮಿಸಿ ಕೊಡಲಾಗುವುದು ಈ ಸೇವೆಯು 24x7 ದಿನಗಳವರೆಗೆ ಇರುತ್ತದೆ.

ವಿದ್ಯಾರ್ಥಿಗಳಿಗೆ ಓದುವ ಸಲುವಾಗಿ ಟೇಬಲ್, ಕುರ್ಚಿ ವ್ಯವಸ್ಥೆ, ಎಸಿ ವ್ಯವಸ್ಥೆ, ಉತ್ತಮ ಬೆಳಕಿನ ವ್ಯವಸ್ಥೆ, ಗೊಡೆಗಳ ಮೇಲೆ ಒಳ್ಳೆ ಒಳ್ಳೆ ಚಿಂತನೆಗಳು ಬರೆಯಲಾಗುತ್ತದೆ. ಇದರಿಂದ ವಿದ್ಯಾರ್ಥಿಳಿಗೆ ಸ್ಪೂರ್ತಿ ಸಿಗುತ್ತದೆ. ಮತ್ತು ಕುಡಿಯುವ ನೀರಿನ ವ್ಯವಸ್ಥೆ, ಶೌಚಾಲಯದ ವ್ಯವಸ್ಥೆ ಇರುತ್ತದೆ. ಜೊತೆಗೆ ಚಹಾ, ಕಾಫಿ, ತಿಂಡಿ ತಿನಿಸುಗಳ ವ್ಯವಸ್ಥೆ ಸಹ ಮಾಡುತ್ತೇವೆ.

ಇದೊಂದು ವಿನೂತನ ಯೋಜನೆ ಆಗಿದ್ದು, ಮುಂದೆ ಕಲ್ಯಾಣ ಕರ್ನಾಟಕ ಭಾಗದ ವಿದ್ಯಾರ್ಥಿಗಳಿಂದ ಉತ್ತಮ ಪ್ರತಿಕ್ರಿಯೆ ಸಿಗುತ್ತದೆ ಎಂಬ ಆಶೆ ಆಡಳಿತ ಮಂಡಳಿ ಹೊಂದಿದೆ.

ರಾಜ್ಯದಲ್ಲಿರುವ ಹಲವು ಸಹಕಾರಿಗಳು ಪತ್ತಿನ ಚಟುವಟಿಕೆ ಜರುಗಿಸಲಾಗುತ್ತಿದೆ. ಕೆಲವೆ ಕೆಲ ಸಹಕಾರಿಗಳು ಇಂತಹ ವಿಶಿಷ್ಟ ಕಾರ್ಯಚಟುವಟಿಕೆ ಪ್ರಾರಂಭಿಸುತ್ತಿರುವುದು ಸಹಕಾರ ಕ್ಷೇತ್ರಕ್ಕೆ ಪುಷ್ಠಿ ನಿಡಿದಂತೆಯಾಗುತ್ತಿದೆ. ಇಂತಹ ವಿವಿದ ಚಟುವಟಿಕೆಗಳು ರಾಜ್ಯದಲ್ಲಿ ಪ್ರಾರಂಭವಾಗಲಿ ಎಂದು ಆಶಿಷೋಣ.

ಕಲಬುರಗಿ ನಗರದಲ್ಲಿ ಸಾಕಷ್ಟು PG ಗಳಿದ್ದು, ಅಲ್ಲಿ ಯಾವುದೇ ವ್ಯವಸ್ಥೆಗಳು ಸರಿ ಇಲ್ಲದಿರುವುದು ಮನಗಂಡು ನಾವು ಒಂದು ಉತ್ತಮ ರೀತಿಯ PG ಸೇವೆಯನ್ನು ನಮ್ಮ ಭಾಗದ ವಿದ್ಯಾರ್ಥಿನಿಯರಿಗೆ ನೀಡಬೇಕೆಂದು ಯೋಚಿಸಿ ಈ ಸಂಸ್ಥೆಯನ್ನು ಹುಟ್ಟು ಹಾಕಿದ್ದೇವೆ ಮತ್ತು ಇದಕ್ಕೆ ವಿದ್ಯಾರ್ಥಿನಿಯರು ಮತ್ತು ಅವರ ಪೋಷಕರಿಂದ ಉತ್ತಮ ಪ್ರತಿಕ್ರಿಯೆ ಬಂದಿರುವುದು ನನಗೆ ಅತೀವ ಸಂತಸ ತಂದಿದೆ.



**– ಶ್ರೀ ಸಂಜೀವ ಮಹಾಜನ, ಅಧ್ಯಕ್ಷರು, ಸಿದ್ಧಿವಿನಾಯಕ ಸೌಹಾರ್ದ ಪತ್ತಿನ ಸಹಕಾರಿ ನಿ. ಕಲಬುರಗಿ.**



ಸಿದ್ದಿವಿನಾಯಕ ಸೌಹಾರ್ದ ಪತ್ತಿನ ಸಹಕಾರಿಯ ಅಡಿಯಲ್ಲಿ ಕಲಬುರಗಿ ನಗರದ ಉತ್ತಮ ಗುಣಮಟ್ಟದ PG ನಮ್ಮದಾಗಿದ್ದು, ನಾವು ನಮ್ಮ ಭಾಗದ ವಿದ್ಯಾರ್ಥಿನಿಯರಿಗೆ ಉತ್ತಮ ಸೇವೆ ನೀಡುತ್ತಿದ್ದೇವೆ. ಮುಂಬರುವ ದಿನಗಳಲ್ಲಿ ಇನ್ನು ಹೆಚ್ಚಿನ ವಿದ್ಯಾರ್ಥಿನಿಯರು ಇದರ ಸದುಪಯೋಗ ಪಡೆಯಲೇಂದು ಆಶಿಸುತ್ತೇನೆ

**– ಶ್ರೀ ಎಸ್.ಎಸ್. ಪಾಟೀಲ, ಉಪಾಧ್ಯಕ್ಷರು, ಸಿದ್ದಿವಿನಾಯಕ ಸೌಹಾರ್ದ ಪತ್ತಿನ ಸಹಕಾರಿ ನಿ. ಕಲಬುರಗಿ.**

ಇಲ್ಲಿ ಇದ್ದರೆ ಮನೆ, ಮನೆಯವರನ್ನು ಬಿಟ್ಟು ವಾಸಿಸುತ್ತೀದ್ದೇವೆ ಅಂತ



ಯಾವತ್ತು ಅನ್ನಿಸಿಲ್ಲ. ಸಹಕಾರ ಕ್ಷೇತ್ರದಿಂದ ಇಂತಹ ಚಟುವಟಿಕೆ ಜರುಗಿಸಬಹುದು ಎಂದು ಕನಸು ಮನಸ್ಸಿನಲ್ಲಿ ಅನಿಸಿಕೊಂಡಿರಲಿಲ್ಲ.

**– ರಾಯಮ್ಮ ಆರ್ ಪೂಜಾರ, ಸಿದ್ದಿವಿನಾಯಕ ವಸತಿ ಗೃಹದ ವಿದ್ಯಾರ್ಥಿನಿ.**

ಅಧ್ಯಯನಕ್ಕೆ ಪೂರಕವಾದ ಹಾಗೂ ಸ್ವಚತೆಹೊಂದಿರುವ ವಿದ್ಯಾರ್ಥಿನಿ ವಸತಿ ಗೃಹ ರಾಜ್ಯದ ಎಲ್ಲಾ ಖಾಸಗಿ ವಸತಿಗೃಹಗಳಿಗೆ ಮಾದರಿ. ಈ ರೀತಿ ಸಹಕಾರ ಕ್ಷೇತ್ರದಿಂದ ನಡೆಸುಕೊಂಡು ಹೊಗುತ್ತಿರುವುದು ನಾನು ಕಂಡಿರುವುದು ಮೊದಲ ವಸತಿಗೃಹ.

**– ಡಿ ಬಿ ನಾಯಕ್, ವಿಶ್ರಾಂತಿ ಕುಲಪತಿ, ಜಾನಪದ ವಿಶವಿದ್ಯಾಲಯ.**

---

.....17ನೇ ಪುಟದಿಂದ

nutrition as well as incomes.

### 6. Access to Water and Sanitation

Cooperatives are increasingly becoming major actors in facilitating access to clean water and sanitation services to make up for the failures of both the public and private sectors.

Cooperatives have providing alternative ways for urban communities to get clean water and safe sewerage services. Water cooperatives also provide remote locations that would otherwise have no services. National Cooperative Development Corporation of India has providing financial assistance for catering the need of water and sanction societies. Besides National Cooperative Housing Federation has mobilized the urban poor in more than 92.000, Housing Cooperatives with the above facilities. Souharda Federation is also having three number of cooperative housing societies to provide needy facilities to the member.

### 7. Sustainable Energy:

Energy cooperatives are contributing to the achievement of the sustainable energy goals of energy access, energy efficiency and reduced emissions Cooperative are visible in facilitating access to sustainable energy, where they are playing a significant role in generating electricity and distributing to consumers. They are also leading the way to the adoption of new and renewable energies like solar and wind power in many parts of the word.

In may counties rural electrificates cooperatives are playing an significant role But in India, there is a need of such cooperatives more and more especially in rural area to cater the need of acquite shortage of electricity. However now the Ministry of Cooperation, GOI in its recent amendments allowed PACS to act multiple activities including setting up of Bio-gas Electricity Cooperative societies Souharda Federation is also follows in line of guidelines issued by central / state government time to time. More than 100 million jobs existing in cooperatives globally is cited by the ILO and ICA in recent year.

Other contributions to livelihoods and equitable growth documented for cooperatives include income security, jobs for rural communities, strengthening farmers position in the valve chain, employments in diverse sectors of the economy, spillover efforts on employment provision of infrastructure and other services and social inclusion. Evidence from around the world shows that the contributions cooperatives have made in promoting decent work and providing income security, especially among those previous excluded. Research on the dairy industry in India indicates that cooperatives members enjoy higher and more secure incomes than non-member within the industry particular by at the primary level of production.

## ಮಕ್ಕಳ ದಿನಾಚರಣೆಯ ಪ್ರಯುಕ್ತ ವಿಶೇಷ ಲೇಖನ :

# ಗುಜರಾತ್‌ನಲ್ಲೊಂದು ಮಕ್ಕಳ ಸಹಕಾರಿ ಬ್ಯಾಂಕ್ : ಮಕ್ಕಳಿಗೆ ಉಳಿತಾಯ ಮಹತ್ವದ ಪಾಠ

– ಶ್ರೀಮತಿ ದಿವ್ಯ ಟಿ., ಹಿರಿಯ ಸಹಾಯಕಿ, ಕರಾಸೌಸಂಸನಿ., ಬೆಂಗಳೂರು

ಬೆಳೆಯುವ ಸಿರಿ ಮೊಳಕೆಯಲ್ಲಿ ಎಂಬಂತೆ ಚಿಕ್ಕ ವಯಸ್ಸಿನಿಂದಲೇ ಮಕ್ಕಳಿಗೆ ಉಳಿತಾಯದ ಮಹತ್ವವನ್ನು ತಿಳಿಸಿ, ಉಳಿತಾಯ ಮನೋಭಾವನೆಯನ್ನು ಬೆಳೆಸುವುದರ ಮೂಲಕ ಅವರ ಮುಂದಿನ ಆರ್ಥಿಕ ಭವಿಷ್ಯಕ್ಕೆ ಆದ್ಯತೆಯನ್ನು ನೀಡಿ, ಆರ್ಥಿಕ ಸ್ವಾತಂತ್ರ್ಯದ ಹಾದಿಯನ್ನು ಒದಗಿಸುವಲ್ಲಿ ಕ್ರಾಂತಿ ಮಾಡಿರುವ ಸಹಕಾರಿ ಸಂಸ್ಥೆಯ ಕಿರು ಪರಿಚಯ ಇಲ್ಲಿದೆ.

ದಿ ಬಾಲ್ ಗೋಪಾಲ್ ಸೇವಿಂಗ್ಸ್ ಅಂಡ್ ಕ್ರೆಡಿಟ್ ಕೋಆಪರೇಟಿವ್ ಸೊಸೈಟಿ ಲಿಮಿಟೆಡ್ (ಬಾಲ್ ಬ್ಯಾಂಕ್), ಜವನಪುರ, ಇದಾರ್ ಈ ಸಹಕಾರಿಯ ಒಂದು ವೈಶಿಷ್ಟವೆಂದರೆ ಮಕ್ಕಳಿಗಾಗಿ ಬಾಲ್ ಗೋಪಾಲ್ ಬ್ಯಾಂಕ್ ಎಂಬ ಸೇವೆಯ ಉದ್ದೇಶ ಹೊಂದಿದ್ದು, ಅದರ ವಿವರ ತಿಳಿಯೋಣ

ಗುಜರಾತ್ ಕೃಷಿ ಮತ್ತು ಸಹಕಾರ ಇಲಾಖೆಯು ಸರ್ಕಾರದಿಂದ ಸೇವಾ ಮಾಧ್ಯಮದ ಮೂಲಕ ವಿವಿಧ ರೀತಿಯ ಸಹಕಾರ ಸಂಘಗಳನ್ನು ನೋಂದಾಯಿಸಿದೆ. ಸಹಕಾರ ತತ್ವಕ್ಕೆ ಅನುಗುಣವಾಗಿ, ದಿ ಬಾಲ್ ಗೋಪಾಲ್ ಸೇವಿಂಗ್ಸ್ ಅಂಡ್ ಕ್ರೆಡಿಟ್ ಕೋಆಪರೇಟಿವ್ ಸೊಸೈಟಿ ಲಿಮಿಟೆಡ್ (ಬಾಲ್ ಬ್ಯಾಂಕ್) ಇದು ಸಬರಕಾಂತ ಜಿಲ್ಲಾ ರಿಜಿಸ್ಟ್ರಾರ್ ಅವರಿಂದ ದಿನಾಂಕ 30–05–2009ರಂದು ನೋಂದಣಿಯಾಗಿದೆ. ಶ್ರೀ ಅಶ್ವಿನ್ ಭಾಯ್ ಪಟೇಲ್‌ರವರು ಈ ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷರಾಗಿದ್ದಾರೆ.

ಈ ಸಹಕಾರಿಯು ಮಕ್ಕಳಿಗಾಗಿ ಬಾಲ್ ಗೋಪಾಲ್ ಬ್ಯಾಂಕ್ ಎಂಬ ವಿಶಿಷ್ಠ ಸೇವೆಯನ್ನು ಒದಗಿಸುತ್ತಿದೆ. ಇದು ದೇಶದ ಮೊದಲ ಮತ್ತು ಏಕೈಕ ಮಕ್ಕಳ ಬ್ಯಾಂಕ್ ಆಗಿದೆ. ಬಾಲ್ ಗೋಪಾಲ್ ಬ್ಯಾಂಕ್ ಇದು ಕೇವಲ ಬ್ಯಾಂಕ್ ಅಲ್ಲ. ಯುವ ಜನತೆಗೆ ಆರ್ಥಿಕ ಸಾಕ್ಷರತೆಯ ಕ್ರಾಂತಿಯಾಗಿದೆ. ಚಿಕ್ಕ ವಯಸ್ಸಿನಿಂದಲೇ ಸ್ವಾತಂತ್ರವನ್ನು ಪ್ರತಿಪಾದಿಸುತ್ತದೆ, ಕನಸುಗಳನ್ನು ಪೋಷಿಸುತ್ತದೆ ಮತ್ತು ಮುಂದಿನ ಪೀಳಿಗೆಯನ್ನು ಸಮೃದ್ಧ ನಾಳೆಗಾಗಿ ಸಶಕ್ತಗೊಳಿಸುತ್ತದೆ. ಮಕ್ಕಳಿಗೆ ತಮ್ಮ ಖರ್ಚಿಗೆ ಪಾಕೆಟ್ ಮನಿ ಪಡೆಯುವ ಮನೋಭಾವವನ್ನು ಬದಿಗಿಟ್ಟು ಅದನ್ನು ವಿವೇಕಯುತವಾಗಿ ಸದ್ವಿನಿಯೋಗಿಸಿಕೊಳ್ಳಲು ಶ್ರಮಿಸುತ್ತಿದೆ. ಮಕ್ಕಳಿಗೆ ಸ್ವತಂತ್ರ ಜೀವನವನ್ನು ನಡೆಸುವ ಪರಿಕಲ್ಪನೆಯನ್ನು ಕಲಿಸುತ್ತಿದೆ.

ಅತಿ ಶೀಘ್ರದಲ್ಲೇ ಸಹಕಾರಿ ಸಂಸ್ಥೆಯು ವೆಬ್‌ಸೈಟ್ ಮತ್ತು ಮೊಬೈಲ್ ಅಪ್ಲಿಕೇಶನ್ ಅನ್ನು ಪ್ರಾರಂಭಿಸಲಿದೆ.

**ಸ್ಥಾಪನೆ ವಿವರ :** ಒಂದು ಕುಟುಂಬದಿಂದ, ಕಿಡಿಯು ಕ್ರಾಂತಿಯನ್ನು ಹುಟ್ಟುಹಾಕಿತು, ಇಂದು 17,337 ಮಕ್ಕಳನ್ನು ತನ್ನ ಮಡಿಲಿಗೆ ಸೆಳೆದಿದೆ. ಈ ಕ್ರಾಂತಿಕಾರಿ ಚಳುವಳಿಯ ಹಿಂದಿನ ಮೆದುಳು ಅಶ್ವಿನ್ ಭಾಯ್ ಪಟೇಲ್. 2009ರಲ್ಲಿ ಗುಜರಾತ್‌ನ ಇದಾರ್‌ನ ಜವನಪುರದಲ್ಲಿ ದಿ ಬಾಲ್ ಗೋಪಾಲ್ ಸೇವಿಂಗ್ಸ್ ಅಂಡ್ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ ಲಿಮಿಟೆಡ್ (ಬಾಲ್ ಬ್ಯಾಂಕ್) ಅನ್ನು ಸ್ಥಾಪಿಸಿದ ಅವರು, ಪ್ರತಿ ಮಗುವೂ ತಮ್ಮ ಶೈಶಶಾಸ್ಥೆಯಿಂದಲೇ ಆರ್ಥಿಕ ಸ್ವಾತಂತ್ರದ ಹಾದಿಯಲ್ಲಿ ಸಾಗುವ ಜಗತ್ತನ್ನು ರೂಪಿಸಿದರು.

**ಉದ್ದೇಶ :** ಚಿಕ್ಕಂದಿನಿಂದಲೇ ಮಕ್ಕಳಿಗೆ ಹಣದ ಮಹತ್ವ ಮತ್ತು ಉಳಿತಾಯದ ಬಗ್ಗೆ ತಿಳಿಸಿಕೊಡುವುದು ಈ ಬ್ಯಾಂಕಿನ ಮೂಲ ಉದ್ದೇಶವಾಗಿದೆ. ಚಿಕ್ಕ ವಯಸ್ಸಿನಲ್ಲೇ ದುರಾಭ್ಯಾಸಗಳಿಗೆ ಬಲಿಯಾಗುವ ಮಕ್ಕಳನ್ನು ಅದರಿಂದ ದೂರ ಮಾಡಿ ಅವರ ಕೈಯಿಂದಲೇ ಹಣದ ಉಳಿತಾಯ ಮಾಡಿಸುವುದರ ಮೂಲಕ ಅವರಿಗೆ ಹಣಕಾಸಿನ ವ್ಯವಹಾರದ ಬಗ್ಗೆ ತಿಳುವಳಿಕೆ ಮೂಡಿಸುವುದಾಗಿದೆ. ಇದರಿಂದ ವ್ಯರ್ಥವಾಗಿ ಹಣದ ದುರುಪಯೋಗವಾಗುವುದು ತಪ್ಪುತ್ತದೆ. ಚಿಕ್ಕಂದಿನಲ್ಲಿ ಉಳಿತಾಯ ಮಾಡಿದ ಹಣವೇ ನಂತರ ಅವರ ವಿದ್ಯಾಭ್ಯಾಸಕ್ಕೆ ಅಥವಾ ಕೃಷಿ ಹಾಗೂ ಇನ್ನಿತರ ಉದ್ಯೋಗಗಳಿಗೆ ಉಪಯೋಗಿಸಿಕೊಳ್ಳುವುದಾಗಿದೆ.

**ಪ್ರಾಥಮಿಕ ಗುರಿಗಳು :** ಮಕ್ಕಳಲ್ಲಿ ಉಳಿತಾಯದ ಮೌಲ್ಯಗಳನ್ನು ತುಂಬುವುದು, ದುಶ್ಚಟಗಳಿಂದ ಮುಕ್ತಗೊಳಿಸುವುದು, ಕೌಶಲ್ಯದಿಂದ ಸಜ್ಜುಗೊಳಿಸುವುದು, ಆರೋಗ್ಯಕರ, ಪ್ರಭಾವಶಾಲಿ ಮತ್ತು ಗೌರವಾನ್ವಿತರನ್ನಾಗಿ ಮಾಡುವುದು ಹಾಗೂ ಉನ್ನತ ಶಿಕ್ಷಣವನ್ನು ಪಡೆಯುವುದು.

**ಸದಸ್ಯತ್ವದ ವಿವರ :** 0 ರಿಂದ 18 ವರ್ಷದೊಳಗಿನ ಮಕ್ಕಳು ಈ ಬ್ಯಾಂಕ್‌ನ ಸದಸ್ಯರಾಗಬಹುದು. ದಿನಾಂಕ 31 ಮಾರ್ಚ್ 2023ಕ್ಕೆ 335 ಗ್ರಾಮಗಳ 17,337 ಮಕ್ಕಳು ಸದಸ್ಯರಾಗಿದ್ದಾರೆ. ಪ್ರತಿ ತಿಂಗಳು 200 ರಿಂದ 300 ಮಕ್ಕಳು ಸದಸ್ಯರಾಗುತ್ತಾರೆ. ಮಗುವನ್ನು ಸೇರಿಸಿಕೊಳ್ಳಲು ಸದಸ್ಯತ್ವ ಶುಲ್ಕ ರೂ.110/–ಗಳನ್ನು ಪಾವತಿಸಬೇಕಾಗುತ್ತದೆ (ಪ್ರವೇಶ ಶುಲ್ಕ ರೂ.1/–, ಸದಸ್ಯ ಶುಲ್ಕ ರೂ.5/–, ಉಳಿತಾಯದ ಹುಂಡಿ ಶುಲ್ಕ ರೂ.104/–). ಈ ಸಂದರ್ಭದಲ್ಲಿ ಉಚಿತ ಹುಂಡಿಯನ್ನು (ಪಿಗ್ಗಿ ಬ್ಯಾಂಕ್) ನೀಡಲಾಗುತ್ತದೆ. ಉಳಿತಾಯದ ಪ್ರಯಾಣವನ್ನು ಐದನೇ ವಯಸ್ಸಿನಲ್ಲಿ ಪ್ರಾರಂಭಿಸಲಾಗುತ್ತದೆ. ಮಗುವಿಗೆ 18 ವರ್ಷ ತುಂಬಿದ ನಂತರವೂ ಸಹ ಬ್ಯಾಂಕಿನ ಸದಸ್ಯರಾಗಿ ಮುಂದುವರೆಯಬಹುದು.

**ಉಳಿತಾಯದ ವಿವರ :** ದಿನಾಂಕ 31 ಮಾರ್ಚ್ 2023ಕ್ಕೆ ರೂ.16,46,87,149/–ಗಳನ್ನು ಉಳಿತಾಯ ಮಾಡಿದ್ದಾರೆ. ಬ್ಯಾಂಕ್ ತನ್ನ ಸದಸ್ಯರಿಗೆ ಉಳಿತಾಯದ ಮೇಲೆ ಶೇ.6ರಷ್ಟು ಬಡ್ಡಿಯನ್ನು ನೀಡುತ್ತದೆ.

**ಉಳಿತಾಯ ಸಂಗ್ರಹ ವಿಧಾನ :** ಉಳಿತಾಯದ ಪರಿಕಲ್ಪನೆಯನ್ನು ಐದು ವರ್ಷದ ವಯಸ್ಸಿನ ಮಕ್ಕಳಿಗೆ ನಿಧಾನವಾಗಿ ಪರಿಚಯಿಸಲಾಗುತ್ತದೆ. ಸಾಮಾನ್ಯವಾಗಿ ಮನೆಯ ಅತಿಥಿಗಳಿಂದ ಹಣದ ಉಡುಗೊರೆಗಳನ್ನು ಸ್ವೀಕರಿಸುವ ಮಕ್ಕಳಿಗೆ ತಕ್ಷಣದ ಆಟಿಕೆಗಳ ಬದಲಿಗೆ ತಮ್ಮ ಪಿಗ್ಗಿ ಬ್ಯಾಂಕ್‌ಗಳಲ್ಲಿ ಹಣವನ್ನು ಹಾಕಲು ಕಲಿಸಲಾಗುತ್ತದೆ. ಇದು ಉಳಿತಾಯದ ಬಗ್ಗೆ ಮಾತ್ರವಲ್ಲದೇ ಮಕ್ಕಳು ಮತ್ತು ಅವರ ಕುಟುಂಬದ ಸಮಗ್ರ ಅಭಿವೃದ್ಧಿಗೆ ಒತ್ತು ನೀಡಿದೆ. ಆರೋಗ್ಯಕರ ಜೀವನಶೈಲಿಯನ್ನು ಉತ್ತೇಜಿಸುವಲ್ಲಿ ಸಮಾಜಕ್ಕೆ ಕೊಡುಗೆ ನೀಡಿದೆ.

ಬ್ಯಾಂಕಿನ ಸಿಬ್ಬಂದಿ/ ಏಜೆಂಟರು ಪ್ರತಿ ತಿಂಗಳು ಸದಸ್ಯರಾಗಿರುವ ಮಕ್ಕಳ ಮನೆಗೆ ಭೇಟಿ ನೀಡುತ್ತಾರೆ. ಪಾರದರ್ಶಕತೆಯನ್ನು ಕಾಪಾಡಿಕೊಳ್ಳಲು ಬ್ಯಾಂಕಿನ ವತಿಯಿಂದ ನೀಡಲಾಗಿರುವ ಹುಂಡಿಗಳನ್ನು ಪೋಷಕರ ಹಾಗೂ ಮಗುವಿನ ಸಮ್ಮುಖದಲ್ಲಿ ತೆರೆಯುತ್ತಾರೆ. ಸಂಗ್ರಹಿಸಿದ ಮೊತ್ತಕ್ಕೆ ರಸೀದಿ ನೀಡಲಾಗುತ್ತದೆ/ ಕಾರ್ಡ್‌ನಲ್ಲಿ ನಮೂದಿಸಲಾಗುತ್ತದೆ. ಮಗುವಿನ ಉಳಿತಾಯದ ಹುಂಡಿಯಿಂದ ತೆಗೆದ ಹಣವನ್ನು ನಂತರ ಮಗುವಿನ ಖಾತೆಗೆ ಜಮಾ ಮಾಡಲಾಗುತ್ತದೆ. ಈ ಮೊತ್ತವನ್ನು ಮಕ್ಕಳು 18 ವರ್ಷದ ನಂತರ ಹಿಂಪಡೆಯಲು ಅರ್ಹರಾಗಿರುತ್ತಾರೆ. ಈ ಹಣವನ್ನು ಕಾಲೇಜು ಶುಲ್ಕವನ್ನು ಪಾವತಿಸಲು, ಕುಟುಂಬದ ಅಗತ್ಯವನ್ನು ಪೂರೈಸಲು, ಹೂಡಿಕೆ ಮಾಡಲು, ವ್ಯಾಪಾರ ಮಾಡಲು, ವಾಹನಗಳನ್ನು ಖರೀದಿಸಲು, ಹೊಸ ಉದ್ಯಮವನ್ನು ಪ್ರಾರಂಭಿಸಲು ಬಳಸಬಹುದು. ಸದಸ್ಯತ್ವ ಪಡೆದಿರುವ ಮಕ್ಕಳಲ್ಲಿ ಹೆಚ್ಚಿನವರು ಸಬರಕಾಂತ ಮತ್ತು ಅರಾವಳಿ ಜಿಲ್ಲೆಗಳ ಮಧ್ಯಮ ಮತ್ತು ಕಡಿಮೆ ಆದಾಯದ ಕುಟುಂಬಗಳಿಗೆ ಸೇರಿದವರಾಗಿದ್ದಾರೆ.

**ಏಜೆಂಟ್‌ನ ಕಾರ್ಯ ವಿಧಾನ :**

- ಪ್ರತಿ ತಿಂಗಳು ಏಜೆಂಟ್ ಉಳಿತಾಯ ಖಾತೆದಾರರ ಮನೆಗಳಿಗೆ ಭೇಟಿ ನೀಡಿ ಉಳಿತಾಯ ಖಾತೆಯ ಹುಂಡಿಯನ್ನು ಗೊತ್ತುಪಡಿಸಿದ ದಿನಾಂಕದಂದು ತೆರೆಯುತ್ತಾರೆ ಮತ್ತು ಹುಂಡಿಯ ಕೀ ಏಜೆಂಟ್‌ರ ಬಳಿ ಇರುತ್ತದೆ.
- ಮಗುವಿನ ಮನೆಗೆ ಹೋಗಿ, ಉಳಿತಾಯ ಹುಂಡಿಯನ್ನು ತೆರೆಯುವುದು, ಉಳಿತಾಯ ಹುಂಡಿಯಿಂದ ಪಡೆದ ಮೊತ್ತವನ್ನು ಪರಿಶೀಲಿಸಿ, ಅದನ್ನು ಪಾಸ್‌ಬುಕ್‌ನಲ್ಲಿ ನಮೂದಿಸಿ ಮತ್ತು ರಸೀದಿ ಹಾಗೂ ಕಾರ್ಡ್ ಅನ್ನು ಮಗುವಿನ ಪೋಷಕರಿಗೆ ನೀಡುವುದು. ನಂತರ, ಮರುದಿನ, ಸಂಗ್ರಹಿಸಿದ ಮೊತ್ತ ಮತ್ತು ಪಾಸ್‌ಬುಕ್ ಅನ್ನು ಸಹಕಾರಿ ಸಂಸ್ಥೆಯಲ್ಲಿ (ಬಾಲ್ ಗೋಪಾಲ್ ಬ್ಯಾಂಕ್) ಠೇವಣಿ ವ ಾಡಲಾಗುತ್ತದೆ.

**ಸಾಲ ವಿತರಣೆ ವಿವರ :** ಇದುವರೆಗೆ 1050 ಮಕ್ಕಳ ಪಾಲಕರಿಗೆ ಸಾಲ ನೀಡಲಾಗಿದೆ. ಬ್ಯಾಂಕಿನಿಂದ ರೂ.3 ಕೋಟಿಗಳವರೆಗೆ ಸಾಲವನ್ನು ನೀಡಿದೆ. ಸಾಲಕ್ಕೆ ಬಡ್ಡಿ ದರವು ಶೇ.12ರಷ್ಟು ಆಗಿರುತ್ತದೆ. 18 ವರ್ಷ ಲಾಕ್-ಇನ್ ಅವಧಿಯ ಮಧ್ಯಂತರದಲ್ಲಿ ಹಣವನ್ನು ಬಯಸುವ ಅಥವಾ 18 ವರ್ಷ ವಯಸ್ಸಿನ ಮಕ್ಕಳಿಗೆ ಮರುಪಾವತಿಸಲು ಹಣವಿದೆ ಎಂಬುದನ್ನು ಖಚಿತಪಡಿಸಿಕೊಂಡು ಬ್ಯಾಂಕ್‌ನ ಒಟ್ಟು ಠೇವಣಿಗಳ ಶೇ.50ರಷ್ಟು ಮಾತ್ರ ಸಾಲವನ್ನು ನೀಡಲಾಗುತ್ತದೆ. ಸದಸ್ಯ ಮಕ್ಕಳ ಪೋಷಕರಿಗೆ ಶೈಕ್ಷಣಿಕ ಸಾಲಗಳನ್ನು ಒದಗಿಸುವುದು, ಹಾಗೆಯೇ, ಮಗುವಿನ ಉನ್ನತ ಶಿಕ್ಷಣಕ್ಕಾಗಿ ಅಧ್ಯಯನ ಸಾಲಗಳನ್ನು ಒದಗಿಸುವುದು.

**ಬಾಲ ಗೋಪಾಲ್ ಬ್ಯಾಂಕಿನ ವಿಶೇಷತೆಗಳು :**

- 5180 ಮಕ್ಕಳು ತಮ್ಮ ಕುಟುಂಬದ ಸದಸ್ಯರನ್ನು ವ್ಯಸನದಿಂದ ಮುಕ್ತಗೊಳಿಸಿದ್ದಾರೆ ಮತ್ತು ವ್ಯಸನ ಮುಕ್ತ ಹಾಗೂ ಸ್ವಾವಲಂಬಿ ಜೀವನವನ್ನು ನಡೆಸುತ್ತಿದ್ದಾರೆ.
- 1800 ಮಕ್ಕಳು ತಮ್ಮ ಖಾತೆಗಳಲ್ಲಿ ಉಳಿತಾಯ ಮಾಡಿದ ಮೊತ್ತವನ್ನು ವಿವಿಧ ಕ್ಷೇತ್ರಗಳಲ್ಲಿ ಉನ್ನತ ಪದವಿಗಳನ್ನು ಪಡೆಯಲು ಬಳಸಿಕೊಂಡಿದ್ದಾರೆ.
- ಈ ಬಾಲ್ ಗೋಪಾಲ್ ಬ್ಯಾಂಕ್‌ನ ಮೂಲಕ 18 ವರ್ಷ ವಯಸ್ಸನ್ನು ತಲುಪಿದ ನಂತರ ಉಳಿತಾಯದ ಮೊತ್ತ ರೂ.8,17,85,490/-ಗಳನ್ನು ಪಾವತಿಸಲಾಗಿದೆ.
- ಬಾಲ ಗೋಪಾಲ್ ಬ್ಯಾಂಕ್ ಮೂಲಕ, ಇದುವರೆಗೆ 32ಕ್ಕೂ ಹೆಚ್ಚು ಉದ್ಯೋಗಿಗಳನ್ನು ನೇಮಿಸಲಾಗಿದೆ.
- ಈ ಸಂಸ್ಥೆಯ ಮೂಲಕ ಮಕ್ಕಳಲ್ಲಿ ಉಳಿತಾಯ, ವ್ಯಸನಮುಕ್ತ, ಕೌಶಲ್ಯ ಸಜ್ಜಿತ, ಆರೋಗ್ಯವಂತ, ಪ್ರಭಾವಿ, ಗೌರವಾನ್ವಿತ ಮೌಲ್ಯಗಳನ್ನು ಮೂಡಿಸಿ ಅವರನ್ನು ಉನ್ನತ ಶಿಕ್ಷಣವಂತರನ್ನಾಗಿ ಮಾಡಲು ಅತ್ಯುತ್ತಮ ಪ್ರಯತ್ನಗಳನ್ನು ಮಾಡಲಾಗುತ್ತಿದೆ.

**ಬಾಲ ಗೋಪಾಲ್ ಬ್ಯಾಂಕಿನ ಪ್ರಯೋಜನಗಳು :**

- ಭವಿಷ್ಯದ ಆಕಾಂಕ್ಷೆಗಳಿಗಾಗಿ ಮಕ್ಕಳಿಗೆ ಉಳಿತಾಯ ಮಾಡಲು ಒಂದು ಸ್ಪಷ್ಟವಾದ ಮಾರ್ಗವಾಗಿದೆ. ಈ ಮೊತ್ತವನ್ನು ಶೈಕ್ಷಣಿಕ ಅನ್ವೇಷಣೆಗಳಿಗಾಗಿ, ವಾಹನಗಳ ಖರೀದಿ ಅಥವಾ ಹೊಸ ಉದ್ಯಮಗಳಿಗಾಗಿ ಉಪಯೋಗಿಸಿಕೊಳ್ಳಬಹುದಾಗಿದೆ.
- ಜೀವಮಾನವಿಡಿ ಉಳಿತಾಯದ ಅಭ್ಯಾಸವನ್ನು ರೂಢಿಸುತ್ತದೆ.
- ಆರ್ಥಿಕ ಜಾಗೃತಿಯನ್ನು ಬೆಳೆಸುತ್ತದೆ.
- ಮಕ್ಕಳನ್ನು ಜವಾಬ್ದಾರಿಯುತ ವಯಸ್ಕರನ್ನಾಗಿ ರೂಪಿಸುತ್ತದೆ.
- ಆರ್ಥಿಕ ಸ್ವಾತಂತ್ರದ ಹಾದಿಯನ್ನು ಸುಗಮಗೊಳಿಸುತ್ತದೆ.
- ಅನಾರೋಗ್ಯಕರ ಪದಾರ್ಥಗಳನ್ನು ಸೇವಿಸದಿರುವ ಮೂಲಕ ಉತ್ತಮ ಆರೋಗ್ಯ ಮತ್ತು ಯೋಗಕ್ಷೇಮವನ್ನು ಕಾಪಾಡಿಕೊಳ್ಳಬಹುದು.
- ಉಳಿತಾಯದ ಮೂಲಕ ಹಣದ ಮೌಲ್ಯವನ್ನು ಅರ್ಥಮಾಡಿಕೊಳ್ಳುತ್ತಾರೆ..
- ಉಳಿತಾಯದಿಂದ ಸಾಮಾಜಿಕ ಚಟುವಟಿಕೆಗಳಲ್ಲಿ ನೆರವು ನೀಡುತ್ತಾರೆ.
- ಉಳಿತಾಯದ ಮೂಲಕ ವ್ಯಸನ ಮುಕ್ತರಾಗುತ್ತಾರೆ.

**ಉಪ ಸಂಹಾರ :**

ಬಹುರಾಜ್ಯ ಸಹಕಾರ ಸಂಘಗಳ (ತಿದ್ದುಪಡಿ) ಮಸೂದೆ 2023ರ ಅಂಗೀಕಾರದ ಸಂದರ್ಭದಲ್ಲಿ ರಾಜ್ಯ ಸಭೆಯಲ್ಲಿ ಮಾನ್ಯ ಕೇಂದ್ರ ಸಚಿವರಾದ ಶ್ರೀ ಪುರುಷೋತ್ತಮ್ ರೂಪಾಲಾ ಅವರು ಈ ಬ್ಯಾಂಕಿನ ಕುರಿತು ಪ್ರಸ್ತಾಪಿಸಿರುವುದನ್ನು ಇಲ್ಲಿ ಸ್ಮರಿಸಬಹುದು.

ಭಾರತದ ಪ್ರತಿಯೊಂದು ಜಿಲ್ಲೆಗಳಲ್ಲಿಯೂ ಸಹ ಇಂತಹ ಸಹಕಾರಿ ಸಂಸ್ಥೆಗಳನ್ನು ಪ್ರಾರಂಭಿಸುವ ಅಗತ್ಯತೆ ಇದೆ. ಆರ್ಥಿಕ ಸಾಕ್ಷರತೆ ಯಶಸ್ಸಿನ ಮೂಲಾಧಾರವಾಗಿರುವ ಈ ಯುಗದಲ್ಲಿ ಬಾಲ್ ಗೋಪಾಲ್ ಬ್ಯಾಂಕ್ ಯುವ ಜನತೆಯ ಸಬಲೀಕರಣದ ದಾರಿ ದೀಪವಾಗಿ ನಿಂತಿದೆ. ಕೇವಲ ಹಣಕಾಸು ಉದ್ದೇಶವನ್ನು ಮೀರಿ ಕಾರ್ಯನಿರ್ವಹಿಸುತ್ತಿರುವ ಈ ಬ್ಯಾಂಕ್ ಮಕ್ಕಳ ಮನಸ್ಸಿನಲ್ಲಿ ಆರ್ಥಿಕ ಬುದ್ಧಿವಂತಿಕೆ, ಸ್ವತಂತ್ರ ಚಿಂತನೆ ಮತ್ತು ಸಮಗ್ರ ಬೆಳವಣಿಗೆಯ ಬೀಜಗಳನ್ನು ಬಿತ್ತಿ, ಪೋಷಿಸುತ್ತಿದೆ. ಬಾಲ್ ಗೋಪಾಲ್ ಬ್ಯಾಂಕ್ ಕೇವಲ ಹಣಕಾಸು ಸಂಸ್ಥೆ ಅಲ್ಲ, ಇದು ಒಂದು ಚಳುವಳಿ, ಪ್ರಕಾಶಮಾನವಾದ ಸ್ವತಂತ್ರ ನಾಳೆಗಾಗಿ ನಂಬಿಕೆ ಮತ್ತು ಭರವಸೆ.

# ಜ್ಞಾನದ ಬೆಳಕಿನ ಉತ್ಸವ ದೀಪಾವಳಿ ಶುಭತರಲಿ

– ಶ್ರೀಮತಿ ಅಂಜನಾದೇವಿ ವಿ ಪಾಟೀಲ

ದೀಪಗಳ ಆವಳಿ ದೀಪಾವಳಿ. ಅಜ್ಞಾನದ ಕಾರಿರುಳು ಹೋಗಲಾಡಿಸಿ ಸುಜ್ಞಾನದ ಜ್ಯೋತಿಯನ್ನು ಮೂಡಿಸುವ ಬೆಳಕಿನ ಹಬ್ಬ ದೀಪಾವಳಿ ಕತ್ತಲೆಯಿಂದ ಬೆಳಕಿನೆಡೆಗೆ ಮುನ್ನಡೆಸುವ ದ್ಯೋತಕವ. ಅಂದು ಎಲ್ಲರ ಮನೆಯೂ ತೈಲದೀಪಗಳಿಂದ ಬೆಳಗುತ್ತಿದ್ದರೆ, ಮನಸ್ಸುಗಳು ಕೂಡ ಉತ್ಸಾಹ ಸಂತೋಷದಿಂದ ಬೆಳಗುತ್ತಿರುತ್ತವೆ.

ಈ ಹಬ್ಬವನ್ನು ಮುಖ್ಯವಾಗಿ ಐದು ದಿನಗಳಲ್ಲಿ ವಿಶೇಷ ಪೂಜೆಗಳಿಂದ ಆಚರಿಸಲಾಗುತ್ತದೆ. ಪ್ರಥಮ ದಿನವಾದ ಆಶ್ವಯುಜ ಬಹುಳ ತ್ರಯೋದಶಿಯಿಂದ ತೊಡಗಿ ಐದನೇ ದಿನವಾದ ಯಮದ್ವಿತೀಯದವರೆಗೆ ದೀಪಾವಳಿ ಆಚರಿಸಲಾಗುತ್ತದೆ. ಅಮಾವಾಸ್ಯೆಯ ಹದಿನೈದು ದಿನಗಳ ನಂತರ ಬರುವ ತುಳಸೀ ಪೂಜೆಯೊಂದಿಗೆ ಈ ಆಚರಣೆಯು ಮುಗಿಯುತ್ತದೆ.

ತ್ರಯೋದಶಿ ದಿನವು ಧನ್ ತೇರಾಸ್ ಎಂಬ ನಾಮದಿಂದ ಕರೆಯಲ್ಪಡುತ್ತಿದ್ದು, ಯಮರಾಜ ಮತ್ತು ಧನ್ವಂತರಿಯ ಐತಿಹ್ಯದೊಂದಿಗೆ ಕೊಂಡಿಯನ್ನಿರಿಸಿಕೊಂಡಿದೆ. ಆದುದರಿಂದಲೇ ಪ್ರಭಾತ ವೇಳೆಯಲ್ಲಿ ಹೆಂಗಳೆಯರು ಮನೆ ಪರಿಸರವನ್ನು ಶುಚಿಗೊಳಿಸಿ, ಮುಂಬಾಗಿಲನ್ನು ತಳಿರು ತೋರಣಗಳಿಂದ ಶೃಂಗರಿಸಿ ಆರೋಗ್ಯದ ಅಧಿಪತಿಯಾದ ಧನ್ವಂತರಿಯ ಸ್ವಾಗತಕ್ಕಾಗಿ ಸಜ್ಜಾಗುತ್ತಾರೆ. ಅಂತೆಯೇ ಮುಸ್ಸಂಜೆಯ ವೇಳೆ ಅಕಾಲ ಮೃತ್ಯುವನ್ನು ಹೋಗಲಾಡಿಸಲು ಮನೆಯ ಮುಂದೆ ದೀಪವನ್ನು ಇರಿಸಿ ಪ್ರಾರ್ಥನೆ ಸಲ್ಲಿಸಲಾಗುತ್ತದೆ.

ಸಂಜೆ ಅಲಂಕರಿಸಿದ ತಾಮ್ರದ ದೊಡ್ಡ ಹಂಡೆಯಲ್ಲಿ ರಾತ್ರಿಯೇ ನೀರು ತುಂಬಿಸಲಾಗುತ್ತದೆ. ಹಂಡೆಯ ಸುತ್ತಲೂ ದೀಪಾಲಂಕಾರ ಮಾಡಿ ಮನೆಮಂದಿಯೆಲ್ಲಾ ನೀರನ್ನು ತುಂಬಿಸುತ್ತಾರೆ. ನೀರನ್ನು ಕಾಯಿಸಿಡಲಾಗುತ್ತದೆ.

ಮರುದಿನ ಮುಂಜಾನೆ ಅಂದರೆ ನರಕ ಚತುರ್ದಶಿಯಂದು, ಬ್ರಾಹ್ಮೀ ಮುಹೂರ್ತದಲ್ಲಿ ಎದ್ದು ಮೈ ತಲೆಗೆ ಎಣ್ಣೆ ಹಚ್ಚಿ ಎಣ್ಣೆ ಸ್ನಾನ ಮಾಡುತ್ತಾರೆ. ಅನಂತರ ದೇವಸ್ಥಾನಕ್ಕೆ ತೆರಳಿ ಪೂಜೆ ಮುಗಿಸಿ ಬೆಳಗ್ಗಿನ ಉಪಹಾರ ಸೇವಿಸುತ್ತಾರೆ. ಮನೆಯ ಹಿರಿಯಾಳು ಉಡುಗೊರೆಗಳನ್ನಿತ್ತು ಆಶೀರ್ವದಿಸುತ್ತಾರೆ. ಮಧ್ಯಾಹ್ನದ ಭೋಜನವು ಪಾಯಸ ಮತ್ತು ಹಲವು ವಿಧದ ಸಿಹಿತಿಂಡಿಗಳನ್ನೊಳಗೊಂಡಿರುತ್ತದೆ.

ಭಗವಾನ್ ಶ್ರೀಕೃಷ್ಣನು ದುಷ್ಟ ರಾಕ್ಷಸನಾದ ನರಕಾಸುರನನ್ನು ವಧಿಸಿದ ಸ್ಮರಣಾರ್ಥವಾಗಿ ನರಕಾಸುರನ ಪ್ರತಿರೂಪವನ್ನು ಸುಟ್ಟು ಪಟಾಕಿಗಳನ್ನು ಸಿಡಿಸಿ ಸಂತೋಷದಿಂದ ಈ ದಿನವನ್ನು ಆಚರಿಸಲಾಗುತ್ತದೆ. ಇದೇ ದಿನ ಶ್ರೀರಾಮನು ರಾವಣನನ್ನು ವಧಿಸಿ ಅಯೋಧ್ಯೆಗೆ ಮರಳಿದ ದಿನವಾಗಿಯೂ ಆಚರಿಸಲಾಗುತ್ತದೆ.

ಅಮಾವಾಸ್ಯೆ ದಿನವೇ ದೀಪಾವಳಿ. ಅಂದು ವರ್ಷದ ಅತ್ಯಂತ ಕಾರಿರುಳು ಇರುವ ದಿನ ಎಂದು ನಂಬಲಾಗಿದೆ. ಆ ದಿನ ಲಕ್ಷ್ಮೀಪೂಜೆಗೆ, ಅದರಲ್ಲೂ ಧನಲಕ್ಷ್ಮಿ ಪೂಜೆಗೆ ವಿಶೇಷ ಮಹತ್ವ. ಆ ದಿನ ವ್ಯಾಪಾರಿಗಳು ಅಂಗಡಿಪೂಜೆ ಮಾಡಿ ಧನಲಕ್ಷ್ಮಿಯ ಕೃಪೆಗೆ ಪಾತ್ರರಾಗುತ್ತಾರೆ. ಕೆಲವೆಡೆ ಭಕ್ತರು ಧನಾಧಿಪತಿಯಾದ ಕುಬೇರನನ್ನು ಪೂಜಿಸಿ ಪೂಜಾಗೃಹದಲ್ಲಿ ಕುಬೇರಯಂತ್ರವನ್ನು ಸ್ಥಾಪಿಸುತ್ತಾರೆ. ಆದಿವಂದಿತ ಗಣಪನಿಗೆ ಪೂಜೆ ಸಲ್ಲಿಸಿದ ಮೇಲೆ ಕುಬೇರನಿಗೆ ಪೂಜೆ ಸಲ್ಲಿಸುವುದು ವಾಡಿಕೆ. ಕುಬೇರಯಂತ್ರ ಸ್ಥಾಪಿಸುವಾಗ ಜೇನು, ಬೆಲ್ಲ ಮತ್ತು ಒಣ ಖರ್ಜೂರವನ್ನು ಯಂತ್ರದ ಮುಂದಿರಿಸಿ ತುಪ್ಪದಿಂದ ದೀಪ ಹಚ್ಚುವುದು ಸಂಪ್ರದಾಯ. ಅಂಗಡಿಪೂಜೆಯಂದು ವ್ಯಾಪಾರಿಗಳು ತಮ್ಮ ಅಂಗಡಿಯನ್ನು ಚೊಕ್ಕಗೊಳಿಸಿ ಲಕ್ಷ್ಮೀದೇವಿಗೆ ಪೂಜೆ ಸಲ್ಲಿಸಿ ಕೃತಾರ್ಥರಾಗುತ್ತಾರೆ.

ಮರುದಿನ ಬಲಿಪಾಡ್ಯಮಿ. ಅಂದು ಬಲೀಂದ್ರ ಪೂಜೆ, ಗೋಪೂಜೆಗಳನ್ನು ಮಾಡಲಾಗುತ್ತದೆ. ಬಲೀಂದ್ರನ ರೂಪವನ್ನು ಮನೆ ಪರಿಸರದಲ್ಲಿ ಸ್ಥಾಪಿಸಿ ಪೂಜಿಸಲಾಗುತ್ತದೆ ಅಂತೆಯೇ ಗೋಪೂಜೆಯಂದು ದನಕರುಗಳನ್ನು ಸ್ನಾನ ಮಾಡಿಸಿ, ಶೃಂಗರಿಸಿ ಅವುಗಳಿಗೆ ಪುಷ್ಪ ಹಾರವನ್ನು ಹಾಕಿ ಪೂಜಿಸಿ ಸಿಹಿತಿಂಡಿ, ದೋಸೆ ಮತ್ತು ಅವಲಕ್ಕಿ ಬೆಲ್ಲವನ್ನು ತಿನಿಸಲಾಗುತ್ತದೆ. ಸಂಜೆಯ ವೇಳೆ ವರಲಕ್ಷ್ಮಿ, ಮಂಗಳಗೌರಿ ಮತ್ತು ಸ್ವರ್ಣಗೌರಿಯರಿಗೆ ಆರತಿ ಬೆಳಗಿ ಅಂದಿನ ರಾತ್ರಿ ದೀಪಾಲಂಕಾರ ಮಾಡಿ ಹೊಸ ಬಟ್ಟೆಗಳನ್ನುಟ್ಟು ಸಿಹಿತಿಂಡಿಗಳನ್ನು ಭಕ್ಷಿಸಿ, ಅಬ್ಬರದ ಪಟಾಕಿಗಳನ್ನು ಸಿಡಿಸಿ ಖುಷಿಯಿಂದ ಆಚರಿಸಲಾಗುತ್ತದೆ.

ಕೃಷಿಕರು ವಿಷ್ಣುವಿನ ಅವತಾರವಾದ ಬಲೀಂದ್ರನನ್ನು ಪೂಜಿಸಿ ತಮ್ಮ ಕಾಮನೆಗಳಿಗಾಗಿ ಪ್ರಾರ್ಥನೆ ಸಲ್ಲಿಸುತ್ತಾರೆ. ಬಲೀಂದ್ರ ಬಲೀಂದ್ರ ಕೂ... ಎಂದು ಬಲೀಂದ್ರನನ್ನು ಆಹ್ವಾನಿಸಲಾಗುತ್ತದೆ. ತಮ್ಮವರಿಗೆ ಸಿಹಿತಿಂಡಿಗಳನ್ನು ಹಂಚಿ, ಪಟಾಕಿಗಳನ್ನು ಸುಟ್ಟು ಉತ್ತಮವಾದ ಸಂಪತ್ತು ಸಮೃದ್ಧಿಗಳಿಗಾಗಿ ಪ್ರಾರ್ಥನೆ ಮಾಡಲಾಗುತ್ತದೆ.

ಐದನೇ ದಿನವಾದ ಭ್ರಾತೃ ದ್ವಿತೀಯ ಅಥವಾ ಯಮದ್ವಿತೀಯವು ಸಹೋದರ ಸಹೋದರಿಯರ ಆತ್ಮೀಯ ಬಾಂಧವ್ಯದ ದಿನವಾಗಿದ್ದು ಅಂ–ದು ಸಹೋದರರು ತಮ್ಮ ಸಹೋದರಿಯರ ಮನೆಗೆ ಭೇಟಿ ನೀಡುತ್ತಾರೆ. ಆದರದಿಂದ ಬರಮಾಡಿಕೊಳ್ಳುತ್ತಾ ಸಹೋದರಿಯರು ತಮ್ಮ ಸಹೋದರ–ರಿಗಾಗಿ ಪ್ರಾರ್ಥಿಸಿ ಹಣೆಗೆ ತಿಲಕವನ್ನಿಟ್ಟು ಭಾರೀ ಭೋಜನವನ್ನು ಉಣಬಡಿಸುತ್ತಾರೆ. ಒಂದು ರೀತಿಯಲ್ಲಿ ರಕ್ಷಾ ಬಂಧನದಂತೆಯೇ. ಈ ದಿನದ ಮಹತ್ವವೆಂದರೆ ಪುರಾಣಗಳಲ್ಲಿ ಯಮ ಮತ್ತು ತನ್ನ ಸಹೋದರಿ ಯಮುನೆಯು ದೀರ್ಘಕಾಲದ ನಂತರ ಗೋಕುಲದಲ್ಲಿ ಸಂಧಿಸಿದ ಪುಣ್ಯದಿನ ಇದಾಗಿದ್ದು ಅವರ ಒಲವಿನ ಪ್ರತೀತಿಗಾಗಿ ಇದು ಭ್ರಾತೃ ದ್ವಿತೀಯವೆಂದು ಕರೆಯಲ್ಪಡುತ್ತದೆ. ಉತ್ತರ ಭಾರತದಲ್ಲಿ ಭಾಯಿ ದೂಜ್ ಎಂದು ಪ್ರಸಿದ್ಧಿಯಾಗಿರುವ ಇದಕ್ಕೆ ಹೆಚ್ಚಿನ ಮಹತ್ವ ನೀಡಲಾಗುತ್ತದೆ.

ದೀಪಾವಳಿಯ ಅಬ್ಬರ ಮುಗಿದ ನಂತರದ ಹದಿನೈದನೇ ದಿನ ಅಂದರೆ ಹುಣ್ಣಿಮೆಯ ದಿನದಂದು ಆಚರಿಸುವ ಹಬ್ಬವೇ ತುಳಸೀ ವಿವಾಹ ಅಥವಾ ತುಳಸೀ ಪೂಜೆ. ದೇವಿ ಮಹಾಲಕ್ಷ್ಮಿಯು 'ವೃಂದಾ' ಎಂದು ತುಳಸಿಯ ರೂಪದಲ್ಲಿ ಜನಿಸಿ ಭಕ್ತರನ್ನು ರಕ್ಷಿಸುತ್ತಾಳೆ ಎಂಬ ವಿಶ್ವಾಸದಿಂದ ತುಳಸೀ ಪೂಜೆಯನ್ನು ಮಾಡಲಾಗುತ್ತದೆ. ಅಂದು ಮನೆಯ ಮುಂದಿರುವ ತುಳಸೀಗಿಡವನ್ನು ಕಬ್ಬಿನ ಬೇಲಿ ಕಟ್ಟಿ ಹುಣಸೆ ಮತ್ತು ನೆಲ್ಲಿಕಾಯಿ ಮರದ ರೆಂಬೆಗಳಂದ ಶೃಂಗರಿಸಿ ಸಂಜೆಯ ವೇಳೆ ಪೂಜೆ ಮಾಡಲಾಗುತ್ತದೆ. ಕಬ್ಬು ಮಿಶ್ರಿತ ಅವಲಕ್ಕಿ ಬೆಲ್ಲದ ಪ್ರಸಾದವನ್ನು ವಿತರಿಸಿ ತುಳಸೀ ಪೂಜೆಯನ್ನು ಮುಕ್ತಾಯಗೊಳಿಸುತ್ತಾರೆ. ಇದರೊಂದಿಗೆ ದೀಪಾವಳಿಯ ಆಚರಣೆಯು ಕೊನೆಗೊಳ್ಳುತ್ತದೆ.

# ಸಣ್ಣದಾಗಿ ಆರಂಭಿಸಿ, ದೊಡ್ಡದಾಗಿ ಬೆಳೆಯಿರಿ - ಸ್ಟಾರ್ಟ್‌ಅಪ್

**ದೇಶದ ನಿರುದ್ಯೋಗ ಸಮಸ್ಯೆಗೆ ಪರಿಹಾರ ಒದಗಿಸುವ ದೃಷ್ಠಿಯಿಂದ ದೇಶದಲ್ಲಿ ಕೈಗಾರಿಕೆಗಳನ್ನು ಹೆಚ್ಚಿಸುವ ದೃಷ್ಠಿಯಿಂದ ಕೇಂದ್ರ ಹಾಗೂ ರಾಜ್ಯ ಸರಕಾರಗಳು ವಿದ್ಯಾವಂತ ಯುವಕ ಯುವತಿಯರು ತಮ್ಮದೆ ಆದ ಉತ್ಪಾದನಾ ಘಟಕಗಳನ್ನು ಪ್ರಾರಂಭಿಸಿ ತನ್ಮೂಲಕ ತಾವು ಉದ್ಯೋಗಪತಿಯಾಗುವುದರ ಜೊತೆಗೆ ಯುವಕರಿಗೆ ನೀಡುವ ವ್ಯವಸ್ಥೆಯೆ "ಸ್ಟಾರ್ಟ್ ಆಪ್" ಈ ಬಗ್ಗೆ ವಿವರಗಳು ಈ ಲೇಖನದಲ್ಲಿದೆ.**

– ಶ್ರೀಮತಿ ಸವಿತ ಎನ್. ಇ. ಕ.ರಾ.ಸೌ.ಸಂ.ಸ.ನಿ., ಬೆಂಗಳೂರು



ರಾಷ್ಟ್ರ ನಿರ್ಮಾಣದಲ್ಲಿ ನವೀನತೆಯನ್ನು ಸಾಧಿಸುವುದಕ್ಕಾಗಿ ಕೇಂದ್ರ ಸರ್ಕಾರ ಹೊಸ ಹೊಸ ಕೈಗಾರಿಕೆಗಳನ್ನು ಹಾಗೂ ಉದ್ಯಮಗಳನ್ನು ಪ್ರಾರಂಭಿಸುವುದಕ್ಕಾಗಿ ಉತ್ತೇನಜನ ನೀಡಿ ಸಾರ್ಟ್‌ಅಪ್ ಎಂಬ ಹೆಸರಿನಲ್ಲಿ ಧನ ಸಹಾಯ ಸೇರಿದಂತೆ ಹಲವಾರು ಸೌಲಭ್ಯಗಳನ್ನು ಒದಗಿಸಿದೆ. ಈ ಸೌಲಭ್ಯಗಳನ್ನು ಹಾಗೂ ಹಣಕಾಸಿನ ನೆರವನ್ನು ಬಳಸಿಕೊಂಡು ವಿಶೇಷವಾಗಿ ಯುವಕರು ತಮ್ಮದೇ ಆದ ಸಂಸ್ಥೆಗಳನ್ನು ಪ್ರಾರಂಭಿಸಲು ತಮ್ಮನ್ನು ಉದ್ಯಮಿ ರೂಪುಕೊಂಡು ಜೊತೆಗೆ ಇತರರಿಗೆ ಉದ್ಯೋಗ ನೀಡುವಂತಹ ಪ್ರವೃತ್ತಿಯೊಂದಿಗೆ ಹಲವಾರು ಯುವಕ–ಯುವತಿಯರಿಗೆ ಉದ್ಯೆಗವನ್ನು ಒದಗಿಸುವ ಪರಿಣಾಮಕಾರಿ ಯೋಜನೆ ಇದಾಗಿದೆ. ಈ ಯೋಜನೆಯ ಕುರಿತು ಸಂಪೂರ್ಣ ವಿವರಗಳನ್ನು ಈ ಲೇಖನದಲ್ಲಿ ಪ್ರಸ್ತಾಪಿಸಲಾಗಿದೆ. ಮೂರ್ತಿ ಚಿಕ್ಕದಾದರೂ ಕೀರ್ತಿ ದೊಡ್ಡದು ಎಂಬಂತೆ ನಾವು ಮಾಡುವ ಕೆಲಸ ಕಾರ್ಯಗಳು ಚಿಕ್ಕದಾದರೂ ನಿಮ್ಮ ಮನೆಯಲ್ಲಿದ್ದುಕೊಂಡೇ ಅಥವಾ ಪುಟ್ಟ ಕೊಠಡಿಯಲ್ಲಿ ಸಣ್ಣದಾಗಿ ಕಂಪನಿ ಆರಂಭಿಸಿ. ನಿಮ್ಮ ಉತ್ಪನ್ನಗಳಿಗೆ ಗ್ರಾಹಕರ ಪ್ರತಿಕ್ರಿಯೆ ನೋಡಿಕೊಂಡು ಬಿಸ್ನೆಸ್ ಅನ್ನು ಬೆಳೆಸಿರಿ. ಈ ರೀತಿ ಸಣ್ಣದಾಗಿ ಆರಂಭಿಸುವುದರಿಂದ ನಷ್ಟವೂ ಕಡಿಮೆಯಾಗುತ್ತದೆ. ನಿಮಗೆ ಕಲಿಯಲೂ ಸಾಕಷ್ಟು ಅವಕಾಶ ದೊರಕುತ್ತದೆ. ಸ್ಟಾರ್ಟ್‌ಅಪ್ ಎಂಬ ಉದ್ಯಮ ಸಾಹಸವನ್ನು ದೇಶದಲ್ಲಿ ಸಾವಿರಾರು ಜನರು ಮಾಡಿದ್ದಾರೆ. ಬಹುತೇಕರು ಆರಂಭಿಕ ಉತ್ಸಾಹದಿಂದ ಉದ್ಯಮ ಸ್ಥಾಪಿಸುತ್ತಾರೆ. ನಿಮ್ಮ ಐಡಿಯಾ ವಿನೂತನವಾಗಿದ್ದರೆ ಉತ್ತಮ. ದೇಶದಲ್ಲಿಂದು ಸಾಕಷ್ಟು ಸ್ಟಾರ್ಟ್‌ಅಪ್‌ಗಳು ಇವೆ.

### ಸ್ಟಾರ್ಟ್‌ಅಪ್ ಎಂದರೇನು?

ಸ್ಟಾರ್ಟ್–ಅಪ್ ಎನ್ನುವುದು ಉದ್ಯಮಿಯೊಬ್ಬರು ಸ್ಕೇಲೆಬಲ್ ವ್ಯವಹಾರ ಮಾದರಿಯನ್ನು ಹುಡುಕಲು, ಅಭಿವೃದ್ಧಿಪಡಿಸಲು ಮತ್ತು ಮೌಲ್ಯೀಕರಿಸಲು ಕೈಗೊಂಡ ಕಂಪನಿ ಅಥವಾ ಯೋಜನೆಯಾಗಿದೆ ಉದ್ಯಮಶೀಲತೆಯು ಎಲ್ಲಾ ಹೊಸ ವ್ಯವಹಾರಗಳನ್ನು ಒಳಗೊಂಡಿರುತ್ತದೆ, ಸ್ವಯಂ–ಉದ್ಯೋಗ ಮತ್ತು ಸಾರ್ವಜನಿಕವಾಗಿ ಹೋಗಲು ಉದ್ದೇಶಿಸದ ವ್ಯವಹಾರಗಳು ಸೇರಿದಂತೆ, ಸ್ಟಾರ್ಟ್‌ಅಪ್‌ಗಳು ಏಕವ್ಯಕ್ತಿ ಸಂಸ್ಥಾಪಕನನ್ನು ಮೀರಿ ದೊಡ್ಡದಾಗಿ ಬೆಳೆಯಲು ಉದ್ದೇಶಿಸಿರುವ ಹೊಸ ವ್ಯವಹಾರಗಳಾಗಿವೆ.

ಭಾರತದಲ್ಲಿ ಕೇಂದ್ರ ಸ್ಥಾನ ಹೊಂದಿದ್ದು, ಸ್ಥಾಪನೆಗೊಂಡು 10ವರ್ಷ ಪೂರ್ಣಗೊಳಿಸದ ಹಾಗೂ 100ಕೋಟಿ ರೂ.ಗಿಂತ ಕಡಿಮೆ ವಾರ್ಷಿಕ ವಹಿವಾಟು ನಡೆಸುವ ಕಂಪನಿಗಳನ್ನು ಸ್ಟಾರ್ಟ್‌ಅಪ್ ಎಂದು ಪರಿಗಣಿಸಲಾಗುತ್ತದೆ. ಹೊಸ ಉತ್ಪನ್ನ ಅಥವಾ ಸೇವೆ ಅನ್ವೇಷಣೆ, ಅಭಿವೃದ್ಧಿ ಅಥವಾ ಪ್ರಗತಿಯ ನಿಟ್ಟಿನಲ್ಲಿ ಶ್ರಮಿಸುತ್ತಿರುವ ಸಂಸ್ಥೆಗಳಿಗೆ ಹೆಚ್ಚಿನ ಉತ್ತೇಜನ ನೀಡಲಾಗುತ್ತಿದೆ. ಉದ್ಯೋಗ ಸೃಷ್ಟಿ ಜೊತೆ ಉತ್ತಮ ಆದಾಯ ಹುಟ್ಟು ಹಾಕುವ ಸಾಮರ್ಥ್ಯ ಹೊಂದಿರುವ ಸಂಸ್ಥೆಗಳನ್ನು ಕೂಡ ಸ್ಟಾರ್ಟ್‌ಅಪ್ ಪಟ್ಟಿಯಲ್ಲಿ ಸೇರಿಸಲಾಗಿದೆ. ಈಗಾಗಲೇ ಇರುವ ಕಂಪನಿ ಅಥವಾ ಸಂಸ್ಥೆಯನ್ನು ವಿಭಜಿಸಿ ಹೊಸ ಸಂಸ್ಥೆ ಹುಟ್ಟು ಹಾಕಿದ್ರೆ ಅಥವಾ ಇರುವ ಸಂಸ್ಥೆಗೆ ಹೊಸ ರೂಪ ನೀಡಿದರೆ ಅಂಥವನ್ನು ಸರ್ಕಾರ ಸ್ಟಾರ್ಟ್‌ಅಪ್ ಎಂದು ಪರಿಗಣಿಸಲಾಗದು. ಭಾರತೀಯ ಉದ್ಯಮಿಗಳಿಗೆ ಮೊಬೈಲ್ ಆಪ್ ಸ್ಟಾರ್ಟ್‌ಅಪ್‌ಗಳನ್ನು ಪ್ರಾರಂಭಿಸಲು ಐ–ಮೇಡ್ ಎಂಬ ಕಾರ್ಯಕ್ರಮವನ್ನು ಕೂಡ ಸರ್ಕಾರ ಪ್ರಾರಂಭಿಸಿದೆ.

### ಸ್ಟಾರ್ಟ್‌ಅಪ್ ಇಂಡಿಯಾ ಯೋಜನೆ ಉದ್ದೇಶ ಗುರಿ :

ಸ್ಟಾರ್ಟ್‌ಅಪ್ ಇಂಡಿಯಾ ಯೋಜನೆ 2016 ರಲ್ಲಿ ಪ್ರಾರಂಭವಾಗಿ ಭಾರತ ಸರ್ಕಾರವು ಕೈಗೊಂಡ ಉಪಕ್ರಮವಾಗಿದೆ. ಸ್ಟಾರ್ಟಪ್‌ಗಳನ್ನು ಉತ್ತೇಜಿಸುವುದು, ಉದ್ಯೋಗ ಸೃಷ್ಟಿಸುವುದು ಮತ್ತು ಸಂಪತ್ತು ಸೃಷ್ಟಿ ಮಾಡುವುದು ಯೋಜನೆಯ ಮುಖ್ಯ ಉದ್ದೇಶವಾಗಿದೆ. ಸ್ಟಾರ್ಟ್‌ಅಪ್ ಇಂಡಿಯಾ, ಸರ್ಕಾರಿ ಉಪಕ್ರಮವಾಗಿದ್ದು, ಸ್ಟಾರ್ಟ್‌ಅಪ್ ಸಂಸ್ಕೃತಿಯ ಬೆಳವಣಿಗೆಯನ್ನು ಉತ್ತೇಜಿಸಲು ಮತ್ತು ಭಾರತದಲ್ಲಿ ನಾವೀನ್ಯತೆ ಮತ್ತು ಉದ್ಯಮಶೀಲತೆಗಾಗಿ ಅಂತರ್ಗತ ಪರಿಸರ ವ್ಯವಸ್ಥೆಯನ್ನು ನಿರ್ಮಿಸಲು ಪ್ರಮುಖ ವೇಗವರ್ಧಕವಾಗಿ ಕಾರ್ಯನಿರ್ವಹಿಸುತ್ತದೆ. ಮಹತ್ವಾಕಾಂಕ್ಷಿ ಉದ್ಯಮಿಗಳಿಗೆ ವಿವಿಧ ಯೋಜನೆಗಳು ಮತ್ತು ಹಣಕಾಸಿನ ನೆರವಿನೊಂದಿಗೆ, ಇದು ಸಂಪತ್ತನ್ನು ಉತ್ಪಾದಿಸುವ ಮತ್ತು ಭಾರತೀಯ ಆರ್ಥಿಕತೆಯೊಳಗೆ ಉದ್ಯೋಗಾವಕಾಶಗಳನ್ನು ಹೆಚ್ಚಿಸುವ ಗುರಿಯನ್ನು ಹೊಂದಿದೆ.

### ಸ್ಟಾರ್ಟಪ್ ಇಂಡಿಯಾ ಹಬ್

ಸ್ಟಾರ್ಟ್‌ಅಪ್ ಪರಿಸರ ವ್ಯವಸ್ಥೆಯಲ್ಲಿನ ಎಲ್ಲಾ ಪಾಲುದಾರರಿಗೆ ಸಂವಹನ ನಡೆಸಲು, ಜ್ಞಾನ ವಿನಿಮಯ ಮಾಡಿಕೊಳ್ಳಲು ಮತ್ತು ಹೆಚ್ಚು ಕ್ರಿಯಾತ್ಮಕ ವಾತಾವರಣದಲ್ಲಿ ಪರಸ್ಪರ ಪಾಲುದಾರಿಕೆ ನಿರ್ಮಿಸಲು ವೇದಿಕೆ ಒದಗಿಸುವುದು. ಯಾವುದೇ ಸ್ಟಾರ್ಟ್‌ಅಪ್ ಇಂಡಿಯಾ ಯೋಜನೆಗೆ ಅರ್ಹರಾಗಲು ಮುಖ್ಯವಾಗಿ ಒಬ್ಬರು 18 ವರ್ಷಕ್ಕಿಂತ ಮೇಲ್ಪಟ್ಟವರಾಗಿರಬೇಕು

ಅವರ ಕಂಪನಿಯು ಖಾಸಗಿ ಸೀಮಿತ ಅಥವಾ ಪಾಲುದಾರಿಕೆ ಹೊಂದಿರಬೇಕು.

**ಸ್ಟಾರ್ಟ್‌ಅಪ್ ಇಂಡಿಯಾ ಯೋಜನೆ ಕಾರ್ಯಕ್ರಮಗಳು**

ಈ ಯೋಜನೆಯು ಬಲವಾದ ಪರಿಸರ ವ್ಯವಸ್ಥೆಯನ್ನು ನಿರ್ಮಿಸಲು ಮತ್ತು ಭಾರತವನ್ನು ಪರಿವರ್ತಿಸಲು ಹಲವಾರು ಕಾರ್ಯಕ್ರಮಗಳನ್ನು ಪ್ರಾರಂಭಿಸಿದೆ. ಈ ಕಾರ್ಯಕ್ರಮಗಳನ್ನು ಕೈಗಾರಿಕೆ ಮತ್ತು ಆಂತರಿಕ ವ್ಯಾಪಾರದ ಉತ್ತೇಜನ ಇಲಾಖೆ (DPIIT) ನಿಯಂತ್ರಿಸುತ್ತದೆ.. ಸ್ಟಾರ್ಟ್‌ಅಪ್ ಇಂಡಿಯಾ ಯೋಜನೆಯು ಕೆಲಸದ ಸುಲಭತೆ, ಹಣಕಾಸಿನ ನೆರವು, ಸರ್ಕಾರಿ ಟೆಂಡರ್, ನೆಟ್‌ವರ್ಕಿಂಗ್ ಅವಕಾಶಗಳು, ಮುಂತಾದ ಹಲವಾರು ಪ್ರಯೋಜನಗಳೊಂದಿಗೆ ಬಂದಿದೆ.

**ಸ್ಟಾರ್ಟ್‌ಅಪ್ ಇಂಡಿಯಾ ಯೋಜನೆಯ ನೊಂದಾವಣೆ ಹಾಗೂ ಪ್ರಯೋಜನಗಳು**

ಕೆಲಸದ ಸುಲಭ ಸರ್ಕಾರವು ಸ್ಟಾರ್ಟ್‌ಅಪ್ ಇಂಡಿಯಾ ಹಬ್‌ಗಳನ್ನು ಸ್ಥಾಪಿಸಿದೆ ಸಂಯೋಜನೆ, ನೋಂದಣಿ, ಕುಂದುಕೊರತೆ, ನಿರ್ವಹಣೆ ಇತ್ಯಾದಿಗಳನ್ನು ಸುಲಭವಾಗಿ ನಿರ್ವಹಿಸಲಾಗುತ್ತದೆ. ಆನ್‌ಲೈನ್ ಪೋರ್ಟಲ್‌ನಲ್ಲಿ, ಸರ್ಕಾರವು ತೊಂದರೆ-ಮುಕ್ತ ನೋಂದಣಿ ವ್ಯವಸ್ಥೆಯನ್ನು ಸ್ಥಾಪಿಸಿದೆ, ಇದರಿಂದ ನೀವು ಎಲ್ಲಿಂದಲಾದರೂ ಮತ್ತು ಯಾವುದೇ ಸಮಯದಲ್ಲಿ ನೋಂದಾಯಿಸಿಕೊಳ್ಳಬಹುದು. ಸ್ಟಾರ್ಟ್‌ಅಪ್ ಇಂಡಿಯಾ ಯೋಜನೆಯಡಿಯಲ್ಲಿ ಸ್ಟಾರ್ಟ್‌ಅಪ್‌ಗಳು ಸರ್ಕಾರದಿಂದ ಅನೇಕ ನೆರವುಗಳನ್ನು ಪಡೆಯಬಹುದು. ಆದ್ರೆ ಈ ಎಲ್ಲಾ ಪ್ರಯೋಜನಗಳನ್ನು ಪಡೆಯಲು ಆ ಸಂಸ್ಥೆ ಅಥವಾ ಕಂಪನಿ ಕೈಗಾರಿಕೆ ಹಾಗೂ ಆಂತರಿಕ ವ್ಯಾಪಾರ ಸಂವರ್ಧನ ಇಲಾಖೆ (ಡಿಪಿಐ-ಐಟಿ)ಯಿಂದ ಸ್ಟಾರ್ಟ್‌ಅಪ್ ಎಂದು ಗುರುತಿಸಲ್ಪಟ್ಟಿರಬೇಕು.

1. ಆರು ಕಾರ್ಮಿಕ ಹಾಗೂ ಮೂರು ಪರಿಸರ ಕಾನೂನುಗಳ ಅನುಸರಣೆ ಬಗ್ಗೆ ಸ್ಟಾರ್ಟ್‌ಅಪ್‌ಗಳೇ ಸ್ವ ದೃಢೀಕರಣ ಕೊಟ್ಟುಕೊಳ್ಳಬಹುದಾಗಿದೆ. ಹೀಗಾಗಿ ಇದಕ್ಕೆ ಸಂಬಂಧಿಸಿದ ಯಾವುದೇ ಇಲಾಖೆಯನ್ನು ಸಂಪರ್ಕಿಸಬೇಕಾದ ಅಗತ್ಯವಿಲ್ಲ. ಈ ಸ್ವದೃಢೀಕರಣವನ್ನು ಸ್ಟಾರ್ಟ್‌ಅಪ್ ಪ್ರಾರಂಭಗೊಂಡ 5ವರ್ಷಗಳ ತನಕ ಮಾತ್ರ ಮಾಡಿಕೊಳ್ಳಲು ಅವಕಾಶವಿದೆ. ಆ ಬಳಿಕ ನಿಗದಿತ ನಿಯಮಗಳನ್ನು ಪಾಲಿಸಬೇಕಾಗುತ್ತದೆ. ಸ್ಟಾರ್ಟ್‌ಅಪ್‌ಗಳ ಮೇಲಿನ ನಿಯಂತ್ರಣವನ್ನು ತಗ್ಗಿಸೋ ಉದ್ದೇಶದಿಂದ ಸರ್ಕಾರ ಈ ಅನುಕೂಲವನ್ನು ಕಲ್ಪಿಸಿದೆ. ಉದ್ಯಮಿಗಳಿಗೆ ವಿವಿಧ ಇಲಾಖೆಗಳಿಂದ ಅನುಮೋದನೆ ಪಡೆದುಕೊಳ್ಳೋ ಕೆಲಸ ತಗ್ಗಿಸಿ ಉದ್ಯಮದ ಮೇಲೆ ಹೆಚ್ಚಿನ ಗಮನ ಕೇಂದ್ರೀಕರಿಸಲು ನೆರವಾಗೋ ಉದ್ದೇಶದಿಂದ ಈ ಸಡಿಲಿಕೆ ಮಾಡಲಾಗಿದೆ.
2. ಇಂಟರ್ ಮಿನಿಸ್ಟ್ರಿಯಲ್ ಬೋರ್ಡ್ ಪ್ರಮಾಣಪತ್ರ ಹೊಂದಿರೋ ಸ್ಟಾರ್ಟ್‌ಅಪ್‌ಗಳು ಗಳಿಸುವ ಲಾಭಕ್ಕೆ ಸತತ ಮೂರು ವರ್ಷಗಳ ತನಕ ಆದಾಯ ತೆರಿಗೆ ವಿನಾಯ್ತಿ ನೀಡಲಾಗಿದೆ. ಉದ್ಯಮದ ಬೆಳವಣಿಗೆಯನ್ನು ಪ್ರೋತ್ಸಾಹಿಸೋ ನಿಟ್ಟಿನಲ್ಲಿ ಇಂಥ ವಿನಾಯ್ತಿ ನೀಡಲಾಗಿದೆ.
3. ಸ್ಟಾರ್ಟ್‌ಅಪ್ ಪೇಟೆಂಟ್ ಅರ್ಜಿಯ ಕ್ಷಿಪ್ರ ವಿಲೇವಾರಿ ಹಾಗೂ ಬೌದ್ಧಿಕ ಆಸ್ತಿ ಹಕ್ಕುಗಳ ರಕ್ಷಣೆಗೆ ಸರ್ಕಾರ ಸೂಕ್ತ ಕ್ರಮ ಕೈಗೊಳ್ಳುತ್ತದೆ.

**ಸ್ಟಾರ್ಟ್ ಅಪ್ ಇಂಡಿಯಾದ ಪ್ರಯೋಜನಗಳು**

1. ಆರ್ಥಿಕ ಪ್ರಯೋಜನಗಳು
2. ಆದಾಯ ತೆರಿಗೆ ಪ್ರಯೋಜನಗಳು
3. ನೋಂದಣಿ ಪ್ರಯೋಜನಗಳು
4. ಸರ್ಕಾರಿ ಟೆಂಡರ್‌ಗಳು
5. ಬೃಹತ್‌ನೆಟ್‌ವ ರ್ಕಿಂಗ್ ಅವಕಾಶಗಳು

ಧನಸಹಾಯ ಮತ್ತು ಪ್ರೋತ್ಸಾಹ

ಸ್ಟಾರ್ಟ್‌ಅಪ್‌ಗಳಿಗೆ ಹಣಕಾಸಿನ ನೆರವು ನೀಡಲು, 1.6 ಶತಕೋಟಿ ಡಾಲರ್ ನಷ್ಟು ಹಣಕಾಸು ನಿಧಿಯನ್ನು ಪರಿಚಯಿಸಲಾಗಿದೆ ಮತ್ತು ಇದನ್ನು ಸ್ಮಾಲ್ ಇಂಡಸ್ಟ್ರೀಸ್ ಡೆವಲಪ್‌ಮೆಂಟ್ ಬ್ಯಾಂಕ್ ಆಫ್ ಇಂಡಿಯಾ (SIDBI) ನಿರ್ವಹಿಸುತ್ತಿದೆ. ಸ್ಟಾರ್ಟ್‌ಅಪ್‌ಗಳನ್ನು ಉತ್ತೇಜಿಸಲು, ಸರ್ಕಾರವು ಹಣಕಾಸಿನ ನೆರವು ನೀಡುತ್ತದೆ, ಇದು ರೂ.ಗಳ ಸಂಗ್ರಹವನ್ನು ಸ್ಥಾಪಿಸಿದೆ. 10,000 4 ವರ್ಷಗಳವರೆಗೆ ಕೋಟಿಗಳು (ಪ್ರತಿ ವರ್ಷ ರೂ. 2500). ಈ ನಿಧಿಯಿಂದ ಸರ್ಕಾರವು ಸ್ಟಾರ್ಟ್‌ಅಪ್‌ಗಳಲ್ಲಿ ಹೂಡಿಕೆ ಮಾಡುತ್ತದೆ. ದಿ ಆದಾಯ ಸ್ಟಾರ್ಟಪ್ ಸ್ಥಾಪನೆಯಾದ ನಂತರ ಮೊದಲ 3 ವರ್ಷಗಳವರೆಗೆ ತೆರಿಗೆ ವಿನಾಯಿತಿ ಲಭ್ಯವಿದೆ. ಆದಾಯ ತೆರಿಗೆ ಕಾಯಿದೆಯಡಿಯಲ್ಲಿ, ಸ್ಟಾರ್ಟ್-ಅಪ್ ಕಂಪನಿಯು ಯಾವುದೇ ಷೇರುಗಳನ್ನು ಪಡೆದರೆ, ಅದು ಮೀರಿದೆ ಮಾರುಕಟ್ಟೆ ಅಂತಹ ಹೆಚ್ಚಿನ ಷೇರುಗಳ ಮೌಲ್ಯವು ಸ್ವೀಕರಿಸುವವರ ಕೈಯಲ್ಲಿ ತೆರಿಗೆಗೆ ಒಳಪಟ್ಟಿರುತ್ತದೆ. ಅಲ್ಲದೆ ಇತರ ಮೂಲಗಳಿಂದ ಆದಾಯ. ಸ್ಟಾರ್ಟ್‌ಅಪ್ ಇಂಡಿಯಾ ಯೋಜನೆಯಡಿಯಲ್ಲಿ, ಸರ್ಕಾರದ ಬೆಂಬಲವನ್ನು ಸುಲಭವಾಗಿ ಪಡೆಯುವಲ್ಲಿ ಸ್ಟಾರ್ಟ್‌ಅಪ್‌ಗಳು ಆದ್ಯತೆಯನ್ನು ಪಡೆಯುತ್ತವೆ. ನೆಟ್‌ವರ್ಕಿಂಗ್ ಅವಕಾಶಗಳು ವ್ಯಕ್ತಿಗಳು ವಿವಿಧ ಆರಂಭಿಕ ಪಾಲುದಾರರನ್ನು ನಿರ್ದಿಷ್ಟ ಸ್ಥಳ ಮತ್ತು ಸಮಯದಲ್ಲಿ ಭೇಟಿಯಾಗಲು ಅನುವು ಮಾಡಿಕೊಡುತ್ತದೆ. ದೇಶೀಯ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ವಾರ್ಷಿಕವಾಗಿ ಎರಡು ಆರಂಭಿಕ ಪರೀಕ್ಷೆಗಳನ್ನು ನಡೆಸುವ ಮೂಲಕ ಸರ್ಕಾರವು ಅದನ್ನು ನಿರೂಪಿಸುತ್ತದೆ. ಇದಲ್ಲದೆ, ಸ್ಟಾರ್ಟ್‌ಅಪ್ ಇಂಡಿಯಾ ಯೋಜನೆಯು ಬೌದ್ಧಿಕ ಆಸ್ತಿ ಜಾಗೃತಿ ಕಾರ್ಯಾಗಾರ ಮತ್ತು ಜಾಗೃತಿಯನ್ನು ಸಹ ಒದಗಿಸುತ್ತದೆ.

ಕೈಗಾರಿಕೆ ಮತ್ತು ಆಂತರಿಕ ವ್ಯಾಪಾರದ ಉತ್ತೇಜನ ಇಲಾಖೆ -DPIIT ಯಿಂದ ಪ್ರಯೋಜನಗಳು ಸ್ಟಾರ್ಟ್‌ಅಪ್ ಇಂಡಿಯಾ ಸ್ಕೀಮ್‌ನಲ್ಲಿ, DPIIT ಅಡಿಯಲ್ಲಿ ನೋಂದಾಯಿಸಲಾದ ಕಂಪನಿಗಳು ಈ ಕೆಳಗಿನ ಪ್ರಯೋಜನಗಳಿಗೆ ಅರ್ಹವಾಗಿವೆ. ಸ್ಟಾರ್ಟ್‌ಅಪ್‌ಗಳಿಗೆ ಸುಲಭ ಅನುಸರಣೆ, ವಿಫಲವಾದ ಸ್ಟಾರ್ಟ್‌ಅಪ್‌ಗಳಿಗೆ ಸುಲಭ ನಿರ್ಗಮನ ಪ್ರಕ್ರಿಯೆ, ಕಾನೂನು ಬದ್ಧ ಬೆಂಬಲ ಮತ್ತು ಮಾಹಿತಿ ವೆಬ್‌ಸೈಟ್‌ನಂತಹ ಅನೇಕ ಪ್ರಯೋಜನಗಳಿವೆ.

ಧನಸಹಾಯ ಮತ್ತು ಪ್ರೋತ್ಸಾಹ ಸ್ಟಾರ್ಟ್‌ಪ್‌ಗಳು ಆದಾಯ ತೆರಿಗೆ ಮತ್ತು ಮೇಲಿನ ವಿನಾಯಿತಿಯ ಪ್ರಯೋಜನಗಳನ್ನು ಪಡೆಯುತ್ತವೆ ಬಂಡವಾಳ ಲಾಭ ತೆರಿಗೆ. ಆರಂಭಿಕ ಪರಿಸರ ವ್ಯವಸ್ಥೆಯಲ್ಲಿ ಹೆಚ್ಚಿನ ಬಂಡವಾಳವನ್ನು ವ್ಯಾಪಿಸಲು ನಿಧಿಗಳು ಮತ್ತು ಕಾವು ಮತ್ತು ಕೈಗಾರಿಕೆ ಹಲವಾರು ಇನ್ಕ್ಯುಬೇಟರ್‌ಗಳು(ಕೃತಕ ಶಾಖೋಪರಣ) ಮತ್ತು ಇನ್ನೋವೇಶನ್ ಲ್ಯಾಬ್‌ಗಳನ್ನು ರಚಿಸುವುದರಿಂದ ಇನ್‌ಕ್ಯುಬೇಶನ್ ಸ್ಟಾರ್ಟ್‌ಅಪ್‌ಗಳಿಗೆ ಪ್ರಯೋಜನಕಾರಿಯಾಗಿದೆ.

### ಅರ್ಜಿ ಸಲ್ಲಿಸುವ ವಿಧಾನ

Startupindia.gov.in ಗೆ ಭೇಟಿ ನೀಡಿ ನಿಮ್ಮ ಕಂಪನಿಯ ಹೆಸರು, ಸ್ಥಾಪನೆ ಮತ್ತು ನೋಂದಣಿ ದಿನಾಂಕವನ್ನು ನಮೂದಿಸಿ ಪ್ಯಾನ್ ವಿವರಗಳು, ವಿಳಾಸ, ಪಿನ್‌ಕೋಡ್ ಮತ್ತು ರಾಜ್ಯವನ್ನು ನಮೂದಿಸಿ ಅಧಿಕೃತ ಪ್ರತಿನಿಧಿ, ನಿರ್ದೇಶಕರು ಮತ್ತು ಪಾಲುದಾರರ ವಿವರಗಳನ್ನು ಸೇರಿಸಿ ಅಗತ್ಯ ದಾಖಲೆಗಳು ಮತ್ತು ಸ್ವಯಂ ಪ್ರಮಾಣೀಕರಣವನ್ನು ಅಪ್ಲೋಡ್ ಮಾಡಿ ಕಂಪನಿಯ ಸ್ಥಾಪನೆ ಮತ್ತು ನೋಂದಣಿ ಪ್ರಮಾಣಪತ್ರವನ್ನು ಸಲ್ಲಿಸಿ ತೀರ್ಮಾನ ಮಾರುಕಟ್ಟೆಯಲ್ಲಿ ಅರಳಲು ಬಯಸುವ ಉದ್ಯಮಗಳಿಗೆ ಸ್ಟಾರ್ಟಪ್ ಇಂಡಿಯಾ ಉತ್ತಮ ಅವಕಾಶವಾಗಿದೆ. ಸ್ಟಾರ್ಟ್‌ಅಪ್ ಇಂಡಿಯಾ ಯೋಜನೆಯ ಸಹಾಯದಿಂದ ನಿಮ್ಮ ಸ್ವಂತ ವ್ಯವಹಾರವನ್ನು ಪ್ರಾರಂಭಿಸಿ. ಒಬ್ಬ ವಾಣಿಜ್ಯೋದ್ಯಮಿ ಸ್ಟಾರ್ಟ್–ಅಪ್ ಯೋಜನೆಯಲ್ಲಿ ನೋಂದಣಿಯನ್ನು ವಾಣಿಜ್ಯೋದ್ಯಮಿಯಾಗಿ, ಕಂಪನಿ ನೋಂದಣಿ ಪ್ರಕ್ರಿಯೆಯನ್ನು ತಪ್ಪಿಸಲು ಸಾಧ್ಯವಿಲ್ಲ. ಆದಾಗ್ಯೂ, ಸಂಪೂರ್ಣ ಪ್ರಕ್ರಿಯೆಯನ್ನು ಸರ್ಕಾರದ ಸ್ಟಾರ್ಟ್ ಅಪ್ ಯೋಜನೆಯೊಂದಿಗೆ ಸರಳಗೊಳಿಸಬಹುದು. ಒಂದೇ ಸಭೆ ಮತ್ತು ಸರಳ ಅಪ್ಲಿಕೇಶನ್ ಮೂಲಕ ನೀವು ಸ್ಟಾರ್ಟ್–ಅಪ್ ನೋಂದಣಿ ಹಬ್ ಮೂಲಕ ನಿಮ್ಮ ಕಂಪನಿಯನ್ನು ನೋಂದಾಯಿಸಬಹುದು.

### ಈ ಯೋಜನೆಯ ಮೂಲಕ ಸಂಪನ್ಮೂಲ ರಚನೆ

ಸ್ಟಾರ್ಟ್ ಅಪ್ ಇಂಡಿಯಾ ಯೋಜನೆಯು ಅತ್ಯುತ್ತಮ ನೆಟ್‌ವರ್ಕಿಂಗ್ ಅವಕಾಶಗಳನ್ನು ನೀಡುತ್ತದೆ. ಈ ಯೋಜನೆಯಡಿ ಪ್ರತಿ ವರ್ಷ ಎರಡು ಉತ್ಸವಗಳನ್ನು ದೇಶೀಯ ಕಂಪನಿಗಳಿಗೆ ಮತ್ತು ಇನ್ನೊಂದು ಅಂತರಾಷ್ಟ್ರೀಯವಾಗಿ ನಡೆಸಲಾಗುತ್ತದೆ. ಈ ಉತ್ಸವಗಳಲ್ಲಿ, ಯುವ ಉದ್ಯಮಿಗಳು ಇತರ ಉದ್ಯಮಿಗಳೊಂದಿಗೆ ಸಂಪರ್ಕ ಸಾಧಿಸಲು, ನೆಟ್‌ವರ್ಕ್ ಮತ್ತು ಸಂಪನ್ಮೂಲಗಳನ್ನು ಅಭಿವೃದ್ಧಿಪಡಿಸಲು ಅವಕಾಶಗಳನ್ನು ಪಡೆಯುತ್ತಾರೆ. ಭಾರತ ಸರ್ಕಾರವು ನೀಡುವ ಸ್ಟಾರ್ಟ್–ಅಪ್ ಯೋಜನೆಯಡಿಯಲ್ಲಿ, ಕಂಪನಿಯ ಮುಕ್ತಾಯವು ಸಂಪನ್ಮೂಲಗಳ ಮರು–ಹಂಚಿಕೆಗೆ ಸುಲಭವಾಗುವಂತೆ ಸರಳವಾಗುತ್ತದೆ. ಸಂಪನ್ಮೂಲವನ್ನು ಹೆಚ್ಚು ಉತ್ಪಾದಕ ಮೂಲಕ್ಕೆ ನಿಯೋಜಿಸಬಹುದು. ನವೀನ ಕಲ್ಪನೆಯಲ್ಲಿ ಹೂಡಿಕೆ ಮಾಡಬಹುದಾದ ಯುವ ಉದ್ಯಮಿಗಳಿಗೆ ಇದು ಉತ್ತೇಜನಕಾರಿಯಾಗಿದೆ ಮತ್ತು ವ್ಯವಹಾರವು ಯಶಸ್ವಿಯಾಗಲು ವಿಫಲವಾದರೆ ಸಂಕೀರ್ಣ ನಿರ್ಗಮನ ಪ್ರಕ್ರಿಯೆಯ ಬಗ್ಗೆ ಚಿಂತಿಸಬೇಡಿ.

### ಸ್ಟಾರ್ಟ್‌ಅಪ್ ಮೂಲಕ ಅವಕಾಶಗಳು

ಸ್ಟಾರ್ಟ್‌ಅಪ್ ಮೂಲಕ ಉದ್ಯಮಿಯಾಗುವ ಕನಸು ಕಾಣುತ್ತಿರುವವರಿಗೆ ಇಂದು ಸಾಕಷ್ಟು ಅವಕಾಶಗಳು ಇವೆ. ನಿಮ್ಮ ಹೂಡಿಕೆ ಸಾಮರ್ಥ್ಯಕ್ಕೆ ತಕ್ಕಂತೆ ಪುಟ್ಟದಾಗಿ ಕಂಪನಿಯೊಂದನ್ನು ಆರಂಭಿಸಿ ದೊಡ್ಡದಾಗಿ ಬೆಳೆಸುವ ಅವಕಾಶವಿದೆ. ಬಿಸ್ನೆಸ್ ಆರಂಭಕ್ಕೆ ಭಾರತ ಸೂಕ್ತ ಸ್ಥಳ. ದೇಶದಲ್ಲಿಂದು ಸಾಕಷ್ಟು ಸ್ಟಾರ್ಟ್‌ಅಪ್‌ಗಳು ಯಶಸ್ವಿಯಾಗಿವೆ. ಕೆಲವೊಂದು ಸ್ಟಾರ್ಟ್‌ಅಪ್‌ಗಳು ಉತ್ಸಾಹದಿಂದ ಆರಂಭಗೊಂಡಿದ್ದರೂ, ಯಶಸ್ಸು ಕಾಣಲು ವಿಫಲವಾಗಿವೆ. ನವೋದ್ಯಮ ಆರಂಭ ಎಂದರೆ ಹಲವು ಹತ್ತು ಲಕ್ಷ ರೂ. ಸಾಲ ಮಾಡಿ ಕೆಲವು ವರ್ಷ ಬೇಕಾಬಿಟ್ಟಿ ನಡೆಸುವ ವ್ಯವಹಾರವಲ್ಲ. ಅಲ್ಲಿ ನಿಮ್ಮ ಕಠಿಣ ಪರಿಶ್ರಮ, ಬದ್ಧತೆ ಅತ್ಯಂತ ಅಗತ್ಯವಾಗಿದೆ. ಜೊತೆಗೆ, ನಿಮ್ಮ ತಂಡಕ್ಕೆ ಎಷ್ಟು ಬದ್ಧತೆ ಇದೆ ಎಂದು ತಿಳಿದುಕೊಳ್ಳಿ. ಹೀಗಾಗಿ, ಸಾಕಷ್ಟು ಯೋಚನೆ, ರಿಸರ್ಚ್ ಮಾಡಿಯೇ ನವೋದ್ಯಮಕ್ಕೆ ಕ್ಷೇತ್ರಕ್ಕೆ ತೆರಳುವುದು ಉತ್ತಮ.

### ಸ್ಟಾರ್ಟ್‌ಅಪ್ ಯಾವೆಲ್ಲ ಯೋಜನೆಗಳನ್ನು ರೂಪಿಸಬಹುದು

#### 1. ಅಟಲ್ ಇನ್ನೋವೇಶನ್ ಮಿಷನ್ (AIM)

2016 ರಲ್ಲಿ, NITI ಆಯೋಗ್ ಈ ಸ್ಟಾರ್ಟ್‌ಅಪ್ ಇಂಡಿಯಾ ಯೋಜನೆ, ಅಟಲ್ ಇನ್ನೋವೇಶನ್ ಮಿಷನ್ ಅನ್ನು ಪ್ರಾರಂಭಿಸಿತು . ಹಲವಾರು ಆರ್ಥಿಕ ಕ್ಷೇತ್ರಗಳಲ್ಲಿ ಅಭಿವೃದ್ಧಿಯನ್ನು ಬೆಂಬಲಿಸಲು ಹೊಸ ಕಾರ್ಯಕ್ರಮಗಳು ಮತ್ತು ನೀತಿಗಳನ್ನು ರಚಿಸುವ ಮೂಲಕ ನಾವೀನ್ಯತೆಯನ್ನು ಉತ್ತೇಜಿಸಲು ಸಂಸ್ಥೆಯು ಈ ಯೋಜನೆಯನ್ನು ಸ್ಥಾಪಿಸಿದೆ.

ಈ ಸರ್ಕಾರಿ ಸ್ಟಾರ್ಟಪ್ ಯೋಜನೆಯು ಉದ್ಯಮಶೀಲ ವಲಯದಲ್ಲಿ ಅನೇಕ ಆಟಗಾರರ ಸಹಕಾರಕ್ಕಾಗಿ ವೇದಿಕೆಯನ್ನು ಒದಗಿಸುತ್ತದೆ.

ಈ ಸ್ಟಾರ್ಟ್‌ಅಪ್ ಯೋಜನೆಯಡಿಯಲ್ಲಿ, ಐದು ವರ್ಷಗಳಲ್ಲಿ ಆಯ್ಕೆಯಾದ ಸಂಸ್ಥೆಗಳಿಗೆ AIM ಸುಮಾರು 10 ಕೋಟಿ ಹಣಕಾಸು ನೆರವು ನೀಡುತ್ತದೆ. ಆರೋಗ್ಯ, ಕೃಷಿ, ಸಾರಿಗೆ, ಶಿಕ್ಷಣ ಇತ್ಯಾದಿಗಳಲ್ಲಿ ಉದಯೋನ್ಮುಖ ಸಂಸ್ಥೆಗಳು ಈ ಯೋಜನೆಗೆ ಅರ್ಜಿ ಸಲ್ಲಿಸಬಹುದು.

#### 2. ಸ್ಟಾರ್ಟ್‌ಅಪ್ ಇಂಡಿಯಾ ಸೀಡ್ ಫಂಡ್ ಯೋಜನೆ

ತುಲನಾತ್ಮಕವಾಗಿ ಆರಂಭಿಕ ಹಂತದ ಉದ್ಯಮಗಳನ್ನು ಬೆಂಬಲಿಸುವ ಆಶಯದೊಂದಿಗೆ ಭಾರತ ಸರ್ಕಾರವು ಜನವರಿ 2021 ರಲ್ಲಿ ಸ್ಟಾರ್ಟ್‌ಅಪ್ ಇಂಡಿಯಾ ಸೀಡ್ ಫಂಡ್ ಯೋಜನೆಯನ್ನು ಪರಿಚಯಿಸಿತು. 945 ಕೋಟಿಗಳ ಒಟ್ಟು ಬಜೆಟ್‌ನೊಂದಿಗೆ , ಇದು 3600 ವ್ಯವಹಾರಗಳಿಗೆ ಮತ್ತು 300 ಇನ್‌ಕ್ಯುಬೇಟರ್‌ಗಳಿಗೆ ಹಣಕಾಸು ಒದಗಿಸುತ್ತದೆ. ಈ ಸರ್ಕಾರಿ ಸ್ಟಾರ್ಟಪ್ ಯೋಜನೆಯಡಿ ಆಯ್ಕೆಯಾದ ಉದ್ಯಮಿಗಳು 5 ಕೋಟಿಗಳವರೆಗೆ ಹಣವನ್ನು ಪಡೆಯುತ್ತಾರೆ. ಸ್ಟಾರ್ಟ್‌ಅಪ್‌ಗಳು ಪರಿಕಲ್ಪನೆಗಳು ಅಥವಾ ಪ್ರಾತ್ಯಕ್ಷಿಕೆಗಳನ್ನು ಅಭಿವೃದ್ಧಿಪಡಿಸಲು 20 ಲಕ್ಷದವರೆಗೆ ಮತ್ತು ತಮ್ಮ ಸರಕು ಅಥವಾ ಸೇವೆಗಳನ್ನು ಬೆಳೆಸಲು 50 ಲಕ್ಷದವರೆಗೆ ಅನುದಾನವನ್ನು ಪಡೆಯುತ್ತವೆ.

#### 3. ಸ್ಟಾರ್ಟ್‌ಅಪ್ ಇಂಡಿಯಾ ಇನಿಶಿಯೇಟಿವ್

ಜೂನ್ 2021 ರ ಹೊತ್ತಿಗೆ, ಭಾರತದಲ್ಲಿ ಈ ಆರಂಭಿಕ ಯೋಜನೆಯ ಮೂಲಕ 50,000 ಕ್ಕೂ ಹೆಚ್ಚು ಸಂಸ್ಥೆಗಳನ್ನು ಗುರುತಿಸಲಾಗಿದೆ, ಇದು

ಉದ್ಯಮಿಗಳಿಗೆ ಐದು ವರ್ಷಗಳಿಗಿಂತ ಸ್ವಲ್ಪ ಹೆಚ್ಚು ಕಾಲ ತೆರಿಗೆ ಪ್ರಯೋಜನಗಳನ್ನು ಒದಗಿಸುತ್ತದೆ. ಹೆಚ್ಚುವರಿಯಾಗಿ, ಇದು 5.5ಐ ಉದ್ಯೋಗಗಳನ್ನು ಸಹ ಸೃಷ್ಟಿಸಿದೆ. ಈ ಸರ್ಕಾರಿ ಸ್ಟಾರ್ಟಪ್ ಯೋಜನೆಯೊಳಗೆ, ಹೆಚ್ಚು ಅರ್ಹವಾದ ಸ್ಟಾರ್ಟ್‌ಅಪ್‌ಗಳಿಗೆ ಗರಿಷ್ಠ ವಯಸ್ಸು ಈಗ 7 ವರ್ಷಗಳು ಮತ್ತು ಜೈವಿಕ ತಂತ್ರಜ್ಞಾನ ಕಂಪನಿಗಳಿಗೆ ಸ್ಥಾಪನೆಯ ದಿನಾಂಕದಿಂದ 10 ವರ್ಷಗಳು. ಇದರ ಹಲವಾರು ಪ್ರಯೋಜನಗಳು ವ್ಯಾಪಾರ ಮಾಲೀಕರಿಗೆ ಅತ್ಯಂತ ನಂಬಲಾಗದ ಸರ್ಕಾರಿ ಪ್ರಾಯೋಜಿತ ಸ್ಟಾರ್ಟ್‌ಅಪ್ ಇಂಡಿಯಾ ಯೋಜನೆಯಾಗಿದೆ.

### 4. ಆತ್ಮನಿರ್ಭರ್ ಭಾರತ್ ಆಪ್ ಇನ್ನೋವೇಶನ್ ಚಾಲೆಂಜ್

ಜುಲೈ 2020 ರಲ್ಲಿ ಪರಿಚಯಿಸಲಾಯಿತು, ಈ ಸರ್ಕಾರಿ ಸ್ಟಾರ್ಟ್‌ಅಪ್ ಯೋಜನೆಯು ಭಾರತೀಯ ಸ್ಟಾರ್ಟ್‌ಅಪ್‌ಗಳನ್ನು ಸಹಯೋಗಿಸಲು ಮತ್ತು ಭಾರತದಲ್ಲಿ ತಯಾರಿಸಿದ ಪರಿಹಾರಗಳನ್ನು ರಚಿಸಲು ಪ್ರೋತ್ಸಾಹಿಸಿತು – ದೇಶ ಮತ್ತು ವಿಶ್ವಾದ್ಯಂತ ಇರುವವರ ಅನುಕೂಲಕ್ಕಾಗಿ. ದೊಡ್ಡ ನಗದು ಬಹುಮಾನಕ್ಕಾಗಿ ಅತ್ಯಾಧುನಿಕ ಮೊಬೈಲ್ ಅಪ್ಲಿಕೇಶನ್‌ಗಳನ್ನು ಉತ್ಪಾದಿಸಲು ಇದು ಟೆಕ್ ಮತ್ತು ಸ್ಟಾರ್ಟ್‌ಅಪ್ ಸಂಸ್ಥೆಗಳನ್ನು ಒತ್ತಾಯಿಸಿತು. ಚಿಂಗಾರಿ (ಟಿಕ್‌ಟಾಕ್ ಸಮಾನ), ಯುವರ್‌ಕೋಟ್ (ಬರವಣಿಗೆ ಅಪ್ಲಿಕೇಶನ್), ಮತ್ತು ಕೂ (ಟ್ವಿಟರ್ ಸಮಾನ) ನಂತಹ ಅಪ್ಲಿಕೇಶನ್‌ಗಳು ಕ್ರಮವಾಗಿ ಮೊದಲ (₹20ಐ), ಎರಡನೇ (₹15ಐ) ಮತ್ತು ಮೂರನೇ (₹10ಐ) ಕಿರೀಟವನ್ನು ಪಡೆದಿವೆ.

### 5. ಜಬದ ಪೋರ್ಟಲ್

eBiz ಸರ್ಕಾರದಿಂದ ವ್ಯವಹಾರದ ಸಹಯೋಗಕ್ಕಾಗಿ (G2B) ಮೊದಲ ಆನ್‌ಲೈನ್ ವೇದಿಕೆಯಾಗಿದೆ. ಇನ್ಫೋಸಿಸ್‌ನಿಂದ ರಚಿಸಲ್ಪಟ್ಟಿದೆ, ಇದು ರಾಷ್ಟ್ರವನ್ನು ಆಧುನೀಕರಿಸಲು ಸಹಾಯ ಮಾಡಿತು ಮತ್ತು ಭಾರತದ ಎಲ್ಲಾ ವ್ಯಾಪಾರ ಹೂಡಿಕೆದಾರರು ಮತ್ತು ಉದ್ಯಮಿಗಳಿಗೆ ಸಂವಹನಕ್ಕಾಗಿ ಕೇಂದ್ರಬಿಂದುವಾಗಿ ಕಾರ್ಯನಿರ್ವಹಿಸುತ್ತದೆ.

ಈ ವೇದಿಕೆಯು ಐದು ಪ್ರತ್ಯೇಕ ಭಾರತೀಯ ರಾಜ್ಯಗಳಲ್ಲಿ 29 ಸೇವೆಗಳನ್ನು ಪರಿಚಯಿಸಿದೆ: ನವದೆಹಲಿ, ತಮಿಳುನಾಡು, ಆಂಧ್ರ ಪ್ರದೇಶ, ಹರಿಯಾಣ ಮತ್ತು ಮಹಾರಾಷ್ಟ್ರ. ಕ್ರಮೇಣ, ಯೋಜನೆಯ ಸೇವೆಗಳನ್ನು ಕಾಲಾನಂತರದಲ್ಲಿ ವಿಸ್ತರಿಸಲು ಸರ್ಕಾರ ಉದ್ದೇಶಿಸಿದೆ.

### 6. ಸಾಫ್ಟ್‌ವೇರ್ ಟೆಕ್ನಾಲಜಿ ಪಾರ್ಕ್ (STP)

ಸಾಫ್ಟ್‌ವೇರ್ ಟೆಕ್ನಾಲಜಿ ಪಾರ್ಕ್ (STP) ಎನ್ನುವುದು ಭೌತಿಕ ಮಾಧ್ಯಮ ಅಥವಾ ಸಂವಹನ ಮೂಲ ಸೌಕರ್ಯದ ಮೂಲಕ ಕಂಪ್ಯೂಟರ್ ಸಾಫ್ಟ್‌ವೇರ್ ಮತ್ತು ತಾಂತ್ರಿಕ ಸೇವೆಗಳನ್ನು ಹೆಚ್ಚಿಸಲು ಮತ್ತು ರಫ್ತು ಮಾಡಲು 100% ರಫ್ತು-ಆಧಾರಿತ ವ್ಯವಸ್ಥೆಯಾಗಿದೆ. ಒಂದು ವ್ಯಾಪಾರ ಅಥವಾ ಉತ್ಪನ್ನದ ಮೇಲೆ ಕೇಂದ್ರೀಕರಿಸುವುದು, ಮುಖ್ಯವಾಗಿ ಕಂಪ್ಯೂಟರ್ ಸಾಫ್ಟ್‌ವೇರ್, ಕೋರ್ಸ್ ವಸ್ತುವನ್ನು ವಿಶಿಷ್ಟವಾಗಿಸುತ್ತದೆ. ಸರ್ಕಾರದ ಕಾರ್ಯಕ್ರಮದ ಉಪಕ್ರಮವು ರಫ್ತು ಸಂಸ್ಕರಣಾ ವಲಯಗಳ (EPZ) ಕಲ್ಪನೆ ಮತ್ತು ವಿಜ್ಞಾನ ಉದ್ಯಾನವನಗಳು ಅಥವಾ ತಂತ್ರಜ್ಞಾನ ಉದ್ಯಾನವನಗಳ ಸಲಹೆಯನ್ನು ಒಳಗೊಂಡಿದೆ, ಇವು ಪ್ರಸ್ತುತ ವಿಶ್ವಾದ್ಯಂತ ಬಳಕೆಯಲ್ಲಿವೆ.

### 7. ಡೈರಿ ಸಂಸ್ಕರಣೆ ಮತ್ತು ಮೂಲಸೌಕರ್ಯ ಅಭಿವೃದ್ಧಿ ನಿಧಿ (DIDF)

ಇದು ಡೈರಿ ಸಹಕಾರಿ ಸಂಘಗಳು ರೈತರ ದೀರ್ಘಾವಧಿಯ ಪ್ರಯೋಜನಕ್ಕಾಗಿ ತಮ್ಮ ಸ್ಪರ್ಧಾತ್ಮಕ ಅಂಚನ್ನು ಕಾಪಾಡಿಕೊಳ್ಳಲು ಸಹಾಯ ಮಾಡುತ್ತದೆ. ಒಟ್ಟು ₹11,184 ಕೋಟಿ ವೆಚ್ಚದಲ್ಲಿ ಡೈರಿ ಸಂಸ್ಕರಣೆ ಮತ್ತು ಮೂಲಸೌಕರ್ಯ ಅಭಿವೃದ್ಧಿ ನಿಧಿಯನ್ನು ರಚಿಸುವುದಾಗಿ ಸರ್ಕಾರ ಘೋಷಿಸಿತು. ಹಾಲು-ಉತ್ಪಾದಿಸುವ ವ್ಯವಹಾರಗಳು, ಬಹು-ರಾಜ್ಯ ಹಾಲು ಸಹಕಾರಿ ಸಂಸ್ಥೆಗಳು, ರಾಜ್ಯ ಡೈರಿ ಫೆಡರೇಶನ್‌ಗಳು, ಓಆಊ ಅಂಗಸಂಸ್ಥೆಗಳು ಮತ್ತು ಮುಂತಾದವು ಈ ಯೋಜನೆಗೆ ಅರ್ಹವಾಗಿವೆ.

### 8. ಮುದ್ರಾ ಬ್ಯಾಂಕುಗಳು

ಮೈಕ್ರೋ ಯೂನಿಟ್ಸ್ ಡೆವಲಪ್‌ಮೆಂಟ್ ರಿಫೈನಾನ್ಸ್ ಏಜೆನ್ಸಿ (ಮುದ್ರಾ) ಸಾಲದ ಲಭ್ಯತೆಯನ್ನು ಹೆಚ್ಚಿಸುತ್ತದೆ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಸಣ್ಣ ವ್ಯಾಪಾರ ಬೆಳವಣಿಗೆಯನ್ನು ಉತ್ತೇಜಿಸುತ್ತದೆ. ಈ ಸರ್ಕಾರಿ ಯೋಜನೆಯ ಪ್ರಾಥಮಿಕ ಗುರಿ: ಬೆಳೆಯಲು ಬಯಸುವ ಸಣ್ಣ ಭಾರತೀಯ ವ್ಯಾಪಾರಗಳಿಗೆ ಸಹಾಯ ಮಾಡಿ. ಮುದ್ರ ಬ್ಯಾಂಕ್‌ಗಳು ಫಾರ್ಮ್‌ಗಳು, ಮೈಕ್ರೊ ಎಂಟರ್‌ಪ್ರೈಸಸ್ ಅಥವಾ ಕಾರ್ಪೊರೇಷನ್‌ಗಳಲ್ಲದ ಸಣ್ಣ ವ್ಯಾಪಾರಗಳಿಗೆ ₹10 ಲಕ್ಷದವರೆಗಿನ ಮೊತ್ತದಲ್ಲಿ ಸಾಲವನ್ನು ನೀಡುತ್ತವೆ. ಸಾಲದ ವರ್ಗಗಳನ್ನು ತರುಣ್, ಶಿಶು ಮತ್ತು ಕಿಶೋರ್ ಎಂದು ಕರೆಯಲಾಗುತ್ತದೆ.

### 9. ಮೈಕ್ರೋ ಮತ್ತು ಸಣ್ಣ ಉದ್ಯಮಗಳಿಗೆ ಕ್ರೆಡಿಟ್ ಗ್ಯಾರಂಟಿ ಫಂಡ್ ಟ್ರಸ್ಟ್

ಅಲುಖಿಒಖಇ ಸ್ಟಾರ್ಟ್‌ಅಪ್ ಇಂಡಿಯಾ ಸ್ಕೀಮ್ ಒಖಒಇ ಸಂಸ್ಥೆಗಳಿಗೆ ಶೂನ್ಯ ಮೇಲಾಧಾರ ವ್ಯಾಪಾರ ಸಾಲಗಳನ್ನು ನೀಡುತ್ತದೆ, ಇತರ ಸಾಲಗಳ ಜೊತೆಗೆ. ಇದರ ಮೇಲಾಧಾರದ ಅಗತ್ಯವಿಲ್ಲದೆಯೇ ಹೆಚ್ಚಿನ ರಿಯಾಯಿತಿ ಬಡ್ಡಿದರಗಳಲ್ಲಿ ಸಾಲಗಳನ್ನು ಪಡೆಯಲು ವ್ಯವಹಾರಗಳಿಗೆ ಅವಕಾಶ ನೀಡುವುದು ಗುರಿಯಾಗಿದೆ.

ಹೊಸ ಉದ್ಯಮಗಳನ್ನು ಉತ್ತೇಜಿಸಲು ಮತ್ತು ಅಸ್ತಿತ್ವದಲ್ಲಿರುವ ಉದ್ಯಮಗಳನ್ನು ಪುನಶ್ಚೇತನಗೊಳಿಸಲು, ಸರ್ಕಾರವು SIDBI (ಭಾರತದ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ಬ್ಯಾಂಕ್) ಜೊತೆಗೆ ಗರಿಷ್ಠ ₹100 ಲಕ್ಷಗಳನ್ನು ನೀಡಲು ಯೋಜಿಸಿದೆ.

### 10. ಮಲ್ಟಿಪ್ಲೈಯರ್ ಅನುದಾನ ಯೋಜನೆ (MGS)

ಮಲ್ಟಿಪ್ಲೈಯರ್ ಗ್ರ್ಯಾಂಟ್ಸ್ ಸ್ಕೀಮ್ (MGS), ಎಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ ಇಲಾಖೆಯಿಂದ ಅಭಿವೃದ್ಧಿಪಡಿಸಲಾಗಿದೆ, ಶೈಕ್ಷಣಿಕ ಅಥವಾ ಸಂಸ್ಥೆಗಳು ಮತ್ತು ಟೆಕ್ ಉದ್ಯಮದ ನಡುವಿನ ಸಂಶೋಧನೆ ಮತ್ತು ಅಭಿವೃದ್ಧಿ (R&D) ಪಾಲುದಾರಿಕೆಯನ್ನು ಪ್ರೋತ್ಸಾಹಿಸುತ್ತದೆ. ಈ ಯೋಜನೆಯ ಗುರಿಯು ಸ್ಥಳೀಯ ಉತ್ಪನ್ನಗಳು ಮತ್ತು ಸೇವೆಗಳ ಅಭಿವೃದ್ಧಿಯನ್ನು ಉತ್ತೇಜಿಸುವುದು ಮತ್ತು ಉತ್ತೇಜಿಸುವುದು.

### ಸ್ಟಾರ್ಟ್ ಅಪ್ ಇಂಡಿಯಾ ಎದುರಿಸುತ್ತಿರುವ ಸವಾಲುಗಳು

1. ಜನರು ಸಾಮಾನ್ಯವಾಗಿ ಸ್ಟಾರ್ಟ್‌ಅಪ್‌ಗಳು ಕೇವಲ ಹೊಸ ಆಲೋಚನೆ ಅಥವಾ ಯೋಜನೆಯ ಬಗ್ಗೆ ಯೋಚಿಸುತ್ತಾರೆ ಎಂದು ನಂಬುತ್ತಾರೆ. ಆದರೆ ವಾಸ್ತವದಲ್ಲಿ, ಅಂತಹ ಯೋಜನೆಯನ್ನು ಕಾರ್ಯಗತಗೊಳಿಸುವುದು ಅದರ ಬಗ್ಗೆ ಯೋಚಿಸುವುದಕ್ಕಿಂತ

ಸ್ವಾಭಿಮಾನಿ ಸಹಕಾರಿ

Swabhimani Sahakari, Kannada, English Monthly, Publishing Date 5th, Posting Day 8th posted at Bangalore PSO, Mysore Road, Bangalore-560026
Registered No. KA/BGW/1744/2023-2025 RNI NO. KARBIL-2004/18001/Pages 32
Licensed to post without Prepayment License No. PMG BG/WPP-384/2023-2025.

ಹೆಚ್ಚು ಅವಶ್ಯಕವಾಗಿದೆ.

2. ಸ್ಟಾರ್ಟಪ್ ಇಂಡಿಯಾ ಯೋಜನೆಯಲ್ಲಿ ಸರ್ಕಾರದ ದೃಷ್ಟಿಕೋನ ಅಥವಾ ದೃಷ್ಟಿಕೋನವು ಪ್ರಕೃತಿಯಲ್ಲಿ ಸಾಕಷ್ಟು ಅಲ್ಪಾವಧಿಯದ್ದಾಗಿದೆ. ಇದು ಸ್ಟಾರ್ಟಪ್‌ಗಳ ದೀರ್ಘಾವಧಿಯ ಹಾದಿಯನ್ನು ನೋಡುವುದಿಲ್ಲ.
3. ಯಾವುದೇ ಹೊಸ ವ್ಯವಹಾರದ ಯಶಸ್ಸಿಗೆ, ಸಮರ್ಥ ಉದ್ಯೋಗಿಗಳ ಅಗತ್ಯವಿದೆ. ಆದರೆ ಸ್ಟಾರ್ಟ್‌ಅಪ್‌ಗಳ ಸಂದರ್ಭದಲ್ಲಿ, ಆರಂಭಿಕ ಹಂತದಲ್ಲಿ ಹಣದ ಕೊರತೆಯಿಂದಾಗಿ ನುರಿತ ಉದ್ಯೋಗಿಗಳು ಸಾಧ್ಯವಿಲ್ಲ.
4. ಇತರ ಸಂಸ್ಥೆಗಳಿಗೆ ಹೋಲಿಸಿದರೆ ಸ್ಟಾರ್ಟಪ್‌ಗಳಲ್ಲಿ ವೈಫಲ್ಯವನ್ನು ತಲುಪುವ ಅಪಾಯ ಹೆಚ್ಚು. ಏಕೆಂದರೆ ಅವರು ಸಾಕಷ್ಟು ವೇಗವಾಗಿ ಕ್ರಮಗಳನ್ನು ತೆಗೆದುಕೊಳ್ಳುತ್ತಾರೆ.

ಈ ಯೋಜನೆಯಡಿಯಲ್ಲಿ, ಸರ್ಕಾರವು ಪ್ರತಿ ಯೋಜನೆಗೆ ₹2 ಕೋಟಿಗಳವರೆಗೆ ಹಣಕಾಸು ನೀಡಬಹುದು ಮತ್ತು ಪ್ರತಿ ಯೋಜನೆಯ ಅವಧಿಯು ಎರಡು ವರ್ಷಗಳಿಗಿಂತ ಕಡಿಮೆಯಿರುವ ನಿರೀಕ್ಷೆಯಿದೆ. ಮೂರು ವರ್ಷಗಳಲ್ಲಿ ಕೈಗಾರಿಕಾ ಸಂಸ್ಥೆಗಳಿಗೆ ₹ 4 ಕೋಟಿ ವೆಚ್ಚವಾಗಲಿದೆ.

ಭವಿಷ್ಯವು ನವೋದ್ಯಮ–ಚಾಲಿತ ಜ್ಞಾನದ ಆರ್ಥಿಕತೆಯಲ್ಲಿದ್ದು, ಇದು ಸ್ಟಾರ್ಟ್‌ಅಪ್‌ಗಳ ನೇತೃತ್ವದಲ್ಲಿದೆ. ಭಾರತವು ದೃಢವಾದ ಸ್ಟಾರ್ಟ್‌ಅಪ್ ಪರಿಸರ ವ್ಯವಸ್ಥೆಯ ಏರಿಕೆಗೆ ಸಾಕ್ಷಿಯಾಗಿದೆ.

ದೇಶವು ವಿಶ್ವದ ಮೂರನೇ ಅತಿದೊಡ್ಡ ಸ್ಟಾರ್ಟ್‌ಅಪ್‌ಗಳ ನೆಲೆಯಾಗಿದೆ. ಇಂದು, ಭಾರತವು 60,000ಕ್ಕೂ ಹೆಚ್ಚು ಸ್ಟಾರ್ಟ್‌ಅಪ್‌ಗಳನ್ನು ಹೊಂದಿದೆ. 2014 ಮತ್ತು 2021ರ ನಡುವೆ ಸಂಚಿತ ಯುಎಸ್‌ಡಿ 112 ಬಿಲಿಯನ್ ಸಂಗ್ರಹಿಸಿದೆ. ಈ ಮೊತ್ತದಲ್ಲಿ ಯುಎಸ್‌ಡಿ 40ಕ್ಕೂ ಹೆಚ್ಚು ಬಿಲಿಯನ್ ಅನ್ನು 2021ರಲ್ಲಿ ಮಾತ್ರ ಸಂಗ್ರಹಿಸಲಾಗಿದೆ. ಸ್ಟಾರ್ಟ್‌ಅಪ್ ಪರಿಸರ ವ್ಯವಸ್ಥೆಯು ಇಂದು ಯುಎಸ್‌ಡಿ 450ಕ್ಕೂ ಹೆಚ್ಚು ಬಿಲಿಯನ್ ಸಾಮೂಹಿಕ ಮೌಲ್ಯವನ್ನು ಹೊಂದಿದೆ. ಭಾರತವು ವಿಶ್ವದಲ್ಲಿ ಮೂರನೇ–ಅತಿದೊಡ್ಡ ಸಂಖ್ಯೆಯಲ್ಲಿ(85) ಯುನಿಕಾರ್ನ್‌ಗಳನ್ನು ಹೊಂದಿದೆ (1 ಬಿಲಿಯನ್ ಯುಎಸ್‌ಡಿ ಗಿಂತಲೂ ಹೆಚ್ಚಿನ ಮೌಲ್ಯವನ್ನು ಹೊಂದಿರುವ ಕಂಪನಿಗಳು). ಇದರಲ್ಲಿ 42 ಕಂಪನಿಗಳು 2021 ರಲ್ಲಿ ಆ ಮೌಲ್ಯಮಾಪನವನ್ನು ತಲುಪಿವೆ. 2025 ಅಥವಾ 2026 ರ ವೇಳೆಗೆ, ಭಾರತವು 100,000 ಸ್ಟಾರ್ಟ್‌ಅಪ್‌ಗಳನ್ನು ಹೊಂದಿ, 3.25 ಮಿಲಿಯನ್ ಜನರಿಗೆ ಉದ್ಯೋಗ ನೀಡುತ್ತದೆ ಎಂದು ಅಂದಾಜಿಸಲಾಗಿದೆ. ಈ ಸಂಖ್ಯೆಗಳೊಂದಿಗೆ, ಭಾರತವು ಯುಎಸ್ ನಂತರ 2ನೇ ಸ್ಥಾನದಲ್ಲಿ ನಿಲ್ಲುತ್ತದೆ. ಈ ಸ್ಟಾರ್ಟ್‌ಅಪ್‌ಗಳು 2025 ರಲ್ಲಿ ಯುಎಸ್‌ಡಿ 500 ಬಿಲಿಯನ್ ಮಾರುಕಟ್ಟೆ ಮೌಲ್ಯವನ್ನು ತಲುಪುವ ಸಾಮರ್ಥ್ಯವನ್ನು ಹೊಂದಿವೆ.

ಕರ್ನಾಟಕ ಈಗಾಗಲೇ ಇಂತಹ ಪರಿಸರ ವ್ಯವಸ್ಥೆಯಲ್ಲಿ ಮುಂಚೂಣಿಯಲ್ಲಿರುವ ರಾಜ್ಯವಾಗಿದೆ. ಹಣಕಾಸು, ಐಟಿ ಸೇವೆಗಳು ಮತ್ತು ಇತರ ಹೆಚ್ಚಿನ ಮೌಲ್ಯವರ್ಧಿತ ಕ್ಷೇತ್ರಗಳಲ್ಲಿ ಅದರ ಸಾಮರ್ಥ್ಯದೊಂದಿಗೆ, ಈ ವಲಯಗಳಲ್ಲಿನ ಸ್ಟಾರ್ಟ್‌ಅಪ್‌ಗಳು ರಾಜ್ಯ ಮತ್ತು ದೇಶದಲ್ಲಿ ಮಾರುಕಟ್ಟೆ ನಾಯಕರಾಗಿ ತ್ವರಿತವಾಗಿ ಬೆಳೆಯುತ್ತಿದ್ದು, ಇವು ಜಾಗತಿಕವಾಗಿಯೂ ತಮ್ಮ ಛಾಪು ಮೂಡಿಸುತ್ತಿವೆ. ಭಾರತೀಯ ಒಟ್ಟು ಸ್ಟಾರ್ಟ್‌ಅಪ್ ಪರಿಸರ ವ್ಯವಸ್ಥೆಯಲ್ಲಿ ಬೆಂಗಳೂರು ಶೇಕಡ 40 ರಷ್ಟನ್ನು ಹೊಂದಿದೆ. ಇದು ಪ್ರಾಥಮಿಕ ಹಂತದ ನಿಧಿಗಾಗಿ, ಬೆಳವಣಿಗೆಯ ಹಂತದ ನಿಧಿಗಾಗಿ ಮತ್ತು ಅತಿ ಹೆಚ್ಚು ಸಂಖ್ಯೆಯ ಯುನಿಕಾರ್ನ್‌ಗಳಿಗೆ 34 (ಭಾರತದ ಒಟ್ಟು 85 ರಲ್ಲಿ) ಬೆಂಗಳೂರು ಪ್ರಮುಖ ತಾಣವಾಗಿದೆ. ಹಣಕಾಸು ವರ್ಷ 2021 ರಲ್ಲಿ, ನಗರವು ಯುಎಸ್‌ಡಿ 21.3 ಬಿಲಿಯನ್ (ಭಾರತದ ಯುಎಸ್‌ಡಿ 40 ಬಿಲಿಯನ್ ಅರ್ಧದಷ್ಟು) ಸಂಗ್ರಹಿಸುವ 551 ವ್ಯವಹಾರಗಳನ್ನು ಪ್ರಕ್ರಿಯೆಗೊಳಿಸಿತು. ಬೆಂಗಳೂರು ಅತಿ ಹೆಚ್ಚು ಸಂಖ್ಯೆಯ ವೆಂಚರ್ ಕ್ಯಾಪಿಟಲ್ ಫಂಡ್‌ಗಳನ್ನು ಹೊಂದಿದೆ. ರಾಷ್ಟ್ರದರಾಜಧಾನಿ ದೆಹಲಿ ಮತ್ತು ಆರ್ಥಿಕ ರಾಜಧಾನಿ ಮುಂಬೈ ಎರಡನ್ನೂ ಬೆಂಗಳೂರು ಹಿಂದಿಕ್ಕಿ ಭಾರತದ ನಿರ್ವಿವಾದದ ಇನ್ನೋವೇಶನ್ ಕ್ಯಾಪಿಟಲ್ ಆಗಿದೆ. ಸ್ಟಾರ್ಟ್‌ಅಪ್‌ಗಳಲ್ಲಿ ಹೂಡಿಕೆ ಮಾಡಲು ಮತ್ತು ಬೆಳೆಯಲು ಕರ್ನಾಟಕವು ಫಂಡ್–ಆಫ್–ಫಂಡ್‌ಗಳನ್ನು (ಎಫ್‌ಒಎಫ್) ರಚಿಸಬೇಕು. ಭಾರತೀಯ ಸ್ಟಾರ್ಟ್‌ಅಪ್‌ಗಳು ಬೆಳೆಯಲು ರೂ.5,000 ಕೋಟಿ ಎಫ್‌ಒಎಫ್ ಭದ್ರ ಬುನಾದಿಯನ್ನು ಒದಗಿಸಬೇಕಾಗುತ್ತದೆ. ಎಫ್‌ಒಎಫ್‌ಗಾಗಿ ಕೆಲವು ಆದ್ಯತಾ ವಲಯಗಳು ಹೀಗಿವೆ: ಎ. ಫಿನ್–ಟೆಕ್ ಸ್ಟಾರ್ಟ್‌ಅಪ್‌ಗಳು ಬಿ. ಐಟಿ ಸ್ಟಾರ್ಟ್‌ಅಪ್‌ಗಳು ಈ ಕುರಿತು ಹೆಚ್ಚಿನ ಮಾಹಿತಿಗಳು ಪಡೆಯಲು : www.startupindia.gov.in ಸಂಪರ್ಕಿಸಬಹುದು.

ಕೇಂದ್ರ ಕಛೇರಿ : "ಸೌಹಾರ್ದ ಸಹಕಾರಿ ಸೌಧ" ನಂ.68, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಕೇಂದ್ರ ಕಛೇರಿ, ಒಂದನೇ ಮಹಡಿ, 17 & 18ನೇ ಅಡ್ಡರಸ್ತೆ ಮಧ್ಯೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560055 ದೂ : 080–23378375–80, 23474408, 23573291

ಸೌಹಾರ್ದ ಸಹಕಾರಿಗಳ ದಾವಾ ಪಂಚಾಯತಿ ನ್ಯಾಯಾಲಯ : "ಸೌಹಾರ್ದ ಸಹಕಾರಿ ಸೌಧ", ನಂ.68, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಕೇಂದ್ರ ಕಛೇರಿ, ಒಂದನೇ ಮಹಡಿ, 17 & 18ನೇ ಅಡ್ಡರಸ್ತೆ ಮಧ್ಯೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು ದೂ: 080–23449933/34

ಇ–ಸ್ಟಾಂಪಿಂಗ್ ವಿಭಾಗ : "ಸೌಹಾರ್ದ ಸಹಕಾರಿ ಸೌಧ", ನಂ.68, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಇ–ಸ್ಟಾಂಪಿಂಗ ವಿಭಾಗ, ನೆಲ ಮಹಡಿ, 17 & 18ನೇ ಅಡ್ಡರಸ್ತೆ ಮಧ್ಯೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560055

ಬೆಂಗಳೂರು ಪ್ರಾಂತೀಯ ಕಛೇರಿ : "ಸೌಹಾರ್ದ ಸಹಕಾರಿ ಸೌಧ", ನಂ.68, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಪ್ರಾಂತೀಯ ಕಛೇರಿ, ನೆಲ ಮಹಡಿ, 17 & 18ನೇ ಅಡ್ಡರಸ್ತೆ ಮಧ್ಯೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560055 ದೂ: 080–23525546.

ಮೈಸೂರು ಪ್ರಾಂತೀಯ ಕಛೇರಿ : ಶಂಕರ ಮಠ ರಸ್ತೆ, 2ನೇ ಕ್ರಾಸ್, ನಟರಾಜ ಸಭಾಭವನದ ಹತ್ತಿರ, ಮೈಸೂರು–570004, ದೂ: 0821–2332299

ಬೆಳಗಾವಿ ಪ್ರಾಂತೀಯ ಕಛೇರಿ : 1119/ಬಿ, ಕಣಬರ್ಗಿ ಇಂಡಸ್ಟ್ರಿಯಲ್ ಏರಿಯಾ, ರೂರಲ್ ಆಯುರ್ವೇದಿಕ ಕಾಲೇಜ ಹತ್ತಿರ, ಆಟೋ ನಗರ, ಬೆಳಗಾವಿ–590015 ದೂರವಾಣಿ: 0831–2401551.

ಕಲಬುರಗಿ ಪಾಂತೀಯ ಕಛೇರಿ : ನಿವೇಶನ ಸಂಖ್ಯೆ 2284, ಕಾಡಾ ಕಛೇರಿ ಹತ್ತಿರ, ಧರಿಯಾಪುರ ಕೊಟನೂರ, ಜಿಡಿಎ ಬಡಾವಣೆ, ಕಲಬುರಗಿ–585102. ದೂ: 08472–270222

Edited, Printed and Published by Sharangouda G. Patil - Managing Director, on behalf of karnataka state Souharda Federal Co operative Ltd., #68, 17th & 18th Cross, Margosa Road, Malleshwaram, Bengaluru-560 003